UNIVERSAL LIBRARY
OU_198537
UNIVERSAL LIBRARY

OSMANIA UNIVERSITY LIBRARY

Call No. K923.1 Accession No. K.5478

Author H15K

Title

This book should be returned on or before the date last marked below.

1943.

ಶಿವಾನುಭವ ಗ್ರಂಥಮಾಲಾ ನಂ|| ೩೧

ಕೊಡಗಿನ ಸಂಸ್ಥಾನದ

ರಾಜೇಂದ್ರನಾಮೆ.

ಸಂಪಾದಕರು:

ರಾ. ಬ. ಪಿ. ಜಿ. ಹಳಕಟ್ಟಿ, ಬಿ. ಎ., ಎಲ್. ಎಲ್. ಬಿ.

ವಿಜಾಪುರ.

೧೯೪೩

(ಇದರ ಯಾವತ್ತು ಅಧಿಕಾರವು ಕಾದಿಡಲ್ಪಟ್ಟಿದೆ.)

೧—೪—೦ ಪ್ರೂ

Checked 1969 Checked 1965

ಇದನ್ನು ವಿಜಾಪುರದಲ್ಲಿ

ರಾ. ಬ. ಪಿ. ಜಿ. ಹಳಕಟ್ಟಿ ಬಿ. ಎ., ಎಲ್. ಎಲ್. ಬಿ. ಇವರು

ತಮ್ಮ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು.

ಮತ್ತು ಅವರು ವಿಜಾಪುರದಲ್ಲಿ

ಊಪಲಿಬುರುಜದ ಹತ್ತರ ೧೬೭೦ (ಅ) ನೇ ಮನೆಯಲ್ಲಿ

ಪ್ರಕಟಿಸಿದರು.

ಪ್ರಸ್ತಾವನೆ.

ಈಗಿನ ಗ್ರಂಥವು ಕೊಡಗಿನ ಪ್ರಸಿದ್ಧ ರಾಜನಾದ ದೊಡ್ಡ ವೀರರಾಜೇಂದ್ರನು ಬರೆಯಿಸಿದ್ದಿರುತ್ತದೆ. ಈ ರಾಜನು ೧೭೮೦ ರಿಂದ ೧೮೦೯ರ ವರೆಗೆ ಕೊಡಗು ದೇಶವನ್ನಾಳಿದನು. ಕರ್ನಾಟಕ ರಾಜ್ಯಗಳಲ್ಲಿ ಆಗಿ ಹೋದ ಶೂರ ಪುರುಷರಲ್ಲಿ ಈತನೊಬ್ಬನಿದ್ದಾನೆ. ಈತನು ಒಬ್ಬ ಬಲಶಾಲಿಯಾದ ವೈರಿಯನ್ನು ಪ್ರತಿಭಟಿಸಿದ ವೀರನು. ಹೈದರ ಅಲ್ಲಿ ಮತ್ತು ಟೀಪು ಸುಲ್ತಾನರು ಕೊಡಗು ರಾಜ್ಯವನ್ನು ಆಕ್ರಮಿಸಲು ಬಹು ಶ್ರಮ ಪಟ್ಟರು. ಆದರೆ ಈ ರಾಜನ ಶೌರ್ಯ ಸಾಹಸಗಳ ಮುಂದೆ ಅವರ ಆಟವೇನೂ ಸಾಗಲಿಲ್ಲ. ಟೀಪು ಸುಲ್ತಾನನು ಪಟ್ಟವೇರಿದ ಬಳಿಕ ಅವನು ಕೊಡಗರನ್ನು ಪೂರ್ಣವಾಗಿ ನಾಶ ಮಾಡಬೇಕೆಂದು ಬಯಸಿ ಅವರಲ್ಲಿ ಅಸಂಖ್ಯ ಜನರನ್ನು ರಾಜ್ಯದ ಹೊರಗೆ ಅಟ್ಟಿ ಬಿಟ್ಟನು. ಅವನ ಈ ಹಗೆತನದ ಮೂಲಕ ವೀರ ರಾಜೇಂದ್ರನು ಇಂಗ್ಲಿಷರೊಡನೆ ಸ್ನೇಹ ಬೆಳಸಬೇಕಾಯಿತು. ಮತ್ತು ಅವರ ಸಹಾಯದಿಂದ ಕಡೆಗೆ ಅವನು ತನ್ನ ರಾಜ್ಯವನ್ನು ಉಳಿಸಿಕೊಂಡನು. ರಾಜನ ಜೀವಿತದಲ್ಲಿ ಉಂಟಾದ ಅನೇಕ ಸಂಗತಿಗಳು ಅವನಲ್ಲಿದ್ದ ಸಾಹಸ, ಧೈರ್ಯ ಮತ್ತು ತೇಜಃಪುಂಜವಾದ ವರ್ತನೆ ಇವುಗಳನ್ನು ಹೊರಪಡಿಸುತ್ತವೆ. ಅವನು ತನ್ನ ಅರಮನೆಯಲ್ಲಿ ದೊರೆತ ವೃತ್ತಾಂತಗಳ ಸಹಾಯದಿಂದ ಈ ಗ್ರಂಥವನ್ನು ಬರೆಯಿಸಿದ್ದೇನೆಂದು ಅವನು ಈ ಗ್ರಂಥದಲ್ಲಿ ಹೇಳಿದ್ದಾನೆ. ಇದರಲ್ಲಿ "ತಮ್ಮ ಕೊಡಗಿನ ಸಂಸ್ಥಾನದ ದೊರೆಗಳ ವಂಶಾವಳಿ ಪಾರಂಪರ್ಯವಾಗಿ ಪ್ರಾರಂಭ್ಯದಿಂದ ನಡೆದುಬಂದಂಥ ವೃತ್ತಾಂತ" ಗಳೆಂದು ಅವನು ಇದರಲ್ಲಿ ಹೇಳಿದ್ದಾನೆ.

ಕೊಡಗಿನ ರಾಜ್ಯವು ಇಕ್ಕೇರಿ ಅರಸರ ಸಂಬಂಧಿಕನಾದ ಒಬ್ಬ ರಾಜಕುಮಾರನಿಂದ ಮೊದಲು ಸ್ಥಾಪಿತವಾಯಿತು. ಅವನ ಹೆಸರು ವೀರರಾಜನೆಂದಿದ್ದು ಅವನು ಹಾಲೇರಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಮೇಣ ಅವನು ಇಡೀ ಕೊಡಗು ದೇಶವನ್ನು ಆಕ್ರಮಿಸಿದನು. ಈಗಿನ ಗ್ರಂಥದಲ್ಲಿಯ ವಿವರಣೆಗಳು ಅವನಿಂದ

ಪ್ರಾರಂಭವಾಗಿ ಮುಂದಿನ ರಾಜರಲ್ಲಿ ನಡೆದ ಮಹತ್ವದ ವೃತ್ತಾಂತಗಳು ಇದರಲ್ಲಿ ಹೇಳಲ್ಪಟ್ಟಿವೆ ೧೬೮೭ ರಿಂದ ೧೭೩೬ ವರೆಗೆ ಆಳಿದ ದೊಡ್ಡವೀರಪ್ಪನ ಆಳಿಕೆಯಲ್ಲಿ ಘಟಿಸಿದ ಅನೇಕ ಸಂಗತಿಗಳು ಇದರಲ್ಲಿ ಬಂದಿವೆ. ಮುಂದಿನ ರಾಜರುಗಳ ವೃತ್ತಾಂತಗಳನ್ನು ವೀರರಾಜೇಂದ್ರನು ವಿವರಿಸುತ್ತ ತನ್ನ ಕಾಲದಲ್ಲಿ ಘಟಿಸಿದ ಸಂಗತಿಗಳನ್ನು ವರ್ಣಿಸಿದ್ದಾನೆ. ಈ ವರ್ಣನೆಗಳಲ್ಲಿ ಅತಿಶಯೋಕ್ತಿಗಳೇನೂ ಇರದೆ ಘಟಿಸಿದ ನಿಜವಾದ ಸಂಗತಿಗಳೇ ಇರುತ್ತವೆ. ರಾಜೇಂದ್ರನಾಮೆ ಇದು ಕನ್ನಡದಲ್ಲಿರುವ ಒಂದು ಮಹತ್ವದ ಇತಿಹಾಸ ಗ್ರಂಥವೆಂದು ನಾವು ತಿಳಿಯಬಹುದು

ಕೊಡಗಿನಲ್ಲಿ ಕನ್ನಡ ಭಾಷೆಯು ಒಂದುವರೆ ಶತಮಾನದ ಹಿಂದೆ ಯಾವ ಸ್ವರೂಪದಲ್ಲಿತ್ತೆಂಬುದನ್ನು ಈ ಗ್ರಂಥದಿಂದ ನಾವು ಚನ್ನಾಗಿ ತಿಳಿಯಬಹುದಾಗಿದೆ. ಅಲ್ಲದೆ ಸೈನ್ಯ ಸಂಬಂಧದ ಅನೇಕ ವಿಶಿಷ್ಟ ಶಬ್ದಗಳು ಇದರಲ್ಲಿ ಬಂದಿವೆ. ಭಾಷೆಯು ಸುಲಭವೂ ಸರಳವೂ ಇರುತ್ತದೆ. ವಿವರಣೆಯಲ್ಲಿ ಅನಾವಶ್ಯಕ ವಿಷಯಗಳೇನೂ ಇರದೆ ಐತಿಹಾಸಿಕ ಮಹತ್ವದ ವಿಷಯಗಳೇ ಸ್ಫುಟವಾಗಿ ನಿರೂಪಿಸಲ್ಪಟ್ಟಿದೆ.

ಈ ಗ್ರಂಥವನ್ನು ದಿವಂಗತ ಬಿ. ರಾಮರಾಯರು ಎಂ. ಏ. ಎಲ್. ಎಲ್. ಬಿ. ರಿಟಾಯರ್ಡ ಸೀನಿಯರ್ ಟ್ರಾನ್ಸಲೇಟರ ಮದ್ರಾಸ ಇವರು ಅಚ್ಚಿಗಾಗಿ ಸಿದ್ಧಗೊಳಿಸಿ ಶಿವಾನುಭವ ಗ್ರಂಥಮಾಲೆಯಲ್ಲಿ ಪ್ರಕಟಿಸುವದಕ್ಕೋಸ್ಕರ ನಮ್ಮ ಕಡೆಗೆ ಕಳಿಸಿಕೊಟ್ಟರು. ಆದರೆ ಮುಂದೆ ಅವರು ಶರೀರದಲ್ಲಿ ಅಸ್ವಸ್ಥತೆಯನ್ನು ಹೊಂದಿದ್ದರಿಂದ, ಅದನ್ನು ಮುಂದುವರಿಸಲು ಅವರಿಗೆ ಶಕ್ಯವಾಗಲಿಲ್ಲ. ಮುಂದೆ ಅವರು ಮದ್ರಾಸವನ್ನು ಬಿಟ್ಟು ಬೆಂಗಳೂರಿನಲ್ಲಿ ವಾಸವಾಡಹತ್ತಿದರು. ಈ ಗ್ರಂಥವನ್ನು ಪೂರ್ತಿಗೊಳಿಸಬೇಕೆಂದು ಅವರಿಗೆ ನಾವು ಅನೇಕಾವರ್ತಿ ಸೂಚಿಸುತ್ತ ಬಂದರೂ ಅವರಿಗೆ ನೇತ್ರದ ಬಾಧೆ ಮತ್ತು ಶಾರೀರಕ ದೌರ್ಬಲ್ಯ ಇವುಗಳ ಮೂಲಕ ಅದನ್ನು ಪೂರ್ಣಗೊಳಿಸುವದು ಆಗಲಿಲ್ಲ. ಅವರು ಕೆಲವು ದಿವಸಗಳ ಹಿಂದೆ ಕರ್ನಾಟಕದ ದುರ್ದೈವದಿಂದ ದಿವಂಗತರಾದರು. ಇದಕ್ಕೆ ನಾವು ಬಹಳ ವಿಷಾದಿಸುತ್ತೇವೆ.

ಈಗಿನ ಗ್ರಂಥದಲ್ಲಿಯ ವೃತ್ತಾಂತಗಳು ಲಾರ್ಡ ಕಾರ್ನವಾಲೀಸ ಮತ್ತು ಟೀಪು ಸುಲ್ತಾನ ಇವರ ನಡುವೆ ಆದ ಯುದ್ಧದ ವರೆಗೆ ಬಂದಿವೆ.

ಗ್ರಂಥದ ಮುಂದಿನ ಭಾಗವು ನಮ್ಮ ಕೈಸೇರಿರುವದಿಲ್ಲ. ಆದರೆ ಪ್ರಕಟನೆಯ ಕಾರ್ಯವನ್ನು ಪ್ರಾರಂಭಿಸಿ ಬಹಳ ದಿನಗಳಾದ್ದರಿಂದ ಗ್ರಂಥದ ಅಚ್ಚುಹಾಕಿದ ಭಾಗವನ್ನು ಪ್ರಸಿದ್ಧಿಸುವದರಿಂದ ಕರ್ನಾಟಕಸ್ತರಿಗೆ ಈ ಇತಿಹಾಸದ ಸ್ವರೂಪು ಎಂಥದಿರುತ್ತದೆಂದು ತಿಳಿಯುವದರಿಂದಲೂ ಮುಂದಿನ ಆವೃತ್ತಿಯಲ್ಲಿ ಸಮಗ್ರ ಗ್ರಂಥವನ್ನು ಪ್ರಕಟಿಸಲು ಬೇಕಾಗುವ ಅನುಕೂಲತೆಗಳು ಒದಗಿ ಬರುವವೆಂತಲೂ ಭಾವಿಸಿ ನಾವು ಈ ಗ್ರಂಥವನ್ನು ಈಗ ಪ್ರಕಟಿಸಿದ್ದೇವೆ.

ಈ ರಾಜೇಂದ್ರನಾಮೆಯ ಮೂಲ ಗ್ರಂಥವು ಅನೇಕರಲ್ಲಿ ಇರಬಹುದು ಅವರು ತಮ್ಮ ಪ್ರತಿಯನ್ನು ನಮ್ಮ ಕಡೆಗೆ ಕಳುಹಿಸಿದಲ್ಲಿ ನಾವು ಅವರಿಗೆ ಆಭಾರಿಯಾಗುವೆವು ಮತ್ತು ಅದನ್ನು ಈ ಗ್ರಂಥದ ಪುನರ್ಮುದ್ರಣದ ಕಾಲದಲ್ಲಿ ಇದರಲ್ಲಿ ಸೇರಿಸುವೆವು.

ವಿಜಾಪುರ
ತಾ। ೨—೭—೪೩

ಫ. ಗು. ಹಳಕಟ್ಟಿ.
ಸಂಪಾದಕ

ಕೊಡಗಿನ ಸಂಸ್ಥಾನದ

ರಾಜೇಂದ್ರನಾಮೆ.

† [ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ। ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ॥

ಸ್ವಸ್ತಿ! ಶ್ರೀ ವಿಜಯಾಭ್ಯುದಯ ಕಲಿಯುಗ ಸಂದ ವರುಷ ೪೮೯೮ ನೇ ಶಾಲಿವಾಹನ ಶಕ ಸಂದ ೧೭೧೮ ನೇ ವರ್ತಮಾನಕ್ಕೆ ಸಲುವ ನಳ ಸಂವತ್ಸರ ದಲ್ಲು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮ ವೀರ ನರಪತಿ ಕೊಡಗಿನ ಸಂಸ್ಥಾನದ ಶ್ರೀರತ್ನಸಿಂಹಾಸನಾರೂಢರಾಗಿ ಪೃಥ್ವಿಸಾಮ್ರಾಜ್ಯಂ ಗೆಯ್ಯುತ್ತಿದ್ದ ಭಾರದ್ವಾಜ ಗೋತ್ರದ ಆಶ್ವಲಾಯನ ಸೂತ್ರದ ಋಕ್‌ಶಾಖಾನೂಪಾಧ್ಯಾಯ ವೀರಶೈವ ಮತಸ್ಥರಾದ] ಅಪ್ಪಾಜಿ ರಾಜೇಂದ್ರರ ಪೌತ್ರರಾದ ಲಿಂಗರಾಜೇಂದ್ರ ಒಡೆಯರವರ ಪುತ್ರರಾದ ವೀರರಾಜೇಂದ್ರ [ಒಡೆಯರವ] ರು * ಕೊಡಗಿನ ಸಂಸ್ಥಾನದ ರಾಜ್ಯಾಧಿಪತ್ಯವನ್ನು ಮಾಡಿಕೊಂಡು ಇರುವಾಗ್ಗೆ, ತಮ್ಮ ಕೊಡಗಿನ ಸಂಸ್ಥಾನದ ದೊರೆಗಳ ವಂಶಾವಳಿ ಪಾರಂಪರ್ಯವಾಗಿ ಪ್ರಾರಂಭ ದಿಂದ ನಡೆದು ಬಂದಂಥಾ ವೃತ್ತಾಂತಗಳನ್ನು ಬರೆದ [ಕಾಗದ] + ಗಳ ಜೀರ್ಣೋದ್ಧಾರಮಾಡಿ ಬರೆಸಿ, ಇತ್ತಲಾಗೆ ನಡೆದಂಥಾ ಅಭಿಪ್ರಾಯುಗಳನ್ನು ಅದಕ್ಕೆ ಬರೆಸಬೇಕೆಂಬದಾಗಿ, ಪುರಾಣಸಾಧನಗಳನು ತೆಗೆಸಿ ನೋಡಿದಲ್ಲಿ, ಕಲಿ ಸಂದ ೪೭೩೪ ನೇ ಅಂಗೀರಸ ಸಂವತ್ಸರದ ಆಚೆಗೆ ನಡೆದ ವೃತ್ತಾಂತ ಬರೆದ ಸಾಧನಗಳು ನವಾಬ ಹೈದರಲ್ಲೀ ಖಾನಬಹಾದ್ದರವರು ಅವರ ಮಗ ಟೀಪೂಸುಲ್ತಾನರ ದಿವಸದಲ್ಲಿ ಸಹ ಅತಂತ್ರವಾಗಿ ಹೋದದ್ದು ಹೋಗಲಾಗಿ, ಆ ಅಂಗೀರಸ ಸಂವತ್ಸರದ ಇತ್ತಲಾಗೆ ತಮ್ಮ ತಂದೆಯವರಾದ ಲಿಂಗರಾಜೇಂದ್ರ ಒಡೆಯರ ದಿವಸ ಪರಿಯಂತರ ಆದ ವಿದ್ಯಮಾನ ಬರೆದ ಸಾಧನಗಳು ಉಳಿದು ಇದ್ದದ

---

† ಈ ಅಂಶವು ಅ. ಪ್ರತಿಯಲ್ಲಿ ಇಲ್ಲ.

* ಈ ಅಂಶವು ಅ. ಪ್ರತಿಯಲ್ಲಿ ಇಲ್ಲ.

+ ಬ. ಶಾಸನ.

ರಿಂದ; ಅದರಲ್ಲಿ ಬರೆದು ಇದ್ದ ವಿವರ, ಮತ್ತು ತಮ್ಮ ಕಾಲದಲ್ಲಿ ನಡೆದಂಥಾ ರಾಜಕಾರ್ಯ ಕಾರಣಂಗಳ ಸಹ, ಸಮಸ್ತರು ತಿಳಿಯುವ ಬಗ್ಗೆ ನಳ ಸಂವತ್ಸರದ ಮಾಘ ಶು. ೧ ಯು. ಭಾನುವಾರ ಅಪ್ಪಣೆಕೊಟ್ಟು ಬರೆಸಿದ ಕ್ರಮವೆಂತೆಂದರೆ:—

ಅಂಗೀರಸ ಸಂವತ್ಸರದಲ್ಲಿ ವೀರರಾಜೇಂದ್ರ ಒಡೆಯರ ಪೌತ್ರರಾದ ಅಪ್ಪಾಜಿ ರಾಜರ ಪುತ್ರರಾದ ಮುದ್ದರಾಜ ಒಡೆಯರು ಪೂರ್ವ ಆರಭ್ಯ ದೊರೆತನ ಮಾಡಿ ಬಂದಂಥ [ಜಾಗ] × ಹಾಲೇರಿ ಅರಮನೆ ಆದ್ದರಿಂದ, ಅಲ್ಲಿಯೇ ಇದ್ದುಕೊಂಡು ರಾಜ್ಯಭಾರ ಮಾಡಿಕೊಂಡು ಇದ್ದರು. ಅತಃಪ್ರಾಕು ಇವರ ವಂಶಭೂತರಲ್ಲಿ ಒಬ್ಬರು ಮೊದಲಾರಭ್ಯದಿಂದ ಪೆರಿಯಾಪಟ್ಟಣದಲ್ಲಿ ಇದ್ದು ಅಲ್ಲಿ ರಾಜ್ಯಭಾರ ಮಾಡಿಕೊಂಡು ಏಕಗೃಹಕೃತ್ಯವಾಗಿ ನಡೆಯುತ್ತಾ ಇದ್ದರು.

ಈ ಕೊಡಗಿನ ಸಂಸ್ಥಾನದ ಸಿಂಹಾಸನದ ಅಧಿಪತಿಗಳಾಗಿ ಇದ್ದ ಮುದ್ದರಾಜ ಒಡೆಯರ ಪಟ್ಟದ ಸ್ತ್ರೀ ಆದ ದೇವಮ್ಮಾಜಿಯವರ ಗರ್ಭದಲ್ಲಿ ರಾಜಶ್ರೇಷ್ಠರಾದ ಶಿರಿಬಾಯಿ ದೊಡ್ಡ ವೀರಪ್ಪ ಒಡೆಯರು ಕಲಿಸಂದ [೪೭೫೧] ನೇ || ಹೇವಿಳಂಬಿ ಸಂ|| ದಲ್ಲಿ ± ಜನಿಸಿದರು. ಅವರ [ಹಿಂದೆ] ಅಪ್ಪಾಜಿರಾಜರು * ಅವರ ಬೆನ್ನು ಹಿಂದೆ ನಂದರಾಜರು ಸಹ ಜನಿಸಿದರು. ಅದರಲ್ಲಿ ಹಿರಿಯ ಕುಮಾರ ಶಿರಿಬಾಯಿ ದೊಡ್ಡ ವೀರಪ್ಪ ಒಡೆಯರಿಗೆ ಮುದ್ದಮ್ಮಾಜಿ ದೇವಮ್ಮಾಜಿ ಎಂಬ ಇಬ್ಬರು ರಾಣಿಗಳ ಮದುವೆ ಮಾಡಿ, ಮುದ್ದರಾಜರವರು ಮಡಿಕೇರಿಯೆಂಬ ಜಾಗ ಪಸಂದು ಮಾಡಿ, ಅಲ್ಲಿ ನೂತನವಾಗಿ ಕೋಟೆಯನ್ನು ರಚಿಸಿ, ಅದರ ಸುತ್ತ ಅಗಳು ಮುಂತಾಗಿ ತೆಗೆಸಿ ತಯ್ಯಾರು ಮಾಡಿಸಿ ಕಲಿ ಸಂದ ೪೭೮೩ ನೇ ದುರ್ಮತಿ ಸಂವತ್ಸರದಲ್ಲಿ ತಮ್ಮ ಜ್ಯೇಷ್ಠಪುತ್ರರಾದ ದೊಡ್ಡ ವೀರಪ್ಪ ಒಡೆಯರಿಗೆ ರಾಜಪಟ್ಟಾಭಿಷೇಕವನ್ನು ಮಾಡಿ ರಾಜ್ಯಾಧಿಪತ್ಯವನ್ನು ಕೊಟ್ಟು, ಆ ಮೇಲೆ ಎರಡನೇ ಕುಮಾರರಾದ ಅಪ್ಪಾಜಿ ರಾಜರಿಗೆ ರಾಜಮ್ಮಣ್ಣಿಯೆಂಬವರ ವಿವಾಹವನ್ನು ಮಾಡಿ, ಅವರನ್ನು ಮುದ್ದ

× ಬ ಸಿಂಹಾಸನದ ಜಾಗ.

|| ಬ ೪೭೫೯.

± ಬ ನಾಮ ಸ|| ದಲ್ಲಿ.

* ಬ ಬೆನ್ನ ಹಿಂದೆ.

ರಾಜ ಒಡೆಯರು ತಮ್ಮ ಬಳಿಯ ಹಾಲೇರಿ ಅರಮನೆಯಲ್ಲು ಇಟ್ಟು ಕೊಂಡು, ಮೂರನೆ ಮಗನಾದ ನಂದರಾಜ ಅರಸುಗಳಿಗೆ ನಂಜಮ್ಮಣ್ಣಿಯೆಂಬವರ ವಿವಾಹವನ್ನು ಮಾಡಿ ಅವರಿಗೆ ಹೊರಮಲೆ ನಾಡನ್ನು ಜಹಗಿರು ಕೊಟ್ಟು ಅಲ್ಲಿ ಇಟ್ಟರು.

ಆ ಮೇಲೆ ಕಲಿಸಂದ [೪೭೮೫] * ನೇ ಕ್ಷಯ ಸಂವತ್ಸರದಲ್ಲಿ ಮುದ್ದರಾಜ ಒಡೆಯರು ಶಿವಾಧೀನವಾದರು. ದೊಡ್ಡ ವೀರಪ್ಪ ಒಡೆಯರು ಅದೇ ಮೇರೆ ರಾಜ್ಯಭಾರ ಮಾಡುತ್ತ ಇದ್ದರು. ಅವರಿಗೆ ಅಪ್ಪಾಜಿರಾಜರೆಂಬ ಕುಮಾರರು ಜನಿಸಿದರಿಂದ [ವಿವಾಹ] † ಮಾಡಿದರು. ಅದೇ ರಾಣಿಯವರ ಗರ್ಭದಲ್ಲಿ ಚಿಕ್ಕ ವೀರಪ್ಪ ಒಡೆಯರೆಂಬ ಕುಮಾರರು ಜನಿಸಿದರು. ಹಾಲೇರಿ ಅರಮನೆಯಲ್ಲು ಇದ್ದ ಅಪ್ಪಾಜಿ ರಾಜರಿಗೆ ಅಯಿದು ಮಂದಿ ಕುಮಾರರು ಜನಿಸಿದರು. ಅದರಲ್ಲಿ ಹಿರಿಯ ಕುಮಾರರಾದ ಮುದ್ದಯ್ಯ ರಾಜರಿಗೆ ನಂಜಮಣ್ಣಿಯೆಂಬವರ ವಿವಾಹ ಮಾಡಿದರು. ಎರಡನೆ [ಲಿಂಗರಾಜ] § ರಿಗೆ ದೇವಾಂಬಿಕೆ ಅಮ್ಮನವರ ವಿವಾಹ ಮಾಡಿದರು. ಉಳಿಕೆ ಮೂರು ಮಂದಿ ಕುಮಾರರು ಕೆಲವು [ದಿನದಲ್ಲಿ ತೀರಿ] ± ಹೋದರು. ಆ ಮುದ್ದೈಯ ರಾಜರಿಗೆ ಅಪ್ಪಾಜಿ [ರಾಜರು] × ಜನಿಸಿದರು. ಲಿಂಗ [ರಾಜರಿಗೆ] || ವೀರ ರಾಜ [ಒಡೆಯರು] = ಜನಿಸಿದರು. ಹೊರಮಲೆಯಲ್ಲು ಇದ್ದ ನಂದರಾಜರಿಗೆ ಮುದ್ದರಾಜರು ಜನಿಸಿದರು. ಆ ಮುದ್ದೈಯ ಅರಸುಗಳಿಗೆ ವಿವಾಹ ಮಾಡಿದರು ಅವರಿಗೆ ಮಲ್ಲೈಯ ರಾಜರು ಜನಿಸಿದರು.

ಈ ಮೇರೆ ಇರುತ್ತ ಇದ್ದಲ್ಲಿ, ಆವಾಗ್ಗೆ ಮೈಸೂರು ಸಂಸ್ಥಾನದಲ್ಲಿ ಚಿಕ್ಕ ದೇವರಾಜ ಒಡೆಯರು, ಇಕ್ಕೇರಿ ಸಂಸ್ಥಾನದಲ್ಲಿ ದೊಡ್ಡ ಚನ್ನಮ್ಮಾಜಿಯವರು ಸೋಮಶೇಖರನಾಯಕರ ಸಾಕಿಕೊಂಡು ದೊರೆ

---

* ಬ ೪೭೮೮.

† ಬ ಅವರಿಗೆ ವಿವಾಹ.

§ ಬ ಕುಮಾರರಾದ ಲಿಂಗರಾಜ

± ಬ ದಿವಸದ ಒಳಗಾಗಿ ಶಿವಾಧೀನವಾಗಿ

× ಬ ರಾಜರು ಎಂಬ ಕುಮಾರರು

|| ಬ ರಾಜೇಂದ್ರ ಒಡೆಯರಿಗೆ ಕಲಿಸಂದ ವರುಷ ೪೮೬೫ ನೇ ಸ್ವಭಾನು ಸಂವತ್ಸರದ ಜ್ಯೇಷ್ಠ ಬ. ೩೦. ಯು ಶುಕ್ರವಾರಘಳಿಗೆ ೪೩ ರಲ್ಲಿ

= ಬ ಒಡೆಯರು ಎಂಬ ಕುಮಾರರು

ತನ ಮಾಡುತ್ತ ಇದ್ದರು. ಸ್ವಾದಿ ಸಂಸ್ಥಾನದಲ್ಲಿ [ಸದಾಶಿವ] × ರಾಜರೂ, ಬೇಲೂರು ಸಂಸ್ಥಾನದಲ್ಲಿ ವೆಂಕಟಾದ್ರಿ ನಾಯಕರೂ, ಚಿರಕಲ ಸಂಸ್ಥಾನದಲ್ಲಿ ವೀರ [ವರ್ಮ] ‖ ರಾಜರೂ, ಈ ಮೇರೆ ತಮ್ಮತಮ್ಮ ರಾಜ್ಯಭಾರ ಮಾಡಿಕೊಂಡು ಇರುತ್ತಿದ್ದರು.

ಆವಾಗ್ಗೆ [ಮೈಸೂರ ಸರಹದ್ದಿನ] ± ಪೆರಿಯಾಪಟ್ಟಣದಸೀಮೆಯೂ ಕೊಡಗಿನ ಸೀಮೆಯೂ [ಒಂದಾಗಿ] * ನಡೆದು ಬರುತ್ತ ಇತ್ತು. ಕೊಡಗಿಗೂ ಮೈಸೂರಿಗೂ ಸೇರಿದ ಸರಹದ್ದು ಪೆರಿಯಾಪಟ್ಟಣ ತಾಲೂಕು ಕಟ್ಟೆಮಳವಾಡಿ ಸಮೀಪ ಉಮ್ಮ್ದಾರು ಕೊಡಗರಹಳ್ಳಿ ಯೆಂಬಲ್ಲಿ ಕೊಡಗಿನ ನಿಶಾನಿಕಲ್ಲು ನಟ್ಟಯಿದೆ. ಮೈಸೂರವರಿಗೂ ಕೊಡಗಿನವರಿಗೂ ಮೊದಲಾಗಿ ವಿರೋಧವಾದ ಕಾರಣಯೇನೆಂದರೆ— ಪೆರಿಯಾಪಟ್ಟಣದ ನಂಜುಂಡ ಅರಸುಗಳ ಕಡೆಯ ಕೆಲವು ಚಾಕರ ಜನರು ಪಿತೂರಿಯಿಂದಃ— "ಈಗ ನಿಮ್ಮ ಫವುಜು ಕಳುಹಿಸಿ ಕೊಟ್ಟರೆ ಈ ಕೋಟೆ ನಿಮ್ಮ ಕೈವಶ ಮಾಡಿಕೊಡುತ್ತೇವೆ"— ಯೆಂಬದಾಗಿ ಮೈಸೂರು[ದೊರೆಗಳಿಗೆ] † ಚದಿ ಸಂಧಾನ ನಡೆಸಿ ಹೇಳಿಕಳುಹಿಸಿದ್ದರಿಂದ, ಆ ಚಿಕ್ಕ ದೇವರಾಜ ಒಡೆಯರು ಪೆರಿಯಾಪಟ್ಟಣದ ಕೋಟೆ ಆ ಸೀಮೆ ಸಹ ಸಾಧಿಸಿ ಕೊಳ್ಳಬೇಕೆಂಬುದಾಗಿ ಫವುಜು ಜಮಾಯಿ [ಸುತ್ತ] § ಇದ್ದರು. ಇವರ ಫವುಜು ತಯ್ಯಾರು ಮಾಡಿಸುವ ಸಮಾಚಾರ ನಂಜುಂಡ ಅರಸುಗಳು ತಿಳಿದು, ಪೆರಿಯಾಪಟ್ಟಣದ ಕೋಟೆಯಲ್ಲಿ ತಮ್ಮ ಮಗನಾದ ವೀರರಾಜರ ಮಡಗಿ, ತಾವು ಫವುಜು ತೆಗೆದುಕೊಂಡು ಹೋಗುವ ಬಗ್ಗೆ ಮಡಿಕೇರಿಗೆ ಬಂದು, ಈ ಸಮಾಚಾರವನ್ನು ದೊಡ್ಡ ವೀರಪ್ಪ ಒಡೆಯರಿಗೆ ಜಾಹೀರು ಮಾಡಿದ್ದಲ್ಲಿ, ಅವರು ತಮ್ಮ ಕೊಡಗು ಮಂದಿ ಯಾವತ್ತು ಜಮಾಯಿಸುತ್ತ ಇದ್ದರು. ಅಷ್ಟರಲ್ಲಿಃ— "ಈ ಮೇರೆ ನಂಜುಂಡ ಅರಸುಗಳು ಫವುಜು ತೆಗೆದುಕೊಂಡು ಬರುವ ಬಗ್ಗೆ ಮಡಿಕೇರಿಗೆ ಹೋಗಿಯಿದ್ದಾರೆ. ಆ ಫವುಜು

× ಬ ದೊಡ್ಡ ಸದಾಶಿವ

‖ ಬ ರವಿವರ್ಮ

± ಬ ಈ ಶಬ್ದಗಳು ಇಲ್ಲ.

* ಬ ಒಂದೇ ಸೀಮೆಯಾಗಿ

† ಬ ಚಿಕ್ಕ ದೇವರಾಜ ಒಡೆಯರವರ ಬಳಿಗೆ

§ ಬ ತಯಾರಾಗುತ್ತ

ತೆಗೆದುಕೊಂಡು ಇಲ್ಲಿಗೆ ಬಂದರೆ ಬಲ ಹೆಚ್ಚಾಗುತ್ತದೆ. ಆ ಬಳಿಕ ಕೋಟೆ ನಿಮಗೆ ಸಾಧ್ಯವಾಗುವದು ಪ್ರಯಾಸವಿದೆ. ಆದದರಿಂದ ಆ ಫವುಜು ಬರುವದಕ್ಕಿಂತ ಮೊದಲೇ ನಿಮ್ಮ ಫವುಜು ಬಂದರೆ ಸುಲಭದಲ್ಲಿ [ನಿಮ್ಮ] § ಕೈವಶಮಾಡಿಕೊಡುತ್ತೇವೆ."— ಯೆಂಬದಾಗಿ ಪೆರಿಯಾಪಟ್ಟಣದಲ್ಲಿ ಇದ್ದ ಫಿತೂರಿಯವರು ಮೈಸೂರು ದೊರೆಗಳಿಗೆ ಹೇಳಿ ಕಳುಹಿಸಿದಲ್ಲಿ, ಈ ವರ್ತಮಾನ ಕೇಳಿದಾಕ್ಷಣ ಚಿಕ್ಕದೇವರಾಜರು ರಾತ್ರಿಹಗಲು ಫವುಜು ಕಳುಹಿಸಿ, ಪೆರಿಯಾಪಟ್ಟಣದ ಕೋಟೆಗೆ ಮುತ್ತಿಗೆ ಹಾಕಿಸಿ, ಜಗಳಮಾ[ಡು]ತ್ತ † ಇದ್ದರು. ದೊಡ್ಡ ವೀರಪ್ಪ ಒಡೆಯರು ತಮ್ಮ ಮಂದಿ ಯಾವತ್ತು ಜಮಾಯಿಸಿಕೊಂಡು ಹೋಗಿ ಸಿದ್ಧೇಶ್ವರನ ಬೆಟ್ಟದ ಬಳಿಗೆ ತಲುಪುವಷ್ಟರಲ್ಲಿ— 'ಆ ಫಿತೂರಿಜನರ ಸಹಾಯದಿಂದ ಪೆರಿಯಾಪಟ್ಟಣದ ಕೋಟೆಯನ್ನು ಹಲ್ಲಾ ಮಾಡಿ ಮೈಸೂರವರು ತೆಗೆದುಕೊಂಡರು. ಆವಾಗ್ಗೆ ಅಲ್ಲಿ ಇದ್ದ ವೀರರಾಜ ಅರಸುಗಳು ತಮ್ಮ ಬಹುಮಾನ ಕೀರ್ತಿ(ಯ) ಮೇಲೆ ದೃಷ್ಟಿ ಮಡಗಿ ತಮ್ಮ ಕುಟುಂಬ ಮಕ್ಕಳು ಯಾವತ್ತನ್ನು ಕೊಂದು ಹಾಕಿ, ಅವರು ಅಲ್ಲಿಯೇ ಜಗಳ ಮಾಡಿ ಪ್ರಾಣಬಿಟ್ಟರು.'— ಎಂಬದಾಗಿ ದೊಡ್ಡ ವೀರಪ್ಪ ಒಡೆಯರಿಗೆ ವರ್ತಮಾನ ಬಂದದ್ದರಿಂದ, "ಆ ಕೋಟೆಯನ್ನು ಮಹಿಸೂರವರು ತೆಗೆದುಕೊಂಡು ತಮ್ಮ ಮಂದಿ ಠಾಣ್ಯಯಿಟ್ಟು ಬಲಕಾಯಿಸಿಕೊಂಡರು. ಇನ್ನು ನಾವು ಅಲ್ಲಿಗೆ ಹೋದರೆ ಫಲವೇನದೆ? ಇನ್ನು ಮೈಸೂರವರು ಬಡಾಯಿಸಿ ಕೊಡಗಿನ ಸೀಮೆವೊಳಗೆ ನುಗ್ಗಿ ಬಂದಾರು"— ಎಂಬದಾಗಿ ತಮ್ಮ ಮನಸ್ಸಿನಲ್ಲು ಗ್ರಹಿಸಿ, ಕೊಡಗಿನ ಸರಹದ್ದು ಸಿದ್ಧೇಶ್ವರನ ಬೆಟ್ಟ ಬಳಿಯು ಮುಂತಾದ ಎಲ್ಲೆಗಟ್ಟು ಬಂದ ಹಾಗೆ [ಅಲ್ಲಿ] ‖ ಬೇಕಾದಷ್ಟು ಮಂದಿಯಿಟ್ಟು ಬಂದೋಬಸ್ತು ಮಾಡಿಸಿ, ತಾವು ಪುನಃ ಮಡಿಕೇರಿಗೆ ಬಂದು, ಪೆರಿಯಾಪಟ್ಟಣದಲ್ಲಿ ನಡೆದ ವೃತ್ತಾಂತ ಯಾವತ್ತು ನಂಜುಂಡ ಅರಸುಗಳಿಗೆ ಹೇಳಿದ್ದಲ್ಲಿ, ಅವರು ಬಹು ಚಿಂತಾಕ್ರಾಂತರಾಗಿ ದುಃಖಪಟ್ಟುಕೊಂಡದರಿಂದ"— ನಿಮ್ಮ ಕುಮಾರರು ತೀರಿಹೋದಾಗ್ಯೂ ಆ ಮೈಸೂರವರು ಮಾಡಿದ್ದಕ್ಕೆ ಪ್ರತಿಜವಾಬುಕೊಡುವ ಬಗ್ಗೆ ನಿಮ್ಮ ಅಣ್ಣನ ಮಗನಾಗಿ

§ ಬ ಕೋಟೆ ನಿಮ್ಮ.

† ಬ ಡಿಸು

‖ ಬ ಅಲ್ಲಲ್ಲಿ

ನಾವು ಹಾಜರು ಇದ್ದೇವೆ. ಇದರ ಮೇಲೆ ನಮ್ಮ ಅರಮನೆಯಲ್ಲು ಇರುವಂತ(ಹ) ಚಿಕ್ಕವರು ದೊಡ್ಡವರು ಸಹ ತಮ್ಮ ಮಕ್ಕಳೋಪಾದಿಯಲ್ಲಿ ಇದ್ದಾರೆ. ತಾವು ಎಲ್ಲಾ ಬಗೆಯಲ್ಲು ನಿಶ್ಚಿಂತರಾಗಿ ಇರಬೇಕು"— ಯೆಂಬ ದಾಗಿ ಒಡಂಬಡಿಸಿದರು.

ಆವಾಗ್ಗೆ ಆ ನಂಜುಂಡ ಅರಸುಗಳು ಹೇಳಿದ ವಿವರ—"ನಮಗೆ ಮುಪ್ಪಿನಕಾಲವಾದ್ದರಿಂದ ನಮ್ಮ [ಮನೆಗೆ] † ಪೆರಿಯಾಪಟ್ಟಣದ [ಒತ್ತಿ] § ನಲ್ಲಿ ನಿಮ್ಮ ಒಡಂಬಡಿಕೆಯಿಂದ ಕೂರಿಸಿ, ನಾವು ಈ ಲೋಕದ ಆಸೆ ತೊರೆದು ಶಿವಧ್ಯಾನ ಮಾಡಿಕೊಂಡು ಇರುತ್ತಾ ಇದ್ದೇವು. ಇಂಥಾ ಮುಪ್ಪಿನ ವೇಳೆಯಲ್ಲಿ ನೋಡಬಾರದಂಥಾ ಅವಸ್ಥೆ ಮಹಾದೇವನು ತೋರಿಸಿದ. ನಮ್ಮ ಕಯ್ಯಿಂದ ಬಿಟ್ಟು ಹೋದಂತ(ಹ) ಸೀಮೆಯನ್ನು ನೀವು ಸಾಧಿಸಿಕೊಳ್ಳಬೇಕು. ನಮ್ಮ ಆಯುಸ್ಯ ತೀರುವ ಪರಿಯಂತರ ಇರುವ ಬಗ್ಗೆ ಒಂದು ಮನೆ, ನಮ್ಮ ಮನೆದೇವರಾದ ವೀರಭದ್ರ ದೇವರಿಗೆ ಒಂದು ದೇವಸ್ಥಾನ ಸಹ ಕಟ್ಟಿಸಿ ಕೊಡಬೇಕು. ಇದಲ್ಲದೆ ನಮ್ಮ ಹೆಸರಲ್ಲಿ ಒಂದು ಲಿಂಗ ಪ್ರತಿಷ್ಠೆಮಾಡಬೇಕು ಯೆಂಬದಾಗಿ ನಮ್ಮ ಮನಸ್ಸಿನಲ್ಲು ಇದೆ. ಈ ಬಗ್ಗೆ ಕಾವೇರಿ ಹೊಳೆಕರೆಯಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿ, ಅದರಲ್ಲಿ ನಮ್ಮ ಹೆಸರಿಂದ ಲಿಂಗಪ್ರತಿಷ್ಠೆ ಮಾಡಿಸಿ, ನಮ್ಮ ಆಯುಸ್ಯ ತೀರಿದ ಮೇಲೆ ಆ ದೇವಸ್ಥಾನದ ಮುಂದೆ ನಮ್ಮ ಸಮಾಧಿ ಮಾಡಿ ಅದರ ಮೇಲೆ ಕಲ್ಲುಮಂಟಪ ಕಟ್ಟಿಸಿ ಅದರ ಒಳಗೆ ಬಸವೇಶ್ವರ ದೇವರ ಪ್ರತಿಷ್ಠೆ ಮಾಡಿಸಬೇಕು"— ಎಂಬದಾಗಿ ಹೇಳಿದ್ದರಿಂದ, ಅದೇ ಪ್ರಕಾರ ಕಾವೇರಿ ಹೊಳೆ ಬಳಿಯ ಹೊಳಸಾಲೆಯಲ್ಲಿ ಅವರಿಗೆ ಒಪ್ಪಿದ ಸ್ಥಳದಲ್ಲಿ ದೊಡ್ಡ ವೀರಪ್ಪ ಒಡೆಯರವರು ಒಂದು ಅರಮನೆಯನ್ನು ಕಟ್ಟಿಸಿ, ಅದರ ಸುತ್ತ ಕಂದಕ ಮುಂತಾಗಿ ತೆಗೆಸಿ, ಅವರನ್ನು ಅಲ್ಲಿ ಮಡಗಿ, ಅದಕ್ಕೆ ನಂಜರಾಯಪಟ್ಟಣಯೆಂಬ ಹೆಸರು ಮಡಗಿ, ಅವರ ವೈಗಾವಲಿನ ಬಗ್ಗೆ ೭೦೦ ಜನ ಕೊಡಗರ ನೇಮಿಸಿಕೊಟ್ಟು, ಅವರು ಹೇಳಿದ ಪ್ರಕಾರ ಹೇರಳ ದ್ರವ್ಯ ವೆಚ್ಚಮಾಡಿ ವೀರಭದ್ರ ದೇವಸ್ಥಾನವನ್ನು ಕಟ್ಟಿಸಿ, ಅದರಲ್ಲಿ [ದೇವರ] * ಪ್ರತಿಷ್ಠೆ

† ಬ ಮಗನಿಗೆ
§ ಬ ದವಲತ್ತಿ
* ಬ ವೀರಭದ್ರದೇವರ

ಮಾಡಿ, ಮತ್ತೊಂದು ದೇವಸ್ಥಾನವನ್ನು ಕಲ್ಲಿಂದ ಕಟ್ಟಿಸಿ, ಅದರ ಒಳಗೆ ಲಿಂಗಪ್ರತಿಷ್ಠೆ ಮಾಡಿಸಿ ಅದಕ್ಕೆ ನಂಜುಂಡೇಶ್ವರ ಯೆಂಬ ಹೆಸರು ಮಡಗಿದರು. ಆ ಬಳಿಕ ಕೆಲವು ದಿವಸದ ಮೇಲೆ ಆ ನಂಜುಂಡ ಅರಸುಗಳು ಶಿವಾಧೀನವಾದ್ದರಿಂದ, ಅವರು ಹೇಳಿದ ಮೇರೆ ದೊಡ್ಡ ವೀರಪ್ಪ ಒಡೆಯರು ಆ ದೇವಸ್ಥಾನದ ಮುಂದೆ ಸಮಾಧಿ ಮಾಡಿಸಿ, ಅದರ ಮೇಲೆ ಕಲ್ಲುಮಂಟಪವನ್ನು ಕಟ್ಟಿಸಿ, ಅದರ ಒಳಗೆ ದೊಡ್ಡದಾಗಿ ಒಂದು ಬಸವೇಶ್ವರ ದೇವರ ಪ್ರತಿಷ್ಠೆ ಮಾಡಿಸಿ, ಆ ದೇವಸ್ಥಾನದ ವೆಚ್ಚದ ಬಗ್ಗೆ ಆಚಂದ್ರಾರ್ಕ [ವುಳ್ಳ ಪರಿಯಂತರ] * ಧರ್ಮ ನಡೆಯುವ ಬಗ್ಗೆ ಕೆಲವು ಭೂಮಿಯನ್ನು ಉತ್ತಾರು ಬಿಟ್ಟುಕೊಟ್ಟರು.

ಆ ಬಳಿಕ ಕೆಲವು ಕಾಲದ ಮೇಲೆ ಕೊಡಗಿನ ಸಂಸ್ಥಾನವನ್ನು ಕಟ್ಟಿಕೊಳ್ಳಬೇಕೆಂಬುದಾಗಿ ಮೈಸೂರ ಸಂಸ್ಥಾನದಿಂದ ಭಾರಿದಂಡು ಬಂದಲ್ಲಿ, ದೊಡ್ಡ ವೀರಪ್ಪ ಒಡೆಯರವರು ತಮ್ಮ ಫವುಜು ಯಾವತ್ತು ತೆಗೆದುಕೊಂಡು ಸರಹದ್ದು ಬಂದೋಬಸ್ತು ಮಾಡಿ, ಅವರ ಸಂಗಡ ಜಗಳ ಮಾಡುವದಕ್ಕೆ ತಯಾರಾಗಿ ಇದ್ದರು. ಈ ತರುವಾಯದಲ್ಲಿ ಕೊಡಗಿನ ಸೀಮೆಗೆ ವಳಿತ್ತವಾದ ಬೆಪ್ಪುನಾಡು ನಾಯಕನ ಉತ್ತಯೆಂಬ ಕೊಡಗ ಕಾರೇಕಾರನು ಉಪ್ಪಿಗೆ ಹರಾಮನಾಗಿ ಕೋಟಿಂಗಡಿ ಅರಸನ ಬಳಿಗೆ ಓಡಿ ಹೋಗಿ ಅರಸಿಗೆ ಹೇಳಿದ ವಿವರ— "ಮೊದಲು ಮೈಸೂರವರು ಕೊಡಗಿಗೆ ಸೇರಿದ ಪೆರಿಯಾಪಟ್ಟಣದ ಕೋಟೆಯನ್ನು ತೆಗೆದುಕೊಂಡು, ಈಗ ಕೊಡಗಿನ ಸೀಮೆಯನ್ನು ಕಟ್ಟಿಕೊಳ್ಳಬೇಕೆಂಬುದಾಗಿ ಹೇರಳ ಫವುಜು ತೆಗೆದುಕೊಂಡು ಇಲ್ಲಿಗೆ ಬಂದು ಇದ್ದಾರೆ. ಆದ್ದರಿಂದ ದೊಡ್ಡ ವೀರಪ್ಪ ಒಡೆಯರವರು ಯಾವತ್ತು ಮಂದಿಯನ್ನು ತೆಗೆದುಕೊಂಡು ಸರಹದ್ದು ಬಂದೋಬಸ್ತು ಮಾಡಿಕೊಂಡು ತಯಾರಾಗಿ ಇದ್ದಾರೆ. ಅವರ ಸೀಮೆ ಜನರೆಲ್ಲ ಗಾಬರಿಯಾಗಿ ಇದ್ದಾರೆ. ಈ ಸಮಯದಲ್ಲಿ ನೀವು ಯಾವತ್ತು ನಾಯಮಾರರನ್ನು ಕರಕೊಂಡು ಕೊಡಗಿನ ಸೀಮೆಯನ್ನು ಸಾಧಿಸುವ ಬಗ್ಗೆ ಗಟ್ಟಹತ್ತಿ ಬಂದರೆ ನಾನು ಕೆಲವು ಕೊಡಗರನ್ನು ನಿಮ್ಮ ಕುಮುಕ್ಕಿಗೆ ಸಾಕಾರ ಮಾಡಿಕೊಡುತ್ತೇನೆ"— ಎಂಬುದಾಗಿ ಹೇಳಿದಲ್ಲಿ, ಆ ಮಾತನ್ನು ಆ ಕೋಟಿ ಅರಸು ನಂಬಿಕೊಂಡು, ನಾಲ್ಕು ಅಯಿದು ಸಾವಿರ ನಾಯಮಾರರನ್ನು ಕರೆದುಕೊಂಡು ಗಟ್ಟದ ಮೇಲೆ ತೋಮಾರಯೆಂಬ ಗ್ರಾಮಕ್ಕೆ ಬಂದು, ಅಲ್ಲಿ

---

* ಬ ನಾಗಿ

ಒಂದು [ಲಕ್ಕಾಟ] || ಕೋಟೆ ಹಾಕಿ, ತಮ್ಮ ಫವುಜು ಸಹ ಆ ಕೋಟೆವೊಳಗೆ ಇದ್ದುಕೊಂಡು— "ನಮ್ಮ, ಕುಮಕ್ಕಿಗೆ ಕೊಡಗರ ಕೂಡಿಸಿ ಕೊಡುತ್ತೇನೆ ಎಂದು ಹೇಳಿಯಿದ್ದೆಯಷ್ಟೆ, ಅವರು ಎಲ್ಲಿ ಇದ್ದಾರೆ?"— ಎಂತ ಆ ಕೋಟೆ ಅರಸು ಕೇಳಿದಲ್ಲಿ, ಆ ನಿಮ್ಮಕ್‌ಹಿರಾಮು ಹೇಳಿದ್ದು— 'ಆ ಜನರು ದೊಡ್ಡ ವೀರಪ್ಪ ಒಡೆಯರ ಸಂಗಡ ಮೈಸೂರ ಫವುಜಿನ ಮೇಲೆ ಜಗಳ ಮಾಡುವದಕ್ಕೆ ಹೋಗಿಯಿದ್ದಾರೆ. ಈಗ ಕರೆಸುವದಕ್ಕೆ ಸಂಗತಿಯಿಲ್ಲ. ಮೈಸೂರವರು ಕೊಡಗಿನ ಸೀಮೆ ಒಳಗೆ ಬಂದರೆ ಆ ಜನರೆಲ್ಲ ಚೆಲ್ಲಾಪಿಲ್ಲಿಯಾಗಿ ಸೀಮೆಗೆ ಬರುತ್ತಾರೆ. ಆವಾಗ್ಗೆ ನನಗೆ ಬೇಕಾದವರ [ಕರೆದರೆ] † ಬಂದಾರು. ಆಮೇಲೆ ಕೆಲವು ಕೊಡಗಿನ ಸೀಮೆಯನ್ನು ಸುಲಭದಿಂದ ಸಾಧಿಸಿಕೊಳ್ಳಬಹುದು"— ಎಂಬದಾಗಿ ಹೇಳಿದ ಆ ಮಾತನ್ನು ನಂಬಿಕೊಂಡು, ಆ ಕೋಟೆ ಅರಸುಗಳು ತಮ್ಮ ಮಂದಿ ಸಹ ಆ ಲಖ್ಖಡಿ ಕೋಟೆಯಲ್ಲು ಇರುತ್ತಾ ಇದ್ದಲ್ಲಿ, ಈ ಸಮಾಚಾರ ದೊಡ್ಡ ವೀರಪ್ಪ ಒಡೆಯರವರು ಕೇಳಿ ಅಪ್ಪಣೆ ಕೊಟ್ಟದ್ದು:— " ಈಗ ಬಂದಿರುವ ಮೈಸೂರವರ ಭಾರಿ ದಂಡನ್ನು ಮಹಾದೇವನ ಕಟಾಕ್ಷದಿಂದ ನಾವು ಜಯಿಸಿದರೆ, [ಈ] ± ನಾಯಮಾರರನ್ನು ನಿಗ್ರಹಿಸುವದು ದೊಡ್ಡದಲ್ಲ. ಸದ್ಯಕ್ಕೆ ೧೫೦೦ ಕೊಡಗು ಜನರು ಹೋಗಿ ಆ ತೋಮಾರದ ಲಕ್ಕಡಿ ಕೋಟೆಗೆ ಮುತ್ತಿಗೆ ಹಾಕಿ, ಆ ಕೋಟೆಅಂಗಡಿ ಅರಸು ಆವರ ಕಡೆ [ಜನರು] × ಮಲೆಯಾಳಕ್ಕೆ ಹೋಗದಂತೆ ಮಾರ್ಗ ಯಾವತ್ತು ಬಂದು ಮಾಡಿ"— ಎಂಬುದಾಗಿ ಅಪ್ಪಣೆ ಕೊಟ್ಟು ಕಳುಹಿಸಿದ್ದಲ್ಲಿ, ಆ ಕೊಡಗು ಮಂದಿಯು ಅದೇ ಮೇರೆಗೆ ಬಂದು ಆ ಲಕ್ಕಡಿ ಕೋಟೆಗೆ ಮುತ್ತಿಗೆ ಹಾಕಿಕೊಂಡು ಇದ್ದರು. ಆ ತರುವಾಯ ಮಹಿಸೂರವರು ಭಾರಿ ದಂಡು ತೆಗೆದುಕೊಂಡು ಬಾಳೆಲೆ ಮಾರ್ಗವಾಗಿ ಸೀಮೆ ಒಳನುಗ್ಗಿ ಬಂದು ಪಾಲು ಪರೆಯೆಂಬ ಮೈದಾನದಲ್ಲು ಇಳಿದುಕೊಂಡಲ್ಲಿ, ಆ ಬೆಳಗ್ಗೆ ಅರುಣೋದಯದ ಸಮಯದಲ್ಲಿ ಕೊಡಗಿನ ಮಂದಿಯು ಹೋಗಿ ಮೈಸೂರವರ ದಂಡಿನ ಮೇಲೆ ಬಿದಲ್ಲಿ, ಹೇರಳ ಲಡಾಯುವಾಗಿ ಆವರ ಕಡೆಯ ಸುಮಾರು

|| ಬ ಲಕಡಿ

† ಬ ನಾನು ಕರೆದರೆ

± ಬ ಈ ನಾಲ್ಕು ಐದು ಸಾವಿರ

× ಬ ಜನರು ಸಹ

೧೫೦೦ ಜನ ಪರಿಯಂತರ ವೃತವಾಗಿ, ೭೭ ಅಂದಳದ ಸರದಾರರ ಸಹ ಕಡಿದುಹಾಕಿದರು. ಅದರಲ್ಲಿ ಕೆಲವು ಜನ ಪಲಾಯನವಾಗಿ ಚಿಕ್ಕ ದೇವರಾಜರ ಬಳಿಗೆ ಹೋದರು. ಈ ಮೇರೆ ಮೈಸೂರವರ ದಂಡನ್ನು ಮುಳುಗಿಸಿ ತಮ್ಮ ಮಂದಿ ಯಾವತ್ತು ತೆಗೆದುಕೊಂಡು ಆ ಕೋಟೆ ಅರಸುಗಳು ಇದ್ದ ಲಕ್ವಾಡಿ ಕೋಟೆಗೆ ಬಂದು ಮುತ್ತಿಕೊಂಡು ಅದರ ಒಳಗೆಯಿದ್ದ ನಾಯಿಮಾರರ [ವೀರವರ್ಮ] × ಅರಸುಗಳ ಸಹ ಹೊಡೆದು ಹಾಕಿ ಬಿಟ್ಟರು. ಆ ಆರಭ್ಯದಿಂದ ಮಹಿಸೂರವರು ಮಲೆಯಾಳದವರು ಸಹ ಇಂತ(ಹ) ಜಗಳ ಕೊಡಗಿನ ಸೀಮೆ ಸರಹದ್ದಿನ ಒಳಗೆ ಮಾಡಲಿಲ್ಲ.

ಈಚೆಗೆ ದೊಡ್ಡ ವೀರಪ್ಪ ಒಡೆಯರವರು ೧೮ ವರುಷ ಪರಿಯಂತರ ಕೊಡಗಿನ ರಾಜ್ಯದ ಒಳಗೆ ಯಾವತ್ತು ಕಡಂಗ ಕಂದುಕ ಮುಂತಾಗಿ ತೆಗೆಸಿ ಆಳ್ವೇರಿ [ಬಕ್ಕಾ] ‖ ಬಾಗಿಲು ಮುಂತಾಗಿ ತಯ್ಯಾರು ಮಾಡಿಸಿ, ಈ ರಾಜ್ಯದಲ್ಲಿ ಇರುವ ಜಗಳದ ಅಗಳು [ಮುಂತಾಗಿ] ± ತೆಗೆಸಿ, ಕೊಡಗಿನ ರಾಜ್ಯವನ್ನು ಬಂದೋಬಸ್ತು ಮಾಡಿಕೊಂಡು ಸ್ವಸ್ಥದಲ್ಲಿ ರಾಜ್ಯಭಾರ ಮಾಡಿಕೊಂಡು ಇರುತ್ತ ಇದ್ದಲ್ಲಿ, ಕೆಲವು ದಿವಸದ ಮೇಲೆ ಮೈಸೂರು ಚಿಕ್ಕ ದೇವರಾಜ ಒಡೆಯರವರು ಬೇಲೂರು ವೆಂಕಟಾದ್ರಿ ನಾಯಕ(ರ) ಸೀಮೆಯನ್ನು ಸಾಧಿಸಿಕೊಳ್ಳುವ ಬಗ್ಗೆ ಫವುಜು ತೆಗೆದುಕೊಂಡು ಹೋದರು. ಆ ಸಮಾಚಾರ ದೊಡ್ಡ ವೀರಪ್ಪ ಒಡೆಯರು ಕೇಳಿ ಅಪ್ಪಣೆ ಕೊಟ್ಟದ್ದು— "ಬೇಲೂರು ವೆಂಕಟಾದ್ರಿ ನಾಯಕನ ಸೀಮೆಯನ್ನು ಆಕ್ರಮಿಸಿಕೊಳ್ಳುವ ಬಗ್ಗೆ ಮೈಸೂರು ಚಿಕ್ಕ ದೇವರಾಜ ಒಡೆಯರವರು ಭಾರಿ ದಂಡು ಸಮೇತ ಬೇಲೂರು ಕಡೆಗೆ ಹೋಗಿಯಿದ್ದಾರೆ; ಈ ಸಮಯದಲ್ಲಿ ಕೊಡಗಿನ ಸೀಮೆ ಸರಹದ್ದಿನ ಸಮೀಪದ ಬೇಲೂರು ಸೀಮೆಯಲ್ಲಿ ಕೆಲವು ಕಟ್ಟಿಕೊಳ್ಳುವ ಬಗ್ಗೆ ನಾವು ಮಂದಿ ಕಳುಹಿಸಿ ಅದನ್ನು [ಬಂದೋಬಸ್ತು] * ಮಾಡಿಕೊಳ್ಳಬೇಕು"— ಎಂಬುದಾಗಿ ಮಾನಸೂಬ ಮಾಡಿ ಅದೇ ಮೇರೆ ಕೆಲವು ಮಂದಿಯನ್ನು ಕಳುಹಿಸಿ,

---

× ಬ ಆ ಕೋಟೆ ವೀರವರ್ಮ

‖ ಬ ಬಕ್ಕ

± ಬ ಯಾವತ್ತು

* ಬ ಸಾಧಿಸಿ ಬಂದೋಬಸ್ತು

ಕೊಡಗಿನ ಸರಹದ್ದಿಗೆ ಮುಟ್ಟಿಯಿರುವ ಬೇಲೂರು ವಳ್ಳಿತವಾದ ಏಳು ಸಾವಿರ ಸೀಮೆಯನ್ನು ತೆಗೆದುಕೊಂಡು ಕೊಡಗಿನ ಸೀಮೆಗೆ ಸೇರಿಸಿಕೊಂಡು, ಉಳಿಕೆ ಬೇಲೂರು ಸೀಮೆ ಕೋಟೆ ಸಹ ಮೈಸೂರು ಅರಸುಗಳು ಕಟ್ಟಿಕೊಂಡರು. ಆ ತದನಂತರದಲ್ಲಿ ಬೇಲೂರು ವೆಂಕಟಾದ್ರಿ ನಾಯಕರು ನಿಸ್ತರಿಸಲಾರದೆ ಓಡಿಹೋಗಿ ತಮ್ಮ ಸೀಮೆ ವಳ್ಳಿತವಾದ ಗಿಡ ಸರಹದ್ದು ಐಗೂರು ಸೀಮೆ ಬಂದೋಬಸ್ತು ಮಾಡಿಕೊಂಡು, ಕಾಲಕ್ಷೇಪ ಮಾಡಿಕೊಂಡು ಇದ್ದರು. ಈ ಮೇರೆ ಇರುತ್ತಯಿದ್ದಲ್ಲಿ, ಕೆಲವು ದಿವಸದ ಮೇಲೆ ಮೈಸೂರು ಅರಸುಗಳು—"ಬೇಲೂರು ಸಂಸ್ಥಾನ ನಾವು ಕಟ್ಟಿಕೊಂಡು ಇದ್ದೇವೆ. ಅದಕ್ಕೆ ಸೇರಿದ ಏಳು ಸಾವಿರ ಸೀಮೆ ನಮಗೆ ಸಲ್ಲತಕ್ಕಂಥಾದ್ದು ನೀವು ಹೇಗೆ ಕಟ್ಟಿಕೊಂಡಿರಿ? ಬಿಟ್ಟು ಕೊಡಿ"— ಎಂದು ದೊಡ್ಡ ವೀರಪ್ಪ ರಾಜಗ ಕೇಳಿದ್ದಕ್ಕೆ ಇವರು ಜವಾಬು ಹೇಳಿದ್ದು— "ಬೇಲೂರು ಸಂಸ್ಥಾನ ಪ್ರತ್ಯೇಕ ವೆಂಕಟಾದ್ರಿ ನಾಯಕರು ಆಳಿಕೊಂಡು ಇದ್ದದ್ದೇ ಹೊರತು ಮೈಸೂರು ಸಂಸ್ಥಾನಕ್ಕೂ ಕೊಡಗಿನ ಸಂಸ್ಥಾನಕ್ಕೂ ಸೇರಿದ್ದು ಅಲ್ಲ [ನೀವು ಬೇಲೂರವರ] † ಮೇಲೆ ಜಗಳ ಮಾಡಿ ಆ ರಾಜ್ಯ ಕಟ್ಟಿಕೊಂಡಿರಿ. ನಿಮ್ಮಂತೆ ನಾವು ಜಗಳ ಮಾಡಿ ಏಳು ಸಾವಿರ ಸೀಮೆ ಕಟ್ಟಿ ತೆಗೆದುಕೊಂಡೆವು. ಈ ಮೇರೆ ಇರುವಲ್ಲಿ, ನಾವು ಏಳು ಸಾವಿರ ಸೀಮೆ ಬಿಡಲಿಕ್ಕೆ ಇಲ್ಲ— ಎಂದು ಹೇಳಿದಲ್ಲಿ, ಆ ಮೈಸೂರವರಿಗೂ [ಇಲ್ಲಿ (ಯು) ದೊರೆಗಳಿಗೂ] ± ಜಗಳವಾಗಿ ಆ ಮೈಸೂರವರು ಸದರೀ ಸೀಮೆ ಒಳನುಗ್ಗಿ ಬಂದಲ್ಲಿ, [ಅಲ್ಲಿ] * ಒಳನುಗ್ಗುವದಕ್ಕೆ ಬಿಡದೆ ಹೊಡೆದರು. ಆವಾಗ್ಗೆ ಆವರು ಒಳನುಗ್ಗಲಾರದೆ ಅಲ್ಲಿಂದ ಬಿಟ್ಟು ಆ ಸೀಮೆಗೆ ಸೇರಿದ ಮಲ್ಲಿಪಟ್ಟಣ ಬೆಮ್ಮತ್ತಿ, [ಹೊಸನೂರು] § ಎಂಬ ಮೂರು ಗ್ರಾಮುವನ್ನು ತಮ್ಮ ಕಡೆಗೆ ಮಾಡಿಕೊಂಡು, [ಅಲ್ಲಿ] × ಲಕ್ಕಾಟೆ [ಕೋಟೆ] ‖ -ಟ್ಟಿಕೊಂಡು ರಾಜ್ಯ ಯಿಟ್ಟು, ಮೈಸೂರವರು ಹೋದಲ್ಲಿ, ಕೊಡಗು ಜನ ಹೋಗಿ [ರೈತರ] = ನಿಲ್ಲುವದಕ್ಕೆ

† ಬ ಈಗ ಹೊಸತಾಗಿ ನೀವು ಬೇಲೂರು ನಾಯಕರ

± ಬ ವೀರಪ್ಪ ಒಡೆಯರವರಿಗೂ

* ಬ ಆ ಏಳು ಸಾವಿರ ಸೀಮೆಯಲ್ಲಿ ಗಿಡ ಸರಹದ್ದಿನ ಸೀಮೆ

§ ಬ ಹೊಸೂರು

× ಬ ಬೆಮ್ಮತ್ತಿ ಮಲ್ಲಿಪಟ್ಟಣ ಎಂಬಲ್ಲಿ

‖ ಬ ಕೋಟೆಗಳ

= ಬ ಅಲ್ಲಿ ರೈತರ

ಬಿಡದೆ ಲೂಟಿಮಾಡಿ, ಸೀಮೆ ಕೈರಾನು ಮಾಡುತ್ತ ಇದ್ದಲ್ಲಿ, ದೊಡ್ಡ ವೀರಪ್ಪ ಒಡೆಯರಿಗೆ ಚಿಕ್ಕದೇವರಾಜ ಒಡೆಯರು ಬರೆದು ಕಳುಹಿಸಿದ ವಿವರ— "ನಾವು ನೀವು ಜಗಳ ಮಾಡಿಕೊಂಡು ಸೀಮೆ ಹಾಳು ಮಾಡಿದ್ದುಂಟಾದರೆ ಉಭಯಸ್ತರಿಗೂ ನಷ್ಟವೇ ಸರಿ. ಈ ಬಗ್ಗೆ ನೀವು ಕಟ್ಟಿಕೊಂಡಿರುವ ಏಳು ಸಾವಿರ ಸೀಮೆ ವಳ್ಳಿತವಾದ ಕೆಲವು ಸೀಮೆ ನಾವು ಕಟ್ಟಿಕೊಂಡು ಇರುವಂಥದನ್ನು ನಿಮ್ಮ ಕಡೆಗೆ ಮಾಡಿಕೊಂಡು ಅದರಿಂದ ವಸೂಲಾದಂಥ ಹಣವನ್ನು ನಮಗೆ ಕೊಡಿ" ಯೆಂಬಡಾಗಿ ನಮಗೆ ಬರೆಸಿ ಕಳುಹಿಸಿಯಿರುವದರಿಂದ, ಆ ಮಾತಿಗೆ ಒಪ್ಪಿಕೊಂಡು, ಆ ಹೋಬಳಿಗಳನ್ನು ಏಳು ಸಾವಿರ ಸೀಮೆಗೆ ಸೇರಿಸಿಕೊಂಡು, ಆ ಹೋಬಳಿಗಳಿಂದ ವಸೂಲಾದ ಹಣಗಳನ್ನು ಏಳು ಸಾವಿರ ಸೀಮೆ ಪಾರುಪತ್ಯಗಾರನು ದೊಡ್ಡ ವೀರಪ್ಪ ಒಡೆಯರವರ ಹುಕುಂ ಪ್ರಕಾರ ಕೊಡುತ ಇದ್ದನು. ಆದ್ದರಿಂದ ಆ ಏಳು ಸಾವಿರ ಸೀಮೆ(ಗೆ) ಇತ್ತೆರಿಗೆ ಸೀಮೆ ಯೆಂದು ಹೆಸರಾಯಿತು.

ಹಾಗೆ ಇರುತ್ತಯಿದ್ದಲ್ಲಿ, ಕೆಲವು ದಿವಸದ ಮೇಲೆ ಚಿಕ್ಕದೇವರಾಜ ಒಡೆಯರು ತೀರಿ ಹೋಗಿ, ದೊಡ್ಡ ಕೃಷ್ಣದೇವರಾಜ ಒಡೆಯರಿಗೆ ಪಟ್ಟವಾಯಿತು ಅದೇ ತರುವಾಯ ಇಕ್ಕೇರಿ ಸಂಸ್ಥಾನದ ಸೋಮಶೇಖರ ನಾಯಕರು ಚಿರಕಲ್ಲ ಸೀಮೆ ಕಟ್ಟಿಕೊಳ್ಳಬೇಕೆಂಬ ಅಪೇಕ್ಷೆಯಿಂದ ದಂಡು ಸಮೇತ ನೀಲೇಶ್ವರದ ಮಾರ್ಗವಾಗಿ ಬಂದು ಜಗಳ ಮಾಡಿ ಚಿರಕಲ್ಲ ಅರವಾಸೆ ಸೀಮೆಯನ್ನು ಸಾಧಿಸಿಕೊಂಡು ಅಲ್ಲಲ್ಲಿ ಲಕ್ಕಾಡಿ ಕೋಟೆಗಳ ಹಾಕಿಸಿ, ಠಾಣ್ಯಾಯಿಟ್ಟು, ಮತ್ತು ಬಾಕಿ ಸೀಮೆಯನ್ನು ಆಕ್ರಮಿಸಿಕೊಳ್ಳತಕ್ಕ ಬಗ್ಗೆ [ಲುಟಾಯಿಸಿದ್ದಲ್ಲಿ]† ಆ ಚಿರಕಲ್ಲ ವೀರವರ್ಮ ರಾಜರು ಜಗಳ ಮಾಡಲಾರದೆ ದೈನ್ಯೋಕ್ತಿಯಿಂದ ದೊಡ್ಡ ವೀರಪ್ಪ ಒಡೆಯರಿಗೆ ಕಾಗದ ಬರೆದು ಕಳುಹಿಸಿದ ವಿವರ— "ಇಕ್ಕೇರಿ ಸಂಸ್ಥಾನದ ಸೋಮಶೇಖರ ನಾಯಕರು ಭಾರಿ ದಂಡು ತೆಗೆದುಕೊಂಡು ಬಂದು ನಮ್ಮ ಅರೆವಾಸಿ ಸೀಮೆಯನ್ನು ಕಟ್ಟಿಕೊಂಡು, ಅಲ್ಲಲ್ಲಿ ಲಕ್ಕಾಡಿ ಕೋಟೆಗಳ ಹಾಕಿ ಠಾಣ್ಯ ಯಿಟ್ಟುಕೊಂಡು, ಮತ್ತು ಮುಂದೆ ಬಡಾಯಿಸಿಕೊಂಡು ಬರುತ್ತಾರೆ. ಅವರ ಸಂಗಡ ಜಗಳ ಮಾಡಿ ನಿಸ್ತರಿಸುವದಕ್ಕೆ ತೀರದು ಈ ಬಗ್ಗೆ ತಾವೂ ಅವರೂ ಸ್ವಕೀಯಸ್ಥರಾದ್ದರಿಂದ

† ಬ ಲೂಂಟಾಯಿಸಿದ್ದಲ್ಲಿ

[ಮೆಹರ್ಬಾನಗಿ] ▭ ಮಾರ್ಗದಿಂದ ಸೋಮಶೇಖರ ನಾಯಕರು ನಮ್ಮ ಶೀಮೆ ಬಿಟ್ಟುಕೊಟ್ಟು ಅವರ ದಂಡು ಸಮೇತ ಇಕ್ಕೇರಿಗೆ ಹೋಗುವಂತೆ ಉಪಕಾರ ಮಾಡಿಸಿಕೊಡಬೇಕು"—ಎಂಬದಾಗಿ ಬರೆಸಿ ಕಳುಹಿಸಿದಲ್ಲಿ, ಅದಕ್ಕೆ ಜವಾಬು ಕೊಟ್ಟದ್ದು—"ಈ ಬಗ್ಗೆ ನಮ್ಮಿಂದ ಆಗತಕ್ಕ ಪ್ರಯತ್ನ ಮಾಡಿಯೇವು. ಅದರ ಮೇಲೆ ಮಹಾದೇವನ ಅಪ್ಪಣೆಯಿದ್ದಂತೆ ಆದೀತು. ತಾವು ಖಾತರ್‌ಜಮೆ ಆಗಿ ಇರಬೇಕು"—ಎಂಬದಾಗಿ ಬರೆಸಿ ಕಳುಹಿಸಿ ಈ ವಿವರ ಸೋಮಶೇಖರ ನಾಯಕರಿಗೆ [ಬರೆಸಿ]* ಕಳುಹಿಸಿದಲ್ಲಿ, ಅವರು ಜವಾಬು ಹೇಳಿ ಕಳುಹಿಸಿದ್ದು ಏನೆಂದರೆ—"ನಾವು ಹೇರಳ ಫವುಜು ತೆಗೆದುಕೊಂಡು ಬಂದು ಚೆರಕಲ್ಲ ರಾಜರ ಸಂಗಡ ಜಗಳ ಮಾಡಿ ಅವರ ಕಡೆ ನಾಯಮಾರರನ್ನು ನಿಗ್ರಹಿಸಿ ಅವರ ಅರೆವಾಸಿ ಸೀಮೆಯನ್ನು ಆಕ್ರಮಿಸಿಕೊಂಡು ಅಲ್ಲಲ್ಲಿ ಠಾಣ್ಯ ಯಿಟ್ಟು ಮಜಭೂತು ಮಾಡಿಯಿದ್ದೇವೆ. ಈ ಲಡಾಯಿದಲ್ಲಿ ನಮ್ಮ ಕಡೆ ಹೇರಳ ಮಂದಿ ಸತ್ತು ಹೋಯಿತು. ಇದಲ್ಲದೆ ದಂಡಿನ ಕರ್ಚು ಬಹಳ ಮುಟ್ಟಿಯಿದೆ. ಆದ್ದರಿಂದ ನಾವು ಸಲ್ಲಾಮಾಡಿ ಅವರ ಸೀಮೆ ಬಿಟ್ಟು ಕೊಡಲಿಕ್ಕೆ ಇಲ್ಲ"—ಎಂಬದಾಗಿ ಹೇಳಿ ಕಳುಹಿಸಿದಲ್ಲಿ, ಈ ವಿವರವನ್ನು ದೊಡ್ಡ ವೀರಪ್ಪ ಒಡೆಯರು ಚರಕಲ್ಲ ರಾಜರಿಗೆ ಹೇಳಿ ಕಳುಹಿಸಿದಲ್ಲಿ, ಮತ್ತು ಆ ರಾಜರು ಆಣೆ ಭಾಷೆ ಹಾಕಿ ಕರಾರುನಾಮಾ ದಸ್ಕತು ಮೊಹರದಿಂದ [ಬರಹದಲ್ಲಿ] × "ಅವರ ದಂಡಿನ ಕರ್ಚಿನ ಬಗ್ಗೆ ೧೮ ಲಕ್ಷ ರೂಪಾಯಿ ನಾವು ಕೊಡುತ್ತೇವೆ. ಈ ಮಾತಿಗೆ ತಾವು ಹೊಣೆಯಾಗಿ ಕಳಿಸಿಕೊಡಬೇಕು"—ಎಂಬದಾಗಿ ಪುನಃ ಬರೆಸಿ ಕಳುಹಿಸಿದರಿಂದ, ದೊಡ್ಡ ವೀರಪ್ಪ ಒಡೆಯರು ಆ ಕರಾರುನಾಮೆಯನ್ನು ನಂಬಿ, ಸೋಮಶೇಖರ ನಾಯಕರಿಗೆ ಶ್ರುತಪಡಿಸಿದಲ್ಲಿ, ಅವರು ಜವಾಬ ಹೇಳಿದ್ದು—"ಮಲೆಯಾಳದ ರಾಜರು ಮೋಸಗಾರರು. ಆಡಿದ ಮಾತು ಕೊಟ್ಟ ನಂಬಿ(ಕೆ)ಗೆ ಸರಿಯಾಗಿ ನಡೆಯುವವರಲ್ಲ. ಅವರ ಕರಾರುನಾಮೆ ನಂಬಿ ಈ ಹಣವಿಗೆ ನೀವು ಹೊಣೆಯಾಗಬೇಡ."—ಎಂದು ಹೇಳಿದಲ್ಲಿ, ದೊಡ್ಡ ವೀರಪ್ಪ ಒಡೆಯರು ಹೇಳಿದ್ದು—"ಚರಕಲ್ಲ ರಾಜರು ಈ ಹಣವಿಗೆ ಕೈಕಾಗದ ಬಹಳ ಬಗೆ ಆಣೆ ಭಾಷೆ ಹಾಕಿ

▭ ಬ ತಮ್ಮ ಮೆಹರ್ಬಾನಗಿ

* ಬ ಹೇಳಿ

× ಬ [ಬರೆದ್ದರಲ್ಲಿ---]

ಬರೆದು [ಇದ್ದಾರೆ] || ಈ ಬಗೆ ಹಣ ನಾವು ಏನು ಬಗೆಯಿಂದಲಾದರೂ ಬರಮಾಡಿ ತಮಗೆ ಸಂದಾಯ ಮಾಡಿಕೊಡುತ್ತೇವೆ"— ಎಂಬದಾಗಿ ಹೇಳಿದಲ್ಲಿ, ಸೋಮಶೇಖರ ನಾಯಕರವರು ಒಡಂಬಟ್ಟು, ಈ ಹಣವಿಗೆ ದೊಡ್ಡ ವೀರಪ್ಪ ಒಡೆಯರ ಕಯ್ಯಿಂದ [ಕಾಗದ] ± ಬರೆಸಿ ತೆಗೆದುಕೊಂಡು, ಆ ಚರಕಲ್ಲ ಸೀಮೆಯಲ್ಲಿ ಇಟ್ಟು ಯಿದ್ದ ಠಾಣ್ಯಯೆಬ್ಬಿಸಿಕೊಂಡು ಫವುಜಿನ ಸಂಗಡ ತಮ್ಮ ಸೀಮೆಗೆ ಹೋಗುವಾಗ್ಗೆ, ದೊಡ್ಡ ವೀರಪ್ಪ ಒಡೆಯರ ಬೇಟಿ ಆಗುವ ಬಗ್ಗೆ ಸುಬ್ರಹ್ಮಣ್ಯಕ್ಕೆ [ಹೋಗಿ] * ಅವರ ಕಂಡು ಬೇಟಿ ಆಗಿ, ಪುನಃ ಬಂದು ಕೆಲವು ಕಾರೆಕಾರರು ಹರಿಕಾರರು ಕೊಡಗು ಜನ ಮುಂತಾಗಿ ಚರಕಲ್ಲ ರಾಜರ ಬಳಿಗೆ ಹಣ ತರುವ ಬಗ್ಗೆ ಕಳುಹಿಸಿದಲ್ಲಿ, ಆ ಅರಸುಗಳು—"ಈ ಹಣ ನಾಲ್ಕು ಅಯಿದು ಗಡುಬದಲ್ಲಿ [ಕಳಿಸಿಕೊಡುತ್ತೇನೆ] †ಂಬದಾಗಿ ಹೇಳಿ, ಇಲ್ಲಿಂದ ಹೋದಂತ (ಹ) ಜನರನ್ನು ಇಟ್ಟುಕೊಂಡು, ಎರಡು ಮೂರು ಗಡಬದಲ್ಲಿ ಅರೆವಾಸಿ ಹಣ ಸಂದಾಯ ಮಾಡಿಕೊಟ್ಟು, ಬಾಕಿ ಹಣಕ್ಕೆ ವರಾತ ಮಾಡಿದಲ್ಲಿ ಹೋದಂತ (ಹ) ಜನರನ್ನು ತಳ್ಳಿಬಿಟ್ಟದರಿಂದ, ಆ ಜನರು ಬಂದು, ಆ ವಿವರ ದೊಡ್ಡ ವೀರಪ್ಪ ಒಡೆಯರಿಗೆ ಶ್ರುತಪಡಿಸಿದಲ್ಲಿ, ದಳವಾಯಿ ಭೋನಿ ಮುತ್ತಣ್ಣನನ್ನು ಈತನ ಸಂಗಡ ೫,೦೦೦ ಜನ ಕೊಡಗರ ಕೂಡಿಸಿ, ಚರಕಲ್ಲ ರಾಜರ ಬಳಿಗೆ ಕಳುಹಿಸಿದಲ್ಲಿ, ಆ ದಳವಾಯಿ ಬೋನಿ ಮುತ್ತಣ್ಣನು ಹಣಕ್ಕೆ ವರಾತ ಮಾಡಿದಲ್ಲಿ, ಆ ರಾಜರು ಇಂದು ನಾಳೆ ಕೊಡುತ್ತೇವೆಯೆಂತ ದಿನ ಹರಣ ಮಾಡಿದರಿಂದ—"ಈ ಮೇರೆ ಟಕ್ಕು ಮಾಡುವದು ಒಳ್ಳೆಯದಲ್ಲ. ಕರಾರು ಮೇರೆ ಹಣ ಕೊಡಿ"— ಯೆಂತ ಕಸ್ತು ವರಾತ ಹತ್ತಿಸಿದಲ್ಲಿ, ಇವಂದಿರನ್ನು ಹೊಡೆಯಬೇಕೆಂಬದಾಗಿ ಆ ಅರಸುಗಳು ಯೋಚಿಸಿ, ಗುಟ್ಟಿನಿಂದ ಅವರ ಮಂದಿಯನ್ನು ಜಮಾಯಿಸುತ್ತಾ ಇದ್ದಲ್ಲಿ, ಈ ಸಮಾಚಾರ ಕಣ್ಣೂರ [ರಾಜರು] § ಕೇಳಿ, ಕೆಲವು ಮಾಪಿಳೆಯರನ್ನು ಆ ದಳವಾಯಿ ಬಳಿಗೆ ಕಳುಹಿಸಿ,— "ಚೆರಕಲ್ಲ ರಾಜರು

|| ಬ [ಕಳುಹಿಸಿ ಇದ್ದಾರೆ]

± ಬ [ಕೈಕಾಗದ]

* ಬ ಬಂದು ಇಳಿದುಕೊಂಡು ಹೇಳಿಕಳುಹಿದಲ್ಲಿ, ದೊಡ್ಡ ವೀರಪ್ಪ ಒಡೆಯರು ಸುಬ್ರಹ್ಮಣ್ಯಕ್ಕೆ ಹೋಗಿ

† ಬ ಸಂದಾಯುತ ಮಾಡಿಕೊಡುತ್ತೇವೆ

§ ಬ [ಅಲಿರಾಜರು]

ನಿಮಗೆ ಕರಾರು ಮೇರೆ ಹಣ ಕೊಡುವುದು ಇಲ್ಲ. ಅವರ ಕಡೆ ಜನರಿಂದ ನಿಮ್ಮ ಜನರ ಯಾವತ್ತು ಒಂದು ಉಳಿಯದೆ ಹೊಡೆಯಬೇಕು ಯೆಂತ ಯೋಚಿಸಿಯಿದ್ದಾರೆ. ನೀವು ಅಲ್ಲಿ ನಿಲ್ಲ ಬೇಡ"- ಎಂತ ತಿಳಿಸಿದ್ದರಿಂದ "ಇನ್ನು ಇಲ್ಲಿ ನಿತ್ತರೆ ಮೋಸ ಮಾಡಿಯಾರು. ಈ ಬಗ್ಗೆ ಕೊಡಗಿಗೆ ಹೋಗುವ ಬಗ್ಗೆ ಮಾರ್ಗ ಬಂದು ಮಾಡಿಯಿದ್ದಾರು. ಆದ್ದರಿಂದ ಕಣ್ಣೂರಿಗೆ ಹೋಗಿ ವಿಚಾರಿಸಿಕೊಂಡು ಹೋಗಬಹುದು"— ಎಂಬದಾಗಿ ದಳವಾಯಿ ಭೋನಿ ಮುತ್ತಣ್ಣನು ಸಂಗಡ ಯಿದ್ದ ಕೊಡಗ ಜನ ಯಾವತ್ತು ತೆಗೆದುಕೊಂಡು ರಾತಾರಾತ್ರಿಯೆ ಕಣ್ಣೂರಿಗೆ ಹೊರಟು ಹೋಗುವಲ್ಲಿ, ಚರಕಲ್ಲ ರಾಜರ ಕಡೆ ಜನ ಬಂದು ಮಾರ್ಗದಲ್ಲಿ ತಡೆದರಿಂದ, ಅವರಿಗೆ ದಕ್ಕದೆ ಜನಾನೂ ತೆಗೆದುಕೊಂಡು ರಾತ್ರಿಯೇ ಕಣ್ಣೂರಿಗೆ ತಲುಪಿದರಿಂದ, ಕೊಡಗಿಗೆ ಬರುವಂಥಾ ಮಾರ್ಗಕ್ಕೆಲ್ಲಾ ಮುಂದಿಯಿಟ್ಟು, ಚರಕಲ್ಲ ರಾಜರು ಮಾರ್ಗ ಕಟ್ಟಿಯಿದ್ದರು. ಈ ವರ್ತಮಾನು ಕಣ್ಣೂರು [ರಾಜರು]§ ತಿಳಿದು,— " ಈ ಮಾರ್ಗವಾಗಿ [ಹೋದದ್ದೇ] ± ಉಂಟಾದರೆ ನಿಮಗೂ ನಿಮ್ಮ ಸಂಗಡ ಇರುವ ಜನರಿಗೂ ಸಹ ಮೋಸ ಮಾಡಿಯಾರು"- ಯೆಂದು ಹೇಳಿ ಆ ದಳವಾಯಿಗೂ ಆ ೫೦೦೦ ಕೊಡಗರಿಗೂ ಪತ್ತೇಮಾರಿ ಮೇಲೆ (ಹಾಕಿಸಿ)† ಇಕ್ಕೇರಿ ವಳ್ಳಿತವಾದ ಮಂಗಳೂರು ಪೈಕಿ ಕುಂಬಳೆ ತಾಲೂಕಿನಲ್ಲಿ ಇಳಿಸಿ ಬಿಟ್ಟರು. ಆ ಬಳಿಕ ದಳವಾಯಿ ಮುತ್ತಣ್ಣನು ಆ ಜನರ ಕರೆದುಕೊಂಡು ತುಳುವನಾಡು ಮಾರ್ಗವಾಗಿ ಕೊಡಗಿನ ಸೀಮೆಗೆ ಬಂದನು. ಈ ಚರಕಲ್ಲ ರಾಜರಿಂದ ಕರಾರು ಮೇರೆ ಬರತಕ್ಕ ಹಣವಿನಲ್ಲಿ ಬಾಕಿ ನಿಂತು ಇದ್ದ ಅರೆವಾಸಿ ಹಣವನ್ನು ತಮ್ಮ ಕೈಯಿಂದ ಕಳುಹಿಸಿಕೊಟ್ಟರು ಈ ಚರಕಲ್ಲ ರಾಜರು ಅರೆವಾಸಿ ಹಣ ಕೊಡದೆ ದಗಾ ಮಾಡಿದ ವಿವರವನ್ನು ಸೋಮಶೇಖರ ನಾಯಕರಿಗೆ ಬರೆಸಿ ಕಳುಹಿದಲ್ಲಿ, ಅವರು ಕೇಳಿ ದೊಡ್ಡ ವೀರಪ್ಪ ಒಡೆಯರ(ನ್ನು) ಇಕ್ಕೇರಿಗೆ ಕರೆಸಿಕೊಂಡು—"ಮಲೆಯಾಳದ ಅರಸುಗಳು ಮೋಸಗಾರರು ಅವರ ಮಾತು ನಂಬಬಾರದು— ಎಂಬುದಾಗಿ ಮೊದಲೇ ನಾವು ಹೇಳಿದ್ದು ಕೇಳದೆ, ಆವರ ಮಾತು ನಂಬಿಕೊಂಡು, ನಾವು ಕಟ್ಟಿಕೊಂಡು ಇದ್ದ ಸೀಮೆಯನ್ನು ಅವರಿಗೆ ಬಿಡಿಸಿಕೊಟ್ಟು, ಅವರ

---

§ ಬ [ಆಲಿರಾಜರು]

± ಬ [ನೀವು ಹೋದದ್ದೇ]

† ಬ (ಹತ್ತಿಸಿ)

ಕಡೆಯಿಂದ ಬರತಕ್ಕ ಹಣ ತಮ್ಮ ಕೈಯಿಂದ [ಕೊಟ್ಟರು.]" = ಎಂಬದಾಗಿ ಬಹಳ ನೊಂದುಕೊಂಡು, ಆವಾಗ್ಗೆ 'ನೀವು ನಮಗೆ ಸ್ವಕೀಯಸ್ಥರೇ ಹೊರತು ಬೇರೊಂದಲ್ಲ' ಎಂಬದಾಗಿ ಏಕೀಕರ ಮಾರ್ಗದಿಂದ ತುಳುವ ನಾಡು ವಳಿಕವಾದ ಮೂಡನಂಬತ್ತು ಮಾಗಣೆಯಿಂದ ಈ ಕೊಡಗಿನ ಘಟ್ಟದ ಸರಹದ್ದಿಗೆ ಮುಟ್ಟಿ ಇರುವಂತ (ಹ) ಕೆಲವು ಮಾಗಣೆಗಳಿಂದ ಕೆಲವು ಗ್ರಾಮಗಳ (ನ್ನು) ವಿಂಗಡಿಸಿ, ದೊಡ್ಡ ವೀರಪ್ಪ ಒಡೆಯರಿಗೆ ಹಾಲು ಬೆಣ್ಣೆಗೆ ಎಂಬದಾಗಿ ಅದಕ್ಕೆ,— ಅಮೃತ ಉದ್ದಿಶ್ಯವಾಗಿ ಕೊಂಟ್ಟಂತಾದ್ದು ಇದರ ಹೆಸರು ಅಮರಸುಳ್ಯ— ಎಂಬದಾಗಿ [ಸೋಮ] × ಶೇಖರನಾಯಕರು ನೂತನವಾಗಿ ಹೆಸರು [ಯಿಟ್ಟರು]. ‖ ಆ ತದನಂತರ "ಕಾವೇರಿ ಅಮ್ಮ ದೇವರ ಪೂಜೆ ಬಗ್ಗೆ ಈ ಕೊಡಗಿನ ಸೀಮೆಯಲ್ಲಿ ತೆಂಗಿನಕಾಯಿ ಫಲವಿಲ್ಲದ್ದರಿಂದ ಆ ದೇವರ ಪೂ[illegible] ಬಗ್ಗೆ ಕಾಯಿ ಬೇಕಾಗುತ್ತದೆ. ಸುಳ್ಯದ ಮಾಗಣೆಯು ಆ ದೇವಸ್ಥಾನಕ್ಕೆ ಸಮೀಪವಾಗಿಯಿದೆ. ಇದನ್ನು ಕೊಡಿಸಿಕೊಡಬೇಕು. ಆ ಮಾಗಣೆಗೆ ಆದ ಕ್ರಯ [ವನ್ನು] * ಕೊಡಿಸಿ ಕೊಡುತ್ತೇವೆ." ಎಂಬದಾಗಿ ಸೋಮಶೇಖರ ನಾಯಕರ ಸಂಗಡ ಕೇಳಿದಲ್ಲಿ, ಅವರು ಒಪ್ಪಿದರಿಂದ ಕಾವೇರಿ ಅಮ್ಮನವರ ಬಂಡಾರದಿಂದ ಅದಕ್ಕೆ ಸಲುವ ಹಣ ಕೊಟ್ಟರು. ಆವಗ್ಗೆ ಸುಳ್ಯದ ಮಾಗಣೆಯನ್ನು ವಿಂಗಡಿಸಿ [ಬೆಂಗು] § ಮಲೆ ಒಡ್ಡಿನಲ್ಲು ತೋರಣ ಕಟ್ಟಿಸಿ, ಕೊಡಗಿನ ಸೀಮೆಗೆ ಸೇರಿಸಿ ಕೊಟ್ಟರು. ಅಮರಸುಳ್ಯ ಸಹ ಕೊಡಗಿನ ಸಂಸ್ಥಾನಕ್ಕೆ ಸೇರಿ [ಈಗ ಸಂಸ್ಥಾನಕ್ಕೆ] † ನಡೆದು ಬರುತ್ತಯಿದೆ. ಈ ಮೇರೆ ಇರುತ್ತಯಿದ್ದಲ್ಲಿ, ಇಕ್ಕೇರಿ ಸಂಸ್ಥಾನದ ಸೋಮಶೇಖರ ನಾಯಕರವರು ತೀರಿ ಹೋಗಿ ಬೂದಿ ಬಸವಪ್ಪ ನಾಯಕರಿಗೆ ಪಟ್ಟವಾಯಿತು. ಇತ್ತಲಾಗಿ ದೊಡ್ಡ ವೀರಪ್ಪ ಒಡೆಯರ ಕುಮಾರರಾದ ಅಪ್ಪಾಜಿ ರಾಜರಿಗೆ ಮದುವೆ ಮಾಡಿ ಕೊಟ್ಟಂತ (ಹ) ಪಟ್ಟ[illegible] ಇದ್ದಂತೆ ಒಂದು ಸಾಮಾನ್ಯ ಸ್ತ್ರೀಯನ್ನು ಇಟ್ಟುಕೊಂಡು ಆಕೆ (ಯ) ಮಾತು ಕೇಳಿ ತಮ್ಮ ರಾಣಿಗೆ ಕಿರು

= ಬ ಕೊಟ್ಟರಿ.

× ಬ ಅವಾಗ್ಗೆ ಸೋಮ

‖ ಬ ಇಟ್ಟುಕೊಟ್ಟರು

* ಬ ಹಣವನ್ನು

§ ಬ ಬೇಗು

† ಬ ಕೊಡಗಿನ ಕೂಡೆ ಎರಕವಾಗಿ

ಕುಳ ಮಾಡುತ್ತ ಇದ್ದಲ್ಲಿ, ಈ ಕಿರುಕುಳ ತಡೆಯಲಾರದೆ ಆ ರಾಣಿಯು(ವ)ರು ಸೇದುವ ಬಾವಿಗೆ ಬಿದ್ದು ಮೃತಪಟ್ಟಿದ್ದರಿಂದ, ಈ ವಿವರ ದೊಡ್ಡ ವೀರಪ್ಪ ಒಡೆಯರು ತಿಳಿದು, ಅಪ್ಪಾಜಿರಾಜ ಅರಸುಗಳಿಗೂ ಅವರ ಪಟ್ಟಸ್ತ್ರೀಯವರ ಗರ್ಭದಲ್ಲಿ ಜನಿಸಿದಂತ (ಹ) ಕುಮಾರ ಚಿಕ್ಕವೀರಪ್ಪ ಒಡೆಯರಿಗೂ ಸೆರೆಮನೆಯಲ್ಲಿ ಹಾಕಿಸಿದರು. ಈ ಮೇರೆ ೧೨ ವರ್ಷ ಪರ್ಯಂತರ್ಕ ಸೆರೆಯೊಳಗೆ ಇದ್ದು, ಅದರ ಒಳಗೆ ಅಪ್ಪಾಜಿರಾಜರು ಮೃತವಾದರು. ಆ ಬಳಿಕ ಕೆಲವು ಅಪ್ತರಾದಂತ (ಹ) ಕೊಡಗರು ದೊಡ್ಡ ವೀರಪ್ಪ ಒಡೆಯರಿಗೆ ಅರಿಕೆ ಮಾಡಿಕೊಂಡ ವಿವರ—"ಅಪ್ಪಾಜಿರಾಜರು ಅಪರಾಧ ಮಾಡಿ ಸೆರೆಮನೆಯೊಳಗೆ ಬಿದ್ದು ಮೃತವಾದರು. ಅವರ ಕುಮಾರರು ನಿರಪರಾಧವಾಗಿ ಸೆರೆಯಲ್ಲಿ ಬಿದ್ದುಯಿದ್ದಾರೆ. ತಾವು ಆದರೆ ಮುಪ್ಪಿನವರಾದಿರಿ. ಮುಂದೆ ಈ ರಾಜ್ಯಭಾರ ಮಾಡಿಕೊಂಡು ನಮ್ಮ [ಸರ್ವ) * ರನ್ನೂ ರಕ್ಷಣ್ಯ ಮಾಡುವದಕ್ಕೆ ಕರ್ತರು ಯಾರು? ಈ ಬಗ್ಗೆ ಸೆರೆಮನೆಯೊಳಗೆಯಿರುವ ಆ ಕುಮಾರರನ್ನು ಸೆರೆಯಿಂದ ಬಿಟ್ಟು ರಕ್ಷಿಸಿ ತಮ್ಮ ದೊರೆತನದಲ್ಲಿ ನಿಲ್ಲಿಸಬೇಕು" ಎಂಬದಾಗಿ ಅರಿಕೆ ಮಾಡಿಕೊಂಡದ್ದರಿಂದ ದೊಡ್ಡ ವೀರಪ್ಪ ಒಡೆಯರು ಆ ಮಾತಿಗೆ ಒಡಂಬಟ್ಟು ಆ ಸೆರೆಯೊಳಗೆ ಇದ್ದ ತಮ್ಮ ಮೊಮ್ಮಗನಾದ ಚಿಕ್ಕ ವೀರಪ್ಪ ಒಡೆಯರನ್ನು ಸೆರೆಯಿಂದ ಬಿಟ್ಟು ಕಲಿಸಂದ ೪೮೩೨ನೇ ಸಾಧಾರಣ ಸಂವತ್ಸರದಲ್ಲಿ ಅವರಿಗೆ ಪಟ್ಟಾಭಿಷೇಕವನ್ನು ಮಾಡಿಸಿದರು. † [ಅವರು] ಚಿಕ್ಕಂದಿನಾರಭ್ಯ ಸೆರೆಮನೆಯೊಳಗೆ ಇದ್ದದ್ದರಿಂದ ಶರೀರದಲ್ಲಿ ಆದರು ವಾಯು ಸಂಭವಿಸಿಕೊಂಡುಯಿತ್ತು. ಈ ಮೇರೆ ಇರುತ್ತಯಿದ್ದಲ್ಲಿ ಕಲಿ ಸಂದ ೪೮೩೭ ನೇ ಆನಂದ ಸಂವತ್ಸರದಲ್ಲಿ ದೊಡ್ಡವೀರಪ್ಪ ಒಡೆಯರು ಶಿವಾಧೀನರಾದರು. ಇವರ ಸಂಗಡಲೇ ಇವರ ಪಟ್ಟದರಾಣಿಗಳಾದ ಇಬ್ಬರಮ್ಮನವರು ಸಹಗಮನ ಮಾಡಿದರು.

ಆ ತರುವಾಯದಲ್ಲಿ ಮೈಸೂರು ಸಂಸ್ಥಾನದಲ್ಲು ದೊಡ್ಡಕೃಷ್ಣರಾಜ ಒಡೆಯರು ಇಕ್ಕೇರಿ ಸಂಸ್ಥಾನದಲ್ಲಿ ಬೂದಿ ಬಸವಪ್ಪ ನಾಯಕರು ಸಹ ಆ ಆ ಸಂಸ್ಥಾನದಲ್ಲಿ ರಾಜ್ಯಭಾರ ಮಾಡಿಕೊಂಡುಯಿದ್ದರು. ಈ ಮೇರೆ ಇರುತ್ತ ಇರುವಲ್ಲಿ ದೊಡ್ಡ ವೀರಪ್ಪ ವಡೆಯರವರ ತಮ್ಮಂದಿರಾಗಿ

---

* ಬ ಸರ್ವೇಜನ

† ಬ ಆ ಚಿಕ್ಕ ವೀರಪ್ಪ ಒಡೆಯರವರು.

ಹಾಲೇರಿಯಲ್ಲು ಇದ್ದ ಅಪ್ಪಾಜಿರಾಜರು ಸ್ವರ್ಗಸ್ಥರಾದರು. ಹಾಗೆ ಕೆಲವು ದಿವಸದೊಳಗೆ ಹೊರಮಲೆಯಲ್ಲಿ ಇದ್ದ ನಂದರಾಜರೂ ಮೃತವಾದರು. ಅದೇ ತದನಂತರದಲ್ಲಿ, ಮೈಸೂರು ಕೃಷ್ಣರಾಜ ಒಡೆಯರು ತೀರಿ ಹೋಗಿ ಚಾಮರಾಜ ಒಡೆಯರಿಗೆ ಪಟ್ಟವಾಗಿ ಇದ್ದಲ್ಲಿ, ಅವರು [ತೀರಿ ಹೋದ ಮೇಲೆ] † ಪಟ್ಟದ ಸ್ತ್ರೀಯವರ ಮೇಲೆ ಕಣ್ಣು ಇಟ್ಟದ್ದರಿಂದ, ಈ ವಿವರ ಆ ರಾಣಿಯವರು ದಳವಾಯಿ ದೇವರಾಜರಿಗೆ ಹೇಳಿಕಳು ಹಿಸಿದಲ್ಲಿ— "ಈ ನಡತೆ ಒಳ್ಳೇದಲ್ಲ. ಅಪಕೀರ್ತಿ ಬಂದೀತೆ"ಂದು ದಳ ವಾಯಿಯು ಚಾಮರಾಜ ಒಡೆಯರಿಗೆ ಹೇಳಿದಲ್ಲಿ— "ಈ ಮೇರೆ ಹೇಳುವಂ ತದ್ದು ಚಾಕರರನ ಮರ್ಯಾದೆಯಲ್ಲ" ಎಂದು ಅವರಮೇಲೆ[ಸಿಟ್ಟು]§ಮಾಡಿ, 'ನೀವು ಪಟ್ಟಣದ ಒಳಗೆ ಇರಬೇಡ. ಒಂದು ಗಡಿ ಒಳಗೆ [ಇದ್ದು]± ಕೊಳ್ಳಿ— ಎಂಬದಾಗಿ ದಳವಾಯಿ ದೇವರಾಜರಿಗೆ ಹೇಳಿದರಿಂದ, ಅವರು ಬೆಂಗಳೂರು ನಂದರಾಜ ಅರಸುಗಳು [ಸಹ] * ಕೂಡಿ, ಚಾಮರಾಜ ಒಡೆಯರನ್ನು ಕಪಾಲದುರ್ಗಕ್ಕೆ ಹಾಕಿ ಬಿಟ್ಟರು. ಆವಾಗ್ಗೆ ಅವರಿಗೆ ಪಟ್ಟವಾಗಿ ೧೮ ತಿಂಗಳು ಆಗಿಯಿತ್ತು. ಆ ಮೇಲೆ ಚಿಕ್ಕ ಕೃಷ್ಣರಾಜ ಒಡೆಯರಿಗೆ ೧೦ ವರುಷದ ಪ್ರಾಯದಲ್ಲಿ ತಂದು ಪಟ್ಟ ಕಟ್ಟಿದರು. ಅದೇ ತದನಂತರದಲ್ಲಿ ಇಕ್ಕೇರಿ ಸಂಸ್ಥಾನದ ಬೂದಿ ಬಸವಪ್ಪನಾಯಕರು ತೀರಿ ಹೋಗಿ,' ಅವರ ಕುಟುಂಬವಾದ ಈರಮ್ಮಾಜಿ ಎಂಬ ರಾಣಿಯವರು ದೊರೆತನ ಮಾಡಿಕೊಂಡು ಇದ್ದರು. ಆವಾಗ್ಗೆ ಈ ಮೂರು ಸಂಸ್ಥಾನದಲ್ಲಿಯೂ ರಾಜಕಾರ್ಯಕಾರಣ [ಗಳು]ꟗ ಈ ಮೇರೆ ಇರುತ್ತ ಇದ್ದಲ್ಲಿ, ಚಿಕ್ಕ ಕೃಷ್ಣರಾಜ ಒಡೆಯರಿಗೆ ದಳವಾಯಿ ದೇವರಾಜ ಅರಸುಗಳ ತಮ್ಮನಾದ ಕರಚೂರಿ ನಂದರಾಜ ಅರಸುಗಳ ಮಗಳನ್ನು ಮದುವೆ ಮಾಡಿದರು. ಆವಾಗ್ಗೆ [ನಂದ] × ರಾಜ ಅರಸುಗಳು ಸರ್ವಾಧಿಕಾರ ಮಾಡಿಕೊಂಡ ಯಿದ್ದರು. ಇವರ ಬಳಿಯಲ್ಲಿ ಹೈದರು ನಾಯಕನು ಕೆಲವು ಮಂದಿ ಸಹಿತವಾಗಿ ಚಾಕರಿಮಾಡಿಕೊಂಡು ಇದ್ದನು. ಆ ತದನಂತರ

---

† ಬ ಆ ತೀರಿ ಹೋದ ಕೃಷ್ಣರಾಜ ಒಡೆಯರವರ

§ ಬ ಚಾಮರಾಜ ಒಡೆಯರು ಸಿಟ್ಟು

± ಬ ಹೋಗಿ ಇದ್ದು

* ಬ ಮದ್ದಗಿರಿ ನಂದರಾಜ ಅರಸಗಳು ಸಹ

ꟗ ಬ ಗಳು ಇರಲಿಲ್ಲ.

× ಬ ಕರಾಚೂರಿ ನಂದ

ದಲ್ಲಿ ನವಾಬ್ ಚಂದಾಸಾಹೇಬರು ಎಂಬವರು ತ್ರಿಚ್ಚಿನಪಳ್ಳಿ ಕೋಟೆ ತೆಗೆದುಕೊಳ್ಳಬೇಕು ಎಂಬದಾಗಿ ಆ ಕೋಟೆಗೆ ಮುತ್ತಿಗೆ ಹಾಕಿಕೊಂಡು ಇದ್ದದ್ದರಿಂದ, ಮಮ್ಮದಲ್ಲಿ ಖಾನರು ಕರಚೂರಿ ನಂದರಾಜ ಅರಸುಗಳಿಗೆ ಬರೆಸಿ ಕಳುಹಿಸಿದ ವಿವರಃ— "ನೀವು ನಿಮ್ಮ ಪವುಜು ತೆಗೆದುಕೊಂಡು ಬಂದು ಸಹಾಯ ಮಾಡಬೇಕು"— ಎಂಬದಾಗಿ ಬರೆಸಿ ಕಳುಹಿಸಿದಲ್ಲಿ, ಈ ಮಾತು ಕೇಳಿ ಇವರು ಪವುಜು ತೆಗೆದುಕೊಂಡು ಬಂದು ಗುತ್ತಿ ಮುರಾ(ರಿ)ರಾವು ಕಡೆ ಪವುಜು ಸಹ ಕುಮ್ಮಕ್ಕಾಗಿ ತೆಗೆದುಕೊಂಡು, ತ್ರಿಚ್ಚಿನಪಳ್ಳಿಗೆ ಹೋದರು. ಆವಾಗ್ಗೆ ಹೈದರ ನಾಯಕನು ಕರಾಚೂರಿ ನಂದರಾಜರ ಸಂಗಡ ಯಿದ್ದನು. ಮಮ್ಮದಲ್ಲಿ ಖಾನರು ಕುಮ್ಮಕ್ಕಿಗೆ ಇಂಗ್ರೇಜಿಬಹದ್ದರ ಸರಕಾರದ ಪವುಜು ಕರೆಸಿಕೊಂಡು, ಚಂದಾಸಾಹೇಬರ ಸಂಗಡ ಲಡಾಯಿ ಮಾಡಿ, ಚಂದಾಸಾಹೇಬರ ಪವುಜು ಯಾವತ್ತೂ ಮುಳುಗಿಸಿದರು. ಆ ಮೇಲೆ ಅವರು ಓಡಿ ಹೋಗಿ ಜಂಬುಕೇಶ್ವರ ದೇವರ ಗುಡಿ ಹೊಕ್ಕುಕೊಂಡು ಇದ್ದದ್ದರಿಂದ, ಅವರಿಗೆ ಮಮ್ಮದಲ್ಲಿ ಖಾನರು ಹಿಡಿತರಿಸಿ, ತಲೆ ಹೊಡೆದು ಬಿಟ್ಟರು. ಆ ಬಳಿಕ ಕೆಲವು ದಿವಸ ಕರಚೂರಿ ನಂದರಾಜ ಅರಸುಗಳು ಅಲ್ಲಿ ಇದ್ದು, ಪುನಃ ಶ್ರೀರಂಗಪಟ್ಟಣಕ್ಕೆ ಬಂದರು. ಆ ಚಂದಾಸಾಹೇಬರ ಲಡಾಯಿದ ಸಮಯದಲ್ಲಿ ಹೈದರ ನಾಯಕನು ಕೆಲವು ಸಾಮಾನು ಫಿರಂಗಿ ಮುಂತಾಗಿ ಲೂಟಿ ಮಾಡಿಕೊಂಡು ಸ್ವಲ್ಪ ಪ್ರಬಲಿಸಿದನು.—"ಆ ಬಳಿಕ ಕರಚೂರಿ ನಂದರಾಜ ಅರಸುಗಳು ತ್ರಿಚ್ಚನಾಪಳ್ಳಿ ಲಡಾಯಕ್ಕೆ ಹೋಗಿ ಹೇರಾಳ ದ್ರವ್ಯ ಕರ್ಚು ಮಾಡಿದನು. ಕಾರ್ಯವು ಕೂಡಿ ಬರಲಿಲ್ಲ"— ಎಂಬದಾಗಿ ಚಿಕ್ಕ ಕೃಷ್ಣರಾಜ ಒಡೆಯರು ಪ್ರಸ್ತಾಪ ಮಾಡಿದ್ದರಿಂದ, ಅದನ್ನು (ಅವರು) * ತಿಳಿದು ತಿರುಗಿ ಬಿದ್ದು, ಆ ಕೃಷ್ಣರಾಜ ಒಡೆಯರ ಅರಮನೆಗೆ ಗುಂಡು ಹೊಡೆದು ಅವರ ಸಾವಾಧಿಕರನ್ನು [ಅಜ್ಞೆ] || ಮಾಡಿಸಿ, ಅವರ ಮನೆಗೆ ಪಾರಾ ಯಿಟ್ಟು ಬಂದೋಬಸ್ತು ಮಾಡಿದರು. ಈ ಮೇರೆ ನಾಲ್ಕು ವರ್ಷ ಕಳೆಯಿತು.

ಅಷ್ಟರಲ್ಲಿ ಮೈಸೂರ ದೊಡ್ಡ ದಳವಾಯಿ ದೇವರಾಜರು ತೀರಿ ಹೋದ್ದರಿಂದ, ಅವರ ಕುಟುಂಬವಾದ ಚೆಲುವಾಜಮ್ಮಾಜಿಯವರು ಅಲ್ಲಿ ಬರೆವಣಿಗೆಯಲ್ಲು ಇದ್ದ ಕಂಡೇರಾವು ಎಂಬ ಬ್ರಾಹ್ಮಣನ ಕೂಡೆ ವ್ಯಭಿ

---

* ಬ ಕರಾಚೂರಿ ನಂದರಾಜ ಅರಸುಗಳು

|| ಬ ಹಿಡಿದು ಅಜ್ಞೆ

ಚಾರ ಮಾಡಿಕೊಂಡು, ಅವರು, ದೊಡ್ಡ ಕೃಷ್ಣರಾಜ ಒಡೆಯರ ರಾಣಿ ಯಾದ ದೊಡ್ಡಮ್ಮಾಜಿಯವರಿಗೆ ಹೇಳಿ ಕಂಡೇರಾಯನಿಗೆ ಸರ್ವಾಧಿಕಾರ ವನ್ನು ಕೊಡಿಸಿದ್ದರಿಂದ, ಕರಚೂರಿ ನಂದರಾಜ ಅರಸು ಈ ಅನ್ಯಾಯ ತಿಳಿದು ಕಂಡೇರಾಯನ ಹಿಡಿದು ಶಿಕ್ಷೆ ಮಾಡಬೇಕೆಂಬದಾಗಿ ಅವನ ಸಂಗಡ ಜಗಳ ಮಾಡಿದಲ್ಲಿ ಅವನು ಸಿಕ್ಕಲಿಲ್ಲ. ಆ ಬಳಿಕ ಹೈದರಲ್ಲಿ ನಾಯಕ ನಿಗೆ ಕರಚೂರಿ ನಂದರಾಜರು ಕೆಲವು ಪವುಜು ಕೂಡಿಸಿಕೊಟ್ಟು ಕಂಡೇ ರಾಯನ [ಸಂಗಡ] ± ಜಗಳ ಮಾಡಿ ಅವನನ್ನು ಹಿಡಿದು ಕಬ್ಬಿಣದ ಪಂಜರದೊಳಗೆ ಹಾಕಿ, ಕೊಂದು ಹಾಕಿ ಬಿಟ್ಟು, ದೊಡ್ಡ ಕೃಷ್ಣರಾಜ ಒಡೆಯರ ಕುಟುಂಬವಾದ ದೊಡ್ಡಮ್ಮ ಎಂಬ ಮುದ್ದಮ್ಮಾಜಿಯವರು ಚಿಕ್ಕ ಕೃಷ್ಣರಾಜ ಒಡೆಯರು ಸಹ ಇದ್ದ ಅರಮನೆಗೆ ಸುತ್ತ ಪಹಾರಿ ಇಟ್ಟು, ಶ್ರೀರಂಗಪಟ್ಟಣದ ಕೋಟೆಯನ್ನು ತನ್ನ ಕೈವಶ ಮಾಡಿಕೊಂಡು, ಹೈದ ರಲ್ಲಿಖಾನಬಹಾದರ ಎಂಬದಾಗಿ ಹೆಸರು ಇಟ್ಟುಕೊಂಡು, ಆ ವ್ಯಭಿ ಚಾರಿ ಚೆಲುವಮ್ಮಾಜಿ ಎಂಬವಳನ್ನು ದಳವಾಯಿ ಮನೆಯಿಂದ ತೆಗೆದು ಬೇರೆ ಒಂದು ಮನೆಯೊಳಗೆ ಮಡಗಿ ಬಿಟ್ಟು, ಆ ದಳವಾಯಿಯವರ ಮನೆ ಯಲ್ಲಿ ಹೈದರಲ್ಲಿಕಾನರು ಇಳುಕೊಂಡರು.

ಆ ತದನಂತರದಲ್ಲಿ, ಇತ್ತಲಾಗಿ ಇಕ್ಕೇರಿ ಸಂಸ್ಥಾನದಲ್ಲಿ ರಾಜ್ಯ ಭಾರ ಮಾಡಿಕೊಂಡು ಇದ್ದ ಬೂದಿಬಸವಪ್ಪನಾಯಕರ ಕುಟುಂಬ ಈ ರಮ್ಮಾಜಿಯವರು ನಂಬ್ಯಣ್ಣ ಎಂಬ ಚಾಕರನ ಸಂಗಡ ವ್ಯಭಿಚಾರ ಮಾಡಿಕೊಂಡು, ಪಟ್ಟಕ್ಕೆ ಸಲ್ಲುವಂತ (ಹ) ದೊರೆಮಗನನ್ನು ಜಟ್ಟಿಗಳ ಕೈ ಯಿಂದ ಕುತ್ತಿಗೆ ಮುರಿಸಿ ಕೊಂದುಹಾಕಿ, ತನ್ನ ಮಿಂಡನಾದ ನಂಬ್ಯಣ್ಣ ನಿಗೆ ಸರ್ವಾಧಿಕಾರವನ್ನು ಕೊಟ್ಟು ಮಡಗಿದಳು. ಈ ಸಮಾಚಾರ ಹೈದ ರಲ್ಲಿ ಕಾನರು ಕೇಳಿ, ಇಕ್ಕೇರಿ ಸಂಸ್ಥಾನವನ್ನು ಆಕ್ರಮಿಸಿಕೊಳ್ಳುವ ಬಗ್ಗೆ, ಯಾವತ್ತೂ ಪವುಜು ತೆಗೆದುಕೊಂಡು, ಚಿತ್ರಕಲ್ಲು ಬರಮನಾಯಕರು ಅವರ ಪವುಜು ಸಹ ತೆಗೆದುಕೊಂಡು ಹೋಗಿ, ಇಕ್ಕೇರಿ ಸಂಸ್ಥಾನದ ಕೋಟೆಗೆ ಮುತ್ತಿಗೆ ಹಾಕಿ, ಕಿಂಚಿತವಾಗಿ ಜಗಳಮಾಡಿ, ಅಲ್ಲಿ ಇದ್ದ ಜನರನ್ನು ತನ್ನ ವಶೀಕರಣಮಾಡಿಕೊಂಡು, ಮೋಸದಿಂದ ಲಡಾಯಿ ಮಾಡಿ, ಕಲಿಸಂದ ೪೮೬೪ ನೆ ಚಿತ್ರಭಾನು ಸಂವತ್ಸರದಲ್ಲಿ ಇಕ್ಕೇರಿ ಸಂಸ್ಥಾ

± ಬ ನಿಗ್ರಹಿಸು ಎಂಬದಾಗಿ ಹೇಳಿ ಮೈಸೂರಿಗೆ ಹೋದರು. ಹೈದರನಾಯಕರು ಕಂಡೇರಾಯನ ಸಂಗಡ

ನವನ್ನು ತೆಗೆದುಕೊಂಡು, ನಂಬ್ಯಣ್ಣ ಎಂಬವಗೆ ಹಿಡಿದು ಕೊಂದುಹಾಕಿ ಬಿಟ್ಟು, ಆ ಈರವಮ್ಮಾಜಿಯೆಂಬವಳನ್ನು ಕವಲೆದುರ್ಗದ ಮೇಲೆ ಸೆರೆಹಾಕಿ ಬಿಟ್ಟು, ಇಕ್ಕೇರಿ ಸಂಸ್ಥಾನದ ಹೆಸರು ಹೈದರುನಗರಯೆಂಬದಾಗಿ ಇಟ್ಟು, ತಮ್ಮ ಹೆಸರನ್ನು ನವಾಬು ಹೈದರಲ್ಲಿಖಾನ [ಎಂಬದಾಗಿ] * ಪರುತವಿ ಸಿಕೊಂಡು, ಆ ಸಂಸ್ಥಾನಕ್ಕೆ ಸೇರಿದ ಸೀಮೆ ವಿಚಾರಿಸಿ ಲೆಕ್ಕಾ ಕೇಳು ವಾಗ್ಗೆ, ಮಂಗಳೂರು ತಾಲೂಕು ಮೂಡವೊಂಭತ್ತು ಮಾಗಣೆಯಿಂದ ಅಮರದ ಮಾಗಣೆ ಒಂದು, ಸುಳ್ಯದ ಮಾಗಣೆ ಒಂದು, ಅಂತೂ ಎರಡೂ ಸಹ, ಮೊದಲು ಸೋಮಶೇಖರ ನಾಯಕರು ಕೊಡಗಿನ ಸಂಸ್ಥಾನಕ್ಕೆ ದೊಡ್ಡ ವೀರಪ್ಪ ಒಡೆಯರಿಗೆ ಬಿಟ್ಟುಕೊಟ್ಟು ಯಿದ್ದಾರೆಯೆಂತ ಆ ಸ್ಥಳದ ಜನ ಹೇಳಿದಲ್ಲಿ, ಅದನ್ನು ವಿಚಾರಿಸಿ ಕೇಳಿದಲ್ಲಿ [ಸಹ ರುಜು ಆ] † ದ್ದ ರಿಂದ, ಈ ಎರಡು ಮಾಗಣೆವಿನಾ ಇಕ್ಕೇರಿ ಸಂಸ್ಥಾನಕ್ಕೆ ಸೇರಿದ ಸೀಮೆ ಗಡಿ ಬಂದ ಹಾಗೆ ಬಂದೋಬಸ್ತು ಮಾಡಿಕೊಂಡು, ಪುನಃ ಪಟ್ಟಣಕ್ಕೆ ಬಂದು, ದೊಡ್ಡ ಕೃಷ್ಣರಾಜ [ಒಡೆಯರು] ± ಸಹ ಇದ್ದ ಅರಮನೆಯಲ್ಲಿ ಇದ್ದ ಬೊಕ್ಕ ಸಬಂಡಾರ ಯಾವತ್ತು ತೆಗೆದುಕೊಂಡು, ತನ್ನ ಮಾತಿಗೆ ಅನುಕೂಲ

ವಾಗದಂತ (ಹ) ಹಳೇ ಸರದಾರರನ್ನು ಪರಿಹರಿಸಿ ಬಿಟ್ಟು, ತನ್ನ ಬಂಧುವರ್ಗದವರ (ನ್ನು) ಪವುಜಿಗೆ ಸರದಾರ (ರನ್ನಾಗಿ) ಮಾಡಿಕೊಂಡು ದಿನದಿನಕ್ಕೆ! ಪವುಜು ಹೆಚ್ಚಾಗಿ ಜಮಾಯಿಸುತ್ತ, ಯಾವತ್ತೂ ಪವುಜು ಬಂದು ಮೈಸೂರು ಕೋಟೆಗೆ ಮುತ್ತಿಗೆ ಹಾಕಿ, ಜಗಳಮಾಡಿ, ಆ ಕೋಟೆಯನ್ನು ತೆಗೆದುಕೊಂಡು, ಕರಚೂರಿ ನಂದರಾಜರನ್ನು ಹಿಡಿತಂದು [ಕೋಟೆ] = ವೊಳಗೆ ಸೆರೆಹಾಕಿ, ಮೈಸೂರು ಸೀಮೆ ಯಾವತ್ತೂ

ಸ್ವಾಧೀನ ಮಾಡಿ ಕೊಂಡರು. ಆ ತದನಂತರದಲ್ಲಿ ಚಿಕ್ಕ ಕೃಷ್ಣರಾಜ ಒಡೆಯರು ತೀರಿಹೋದ್ದರಿಂದ, ಅವರ ಸಂತತಿಯೊಳಗೆ ಕೃಷ್ಣರಾಜರು ಯೆಂಬವರ ತಂದು ನವಾಬಹೈದರಲ್ಲಿ ಖಾನಬಹದರವರು ಪಟ್ಟಕಟ್ಟಿ ಹೆಸ ರಿಗೆ ಮಡಗಿಯಿದ್ದರು.

---

* ಬ ಬಹದ್ದರಯೆಂಬದಾಗಿ

† ಬ ಸಹಜವಾ

± ಬ ವಡೆಯರವರ ರಾಣಿಯಾದ ಮುದ್ದವಮ್ಮಾಜಿಯವರು, ಚಿಕ್ಕ ಕೃಷ್ಣರಾಜ ವಡೆಯರು

= ಬ ಪಟ್ಟಣದ ಕೋಟೆ

ಕೊಡಗಿನ ಸಂಸ್ಥಾನದಲ್ಲಿ ದೊರೆತನ ಮಾಡುತ್ತ ಇದ್ದ ಚಿಕ್ಕವೀರಪ್ಪ ಒಡೆಯರಿಗೆ ಹೈದರಲ್ಲಿಖಾನ ಬಹದರವರು ಬರೆಸಿ ಕಳುಹಿಸಿದ ವಿವರಃ— "ಏಳುಸಾವಿರ ಸೀಮೆ ಕೊಡಗಿನ ಸಂಸ್ಥಾನಕ್ಕೂ ಮೈಸೂರು ಸಂಸ್ಥಾನಕ್ಕೂ ಇತ್ತೀರಿಗೆ ಆಗಿಯಿದೆಯಲ್ಲಾ! ಅದರಲ್ಲಿ ಕೆಲವು ಮೈಸೂರವರಿಗೆ ಕೊಡುವ ಹಣ [ತೆಗೆದು] § ಕೊಡುವದು ನಮಗೆ ಕೆಲಸವಿಲ್ಲ. ನಮಗೆ ಸಲ್ಲತಕ್ಕಂತ (ಹ) ಸೀಮೆಯನ್ನು ಬಿಟ್ಟುಕೊಡಿ. ನಾವು ಬಂದೋಬಸ್ತು ಮಾಡಿಕೊಳ್ಳುತ್ತೇವೆ"— ಎಂಬದಾಗಿ ಬರೆಸಿ ಕಳುಹಿಸಿದರಿಂದ, ಅದೇ ಮೇರೆ ಚಿಕ್ಕವೀರಪ್ಪ ಒಡೆಯರವರು ಆ ಏಳುಸಾವಿರ ಸೀಮೆಯಲ್ಲಿ ಅವರಿಗೆ ಸಲ್ಲುವಂತ (ಹ) ಬೆಮ್ಮತ್ತಿ ೧, ಮಲ್ಲಿಪಟ್ಟಣ ೧, ಹೊಸೂರು ೧, ಎಂಬ ಮೂರು ಹೋಬಳಿಗಳನ್ನು ವಿಂಗಡಿಸಿ ಬಿಟ್ಟುಕೊಟ್ಟಲ್ಲಿ, ಮಲ್ಲಿಪಟ್ಟಣ ಎಂಬಲ್ಲಿ ಒಂದು ಕೋಟೆ ಕಟ್ಟಿ ಅಮಲ್ದಾರನ ಇರಿಸಿ, ಬಂದೋಬಸ್ತು ಮಾಡಿಕೊಂಡರು. ಈ ಕಡೆ ಸಲುವಂತ (ಹ) ಸೀಮೆಯನ್ನು ಕೊಡಗಿನ ರಾಜರು ಬಂದೋಬಸ್ತು ಮಾಡಿಕೊಂಡರು.

ಕೆಲವು ದಿವಸದ ಮೇಲೆ ನವಾಬು ಹೈದರಲ್ಲಿ ಖಾನರು ಪರಜುಲ್ಲಾಖಾನನ ಸಂಗಡ ದಂಡು ಕೂಡಿಸಿಕೊಟ್ಟು, ಕೊಡಗಿನ ಸಂಸ್ಥಾನದ ಮೇಲೆ ಜಗಳಕ್ಕೆ ಕಳುಹಿಸಿದರಿಂದ, ಆ ಪರಜುಲ್ಲಾಖಾನನು ಕಲಿಸಂದ ೪೮೬೭ ನೇ ಪಾರ್ಥಿವ ಸಂವತ್ಸರದಲ್ಲಿ ಉಬ್ಬಲಗಂಡಿ ಮಾಳದಲ್ಲಿ ಬಂದು ಇಳಿದಲ್ಲಿ, ಅವರಿಗೂ ಈ ಸಂಸ್ಥಾನದವರಿಗೂ ಹೇರಾಳ ಲಡಾಯಿಯಾಗಿ ಆ ಪರಜುಲ್ಲಾಖಾನನು ಮುರಿದು ಹೋಗಿ ಐಗೂರು ಸೀಮೆಯಲ್ಲಿ ಇಳಕೊಂಡನು. ಆ ಬಳಿಕ ನವಾಬ ಹೈದರಲ್ಲಿ ಖಾನರು ಪರಜುಲ್ಲಾಖಾನನ ಮುಖಾಂತರ ಹೇಳಿಸಿದ್ದುಃ— "ಮಹಾರಾಜನ ದುರ್ಗ ತಾಲೂಕಿನಿಂದ ಉಚ್ಚಂಗಿ ಮುಂತಾದ ಕೆಲವು ಸೀಮೆ ನಿಮ್ಮ ಸರಹದ್ದಿಗೆ ಮುಟ್ಟಿಯಿರುವದನ್ನು ವಿಂಗಡಿಸಿ, ನಿಮ್ಮ ಸಂಸ್ಥಾನಕ್ಕೆ ಬಿಟ್ಟು ಕೊಡುತ್ತ ಇದ್ದೇವೆ. ಪರಜುಲ್ಲಾಖಾನನ ದಂಡಿನ ಖರ್ಚು ಹೇರಳ ಮುಟ್ಟಿಯಿದೆ. ಆ ಬಗ್ಗೆ ಮೂರು ಲಕ್ಷ ವರಹ ಕೊಡಬೇಕು. ಆದ್ದರಿಂದ ನಿಮ್ಮ ನಮ್ಮ ಸ್ನೇಹ ಅನಂತಕಾಲ ಪರಿಯಂತರ ಶಾಶ್ವತವಾಗಿ [ಇರಬೇಕು.]" ± ಎಂಬದಾಗಿ ಹೇಳಿ ಕಳುಹಿಸಿದ

---

§ ಬ ತಾವು ತೆಗೆದು

±. ಬ ಇದ್ದೀತು.

ರಿಂದ, ಕೊಡಗಿನ ಸಂಸ್ಥಾನದ ಚಿಕ್ಕ ವೀರಪ್ಪ ಒಡೆಯರು ಜವಾಬು ಕೊಟ್ಟ ವಿವರಃ— "ನೀವು ಹೇಳಿದ ಮೇರೆ ಸದರಿ ಬರೆಸಿದ ಸೀಮೆ ಈ ಕಡೆಗೆ ಬಿಟ್ಟು ಕೊಡುವಂತಾದ್ದು ಯಾವಾಗ ಬಿಟ್ಟು ಕೊಡುತ್ತೀರಿ?"— ಎಂತ ಕೇಳಿದಲ್ಲಿ, ಆ ಪರಜುಲ್ಲಾಕಾನನು ಹೇಳಿದ್ದುಃ— "ಈ ಮೂರು ಲಕ್ಷ ವರಹದಲ್ಲಿ ಕಾಲುವಾಸಿ ಹಣ ನೀವು ಕೊಟ್ಟ ಬಾಕಿ ಹಣವಿಗೆ ನಿಮ್ಮ ದಳವಾಯಿಯನ್ನು ಹೊಣೆ ಕೊಟ್ಟಲ್ಲಿ, ಆ ಸೀಮೆ ಬಿಂಗಡಿಸಿ ಕೊಡುತ್ತೇವೆ. ಆ ಮೇಲೆ ಅಲ್ಲಿ ನಿಮ್ಮ ಠಾಣ್ಯ ಇಟ್ಟುಕೊಳ್ಳಿ"— ಎಂಬದಾಗಿ ಹೇಳಿದರಿಂದ, ಈ ಅರ್ಥಕ್ಕೆ ಉಭಯ ಕಡೆ ಖುದ್ದು ಒಪ್ಪಿ ನಂಬಿಗೆ ಭಾಷೆ ಮಾಡಿ, ಖರಾರನಾಮಾ ಉಭಯ ಕಡೆಯವರು ಬರೆಸಿಕೊಂಡರು. ಅದೇ ಪ್ರಕಾರ ಕೊಡಗಿನ ಸಂಸ್ಥಾನದಿಂದ ಕಾಲವಾಸಿ ಹಣ, ಬಾಕಿ ಹಣವಿಗೆ ಹೊಣೆ ಆಗಿ ದಳವಾಯಿ ತಮ್ಮ ಚರಮಣ್ಣ ಎಂಬವನ ಸಹ ಪರಜುಲ್ಲಾ ಕಾನನ ಬಳಿಗೆ ಕಳುಹಿಸಿಕೊಟ್ಟು, 'ಕರಾರು ಮೇರೆ ಸೀಮೆ ಬಿಡಿಸಿಕೊಡಿ'— ಎಂಬದಾಗಿ ಕೇಳಿದಲ್ಲಿ, ಈ ವಿವರಕ್ಕೆ ಅವನು ಅರ್ಜಿ ಬರೆದುಕೊಂಡು, ಆ ಬಗ್ಗೆ ಹಣ ಆ ಚರಮಣ್ಣನ ಸಹ ನವಾಬ ಹೈದರಲ್ಲಿ ಕಾನರ ಬಳಿಗೆ ಕಳುಹಿಸಿ ಕೊಟ್ಟನು. ಈ ಪ್ರಕಾರ ಜವಾಬು ಸವಾಲು ಆಗುತ್ತ ಇರುವಾಗ್ಗೆ, ಚಿಕ್ಕ ವೀರಪ್ಪ ಒಡೆಯರು ಕಲಿಸಂದ ೪೮೬೮ನೇ ವ್ಯಯ ಸಂವತ್ಸರದಲ್ಲಿ ಸ್ವರ್ಗಸ್ಥರಾದರು. ಈ ಚಿಕ್ಕ ವೀರಪ್ಪ ಒಡೆಯರಿಗೆ ಆದರುವಾಯು ಸಂಭವಿಸಿಕೊಂಡು ಇದ್ದದರಿಂದ ಪುತ್ರ ಸಂತಾನಯಿಲ್ಲದೆ ಹೋಯಿತು. ಆದ್ದರಿಂದ ದೊಡ್ಡವೀರಪ್ಪ ಒಡೆಯರ ಸಂತತಿ ಮೂರು ತಲೆಯಂತರದ ಚಿಕ್ಕ ವೀರಪ್ಪ ಒಡೆಯರು ಕಾಲವಾದಾಗ್ಗೆ ಸಮಾಪ್ತವಾಯಿತು.

ಆ ಬಳಿಕ ಹಾಲೇರಿ ಅರಮನೆಯಲ್ಲು ನಿಂತುಯಿದ್ದ ಮುದ್ದರಾಜ ಅರಸುಗಳು ಹೊರಮಲೆಯಲ್ಲು ಇದ್ದ ನಂದರಾಜ ಅರಸುಗಳ ಮಗ ಮುದ್ದಯ್ಯ ಅರಸುಗಳು ಸಹ, ಅನ್ಯೋನ್ಯವಾಗಿ ಏಕೀಕರದಿಂದ ಕೊಡಗಿನ ರಾಜ್ಯಭಾರ ಮಾಡಿಕೊಂಡು ಇರುವಾಗ್ಗೆ, ಇವರು ಪರಜುಲ್ಲಾಕಾನನ ಸಂಗಡ ಕೇಳಿದ್ದು— "ಸಿಗದಿ ಮಾಡಿದ ಪ್ರಕಾರ ನಮ್ಮ ಸಂಸ್ಥಾನದಿಂದ ಕಾಲುವಾಸಿ ಹಣಕೊಟ್ಟು, ಬಾಕಿ ಹಣಕ್ಕೆ ನಮ್ಮ ದಳವಾಯಿ ತಮ್ಮನನ್ನು ಹೊಣೆಕೊಟ್ಟು ಇದ್ದೇವೆಯಷ್ಟೆ? ಇನ್ನು, ಕರಾರು ಮೇರೆ ಸೀಮೆ ಯಾಕೆ ಬಿಟ್ಟುಕೊಡುವದಿಲ್ಲ?"— ಎಂತ ಕೇಳಿದಲ್ಲಿ, ಆ ನವಾಬ ಹೈದರಲ್ಲಿಕಾನರು ಪರಜುಲ್ಲಾಕಾನನ ಮುಖಾಂತರ ಜವಾಬು ಹೇಳಿಸಿದ್ದುಃ— "ಈ ವರೆಗೆ

ಮಾತುಕತೆ ಮಾಡಿದ ಚಿಕ್ಕವೀರಪ್ಪ ಒಡೆಯರು ಕಾಲವಾದರು. ಈಗ ಬದಲು ರಾಜರಾಗಿದ್ದಾರೆ. ಆದ್ದರಿಂದ ನೀವು ತೀರ ಹಣಕೊಟ್ಟರೆ ಸೀಮೆ ಬಿಡಿಸಿಕೊಡುತ್ತೇವೆ”- ಎಂತ ಹೇಳಿಸಿದ್ದರಿಂದ, “ಕಾಲುವಾಸಿ ಹಣಕೊಟ್ಟು ಬಾಕಿ ಹಣವಿಗೆ ದಳವಾಯಿಯನ್ನು ಹೊಣೆ ಕೊಟ್ಟರೆ ಸೀಮೆ ಕೊಡುತ್ತೇವೆಯೆಂತ ಹೇಳಿ, ಈಗ ಯಾವತ್ತೂ ಹಣಕೊಟ್ಟರೆ ಸೀಮೆ ಕೊಡುತ್ತೇವೆ ಎಂತ ಹೇಳುತೀಯೆ? ಇನ್ನು ನಾವು ಬಾಕಿ ಹಣಕೊಟ್ಟರೆ ಅದನ್ನು ತೆಗೆದುಕೊಂಡು, ಕಡೆಗೆ ಸೀಮೆಯನ್ನು ಕೊಡದೆ ದಗಾಮಾಡುವ ಹಾಗೆ ಕಾಣುತ್ತದೆ. ನಾವು ನಿಗದೀ ಮೇರೆ ಹಣಕೊಟ್ಟು ಇದ್ದೇವೆ. ಇನ್ನು ಸೀಮೆ ಕೊಡಿ ಬಾಕಿ ಹಣಕೊಡುತ್ತೇವೆ”— ಎಂತ ಹೇಳಿದಲ್ಲಿ, “ಅದು ಆಗದು. ಮುಂದಾಗಿಕೊಡಿ”— ಎಂತ ಹೇಳಿದ. ಇವರು “[ಮುಂಚಿತವಾಗಿ] † ಕೊಡಿ” ಎಂತ ಹೇಳಿದರು. ಈ ಮೇರೆ ಮಾತುಬಂದು ಅದೇ ವ್ಯಯಸಂವತ್ಸರದಲ್ಲಿ ಸಲ್ಲಾ ಮುರಿದು, ಹಾಲೇರಿ ಅರಮನೆಯಲ್ಲು ಇದ್ದ ಮುದ್ದರಾಜ ಅರಸುಗಳ ತಮ್ಮಂದಿರಾದ ಲಿಂಗರಾಜೇಂದ್ರ ಒಡೆಯರಿಗೂ ಪರಜುಲ್ಲಾಕಾನನಿಗೂ ಏಳುಸಾವಿರ ಸೀಮೆ ಬಳಿಯ ಜಗಳವಾಗಿ, ಪರಜುಲ್ಲಾಕಾನನ ದಂಡಿಗೆ ಬಹಳ ಪೆಟ್ಟಾಗಿ, ಅಲ್ಲಿಂದ ಅವನು ಮುಖಭಂಗಿತವಾಗಿ ಬಿಸಲೆಘಟ್ಟ ಇಳಿದು (ಹೋಗುವಾಗ್ಗೆ) * ಲಿಂಗರಾಜೇಂದ್ರ ಒಡೆಯರವರು ಮಂದಿ ತೆಗೆದುಕೊಂಡು ಹೋಗಿ, ಬಿಸಲೆಗಟ್ಟದಲ್ಲು ಅಡ್ಡಗಟ್ಟಿ ಜಗಳಮಾಡಿದಲ್ಲಿ, (ಅವರ) × ದಂಡಿಗೆ ಬಹಳ ಪೆಟ್ಟಾಗಿ, ಅರೆವಾಸಿ ದಂಡು ಮುಳುಗಿ ಹೋಗಿ, ಆ ದಂಡಿನ ಸಾಮಾನು, ಸರಂಜಾಮು, ತೋಶಿಕಾನೆ, ಪಿರಂಗಿ (ಮುಂತಾಗಿ) § ಕೊಡಗಿನ ಸಂಸ್ಥಾನದವರು ತೆಗೆದುಕೊಂಡರು. ಕೊಡಗಿನ ಸಂಸ್ಥಾನದಿಂದ ಹೊಣೆಕೊಟ್ಟು ಇದ್ದ ದಳವಾಯಿ ತಮ್ಮ ಚರಮಣ್ಣ ಎಂಬವನು ಪಟ್ಟಣದಲ್ಲಿ ಸಿಡುಬಾಗಿ ಅಲ್ಲಿಯೇ ಮೃತವಾದನು. ಇ ಬಳಿಕ ಈ ಪರುಜುಲ್ಲಾಕಾನನ ದಂಡು ಯಾವತ್ತೂ ಮುರಿದು (ಹಲಕಾದ) = ವರ್ತಮಾನ ನವಾಬ ಹೈದರಲ್ಲಿಖಾನರು

---

† ಬ ಸೀಮೆ ಮುಂಚಿತವಾಗಿ

* ಬ ಹೋಗಬೇಕೆಂದು ಹೋಗುವಾಗ್ಗೆ

× ಬ ಫರುಜುಲ್ಲಾಖಾನನ

§ ಬ ಮುಂತಾಗಿ ಆ ಗಟ್ಟದಲ್ಲು ಬಿಟ್ಟುಕೊಟ್ಟು ಉಳಿಕೆ ದಂಡು ತೆಗೆದುಕೊಂಡು ಹೋದನು. ಆ ಸಾಮಾನು, ಪಿರಂಗಿ, ತೋಶಿಖಾನೆ ಮುಂತಾಗಿ,

= ಬ ಫುಟಾಫುಟಿಯಾದ

ಕೇಳಿ, ಕೊಡಗಿನ ಸಂಸ್ಥಾನದವರಿಗೂ ನಮಗೂ ಮುಂದೆ ಕಜಾ ಇಲ್ಲದೆ ಸಲ್ಲಾಮಾಡಿ ದೋಸ್ತಿ ಮಡಗಬೇಕೆಂತ ನಿಶ್ಚೈಸಿ— "ಪ್ರಾಕುನಗರದ ದೊರೆಗಳು ಆಮರಸುಳ್ಳವನ್ನು ಕೊಡಗಿನ ಸಂಸ್ಥಾನಕ್ಕೆ ಸೇರಿಸಿಕೊಟ್ಟು ಇದ್ದಾರಷ್ಟೆ? ಈಗ ನಾವು ಆದರ ಸಮೀಪದಲ್ಲಿ ಇರುವ ಪಂಜಬೆಳ್ಳಾರೆ ಎಂಬ ಎರಡು ಮಾಗಣೆಯನ್ನು [ನಗರದ] ± ಸೀಮೆಯಿಂದ ವಿಂಗಡಿಸಿ, ಕೊಡಗಿನ ಸಂಸ್ಥಾನಕ್ಕೆ ಸೇರಿಸಿ, ಸರ್ವೆಹೊಳೆ ಬಳಿಯ ತೋರಣಕಟ್ಟಿಸಿ, ಕಲಿಸಂದ ೪೮೭೨ ನೇ ವಿಕೃತಿ ಸಂವತ್ಸರದಲ್ಲಿ ಬಿಟ್ಟುಕೊಟ್ಟರು. ಆ ಬಳಿಕ ಉಭಯ ಕಡೆಯಿಂದಲು ದೋಸ್ತಿಯಿಂದ ನಡೆದು ಬರುತ್ತ ಇದ್ದರು. ಆ ತರುವಾಯದಲ್ಲಿ ಕೊಡಗಿನ ಸಂಸ್ಥಾನ ವಿಚಾರಿಸಿಕೊಂಡು ಹಾಲೇರಿ ಅರಮನೆಯಲ್ಲು ಇದ್ದ ಮುದ್ದರಾಜ ಅರಸುಗಳು, ಹೊರಮಲೆ ಅರಮನೆಯಲ್ಲು ಇದ್ದ ನಂದರಾಜರುಗಳ ಮಗ ಮುದ್ದಯ್ಯರಾಜರು ಸಹ, ಎರಡು ವರುಷದೊಳಗೆ ಮೃತವಾಗಿ ಹೋದರು.

ಆ ಬಳಿಕ ಕಲಿಸಂದ ೪೮೭೨ ನೇ ವಿಕೃತಿ ಸಂವತ್ಸರದಲ್ಲು ಕೊಡಗಿನ ಸಂಸ್ಥಾನದ ಪಟ್ಟವಾಗಬೇಕಾದರೆ, ಹಾಲೇರಿ ಅರಮನೆಯಲ್ಲಿ ಲಿಂಗರಾಜವೊಡೆಯರು ತಮ್ಮ ಅಣ್ಣನ ಮಗನಿಗೆ ಪಟ್ಟವಾಗಬೇಕೆಂಬದಾಗಿಯೂ, ಹೊರಮಲೆ [ಯಲ್ಲು] † ಮಲ್ಲಯ್ಯ ಅರಸುಗಳು ತಮ್ಮ ಮಗನಿಗೆ ಪಟ್ಟವಾಗಬೇಕೆಂಬುದಾಗಿಯೂ ಸಂವಾದಗಳ ಮಾಡಿ, ಗೃಹಛಿದ್ರದಿಂದ ಇವರು ಜಗಳ ಮಾಡಿದಲ್ಲಿ, ಹೊರಮಲೆ ಮಲ್ಲಯ್ಯರಾಜರ [ಬಲ] * ಹೆಚ್ಚಾಗಿ ಬಲಾತ್ಕಾರದಿಂದ ತಮ್ಮ ಮಗನಾದ ದೇವಪ್ಪರಾಜರಿಗೆ ಮಡಿಕೇರಿಯಲ್ಲಿ ಪಟ್ಟವನ್ನು ಕಟ್ಟಿ, ಕೊಡಗಿನ ರಾಜ್ಯದ ಆಳಿಕೆಯನ್ನು ಮಾಡಿಕೊಂಡು, ಆ ಬಳಿಕ ಹಾಲೇರಿಯಲ್ಲು ಇದ್ದ ಲಿಂಗರಾಜೇಂದ್ರ ಒಡೆಯರಿಗೆ ಹೇರಳ ಕಿರುಕುಳ ಮಾಡಿದ್ದರಿಂದ, ಇವರ ಕಿರುಕುಳದಲ್ಲಿ ನಿಸ್ತರಿಸಲಾರದೆ ಲಿಂಗರಾಜೇಂದ್ರ ಒಡೆಯರವರು ತಮ್ಮ ಕುಮಾರರಾದ ವೀರರಾಜೇಂದ್ರ ಒಡೆಯರನ್ನು, ತಮ್ಮ ಅಣ್ಣನ ಮಗ ಅಪ್ಪಾಜಿರಾಜರು, ಅವರ ಮಕ್ಕಳು

± ಬ ಬಿಟ್ಟು ಕೊಡುತ್ತೇವೆ. ಇನ್ನು ಮುಂದೆ ನಾವು ನೀವು ದೋಸ್ತಿಯಿಂದ ಇರಬೇಕು'' ಎಂಬದಾಗಿ ಕಾಗದ ಬರೆದು ಕಳುಹಿಸಿ, ಅದೇ ಮೇರೆ ಪಂಜಬೆಳ್ಳಾರೆಯೆಂಬ ಎರಡು ಮಾಗಣೆಯನ್ನು ನಗರದ

† ಬ ಅರಮನೆಯಲ್ಲು

* ಬ ಕಡೆ ಬಲ

ಇಬ್ಬರ (ನ್ನು) ಸಹ ಕರೆದುಕೊಂಡು ಐಗೂರು ಸೀಮೆಗೆ ಹೋಗಿ, ಅಲ್ಲಿ ಇದ್ದು,— "ಹೈದರಲ್ಲಿ ಕಾನರು ನಮ್ಮ ಸಂಸ್ಥಾನದ ದೋಸ್ತಿ ಇರಬೇಕು ಎಂಬದಾಗಿ ಪಂಜ ಬೆಳ್ಳೂರೆ ಎರಡು ಮಾಗಣಿಯನ್ನು ತಮ್ಮ ಕಡೆಯಿಂದ ನಮ್ಮ ಸೀಮೆಗೆ ಬಿಟ್ಟುಕೊಟ್ಟು ದೋಸ್ತಿ ಇಟ್ಟು ಇದ್ದಾರೆ. ಈ ಸಮಯದಲ್ಲಿ ನಮ್ಮ ದಾಯಾದ್ಯರು ನಮ್ಮ ರಾಜ್ಯ ಆಶ್ರಯಿಸಿಕೊಂಡು ಇರುವಂತ (ಹ) ವಿವರ ಇವರಿಗೆ ಹೇಳಿದರೆ ನಮಗೆ ಕುಮ್ಮಕ್ಕು ಮಾಡಿ ಆ ದಾಯಾದ್ಯರ ಕಯ್ಯಿಂದ ನಮ್ಮ ರಾಜ್ಯ ಬಿಡಿಸಿಕೊಟ್ಟಾರು" ಎಂಬದಾಗಿ ಗ್ರಹಿಸಿ, ಈ ವಿವರವನ್ನು ಹೈದರಲ್ಲಿ ಕಾನರಿಗೆ ಕಾಗದ ಬರೆದು [ಮುತ್ತನ] * ಹಳ್ಳಿ ಬಸವನ ಕಯ್ಯ ಕೊಟ್ಟು, ಅವನ ಸಂಗಡ ಹರಿಕಾರರ ಕೂಡಿಸಿ ಕಳುಹಿಸಿದಲ್ಲಿ, ಹೈದರಲ್ಲಿ ಕಾನರು ಆ ಕಾಗದವನ್ನು ನೋಡಿ ಬಹಳ ಸಂತೋಷಪಟ್ಟು— "ಯಾವ ಬಗ್ಗ ಚಿಂತೆಮಾಡಬೇಡಿ. ಬೇಕಾದ ಕುಮ್ಮಕ್ಕು ಮಾಡಿ ನಿಮ್ಮ ಮನಸ್ಸಿನಲ್ಲು ಇರುವ ಪ್ರಕಾರ ಮಾಡಿಕೊಡುವಲ್ಲಿ ಅಂತರವಿಲ್ಲ"— ಎಂಬದಾಗಿ ನಂಬಿಗೆ ಭಾಷೆಯಿಂದ ಜವಾಬು ಬರೆದು ಕಳುಹಿಸಿದ್ದರಿಂದ, ಆವಾಗ್ಗೆ ಲಿಂಗರಾಜೇಂದ್ರ ಒಡೆಯರು ಆ ಮಾತು ನಂಬಿ ನವಾಬ ಹೈದರಲ್ಲಿ ಕಾನರ ಬಳಿಗೆ ಹೋಗಿ ಬೇಟಿ ಆದಲ್ಲಿ— "ನಿಮ್ಮ ರಾಜ್ಯಬಿಟ್ಟು ಏನು ಉದ್ದಿಶ್ಯ ನಮ್ಮ ಬಳಿಗೆ ಬಂದಿರಿ?"— ಎಂಬದಾಗಿ ಹೈದರಲ್ಲಿ ಕಾನರು ಕೇಳಿದಲ್ಲಿ, ಸದರಿ ಬರೆದ ವಿವರ ಯಾವತ್ತು ಹೇಳಿದರು. "ಆ ಬಗ್ಗೆ ಚಿಂತೆ ಏನಿದೆ? ನಿಮ್ಮ ದೇಶವನ್ನು ನಾವು ಬಿಡಿಸಿ [ಕೊಟ್ಟೇವು] § ಎಂಬದಾಗಿ ನಂಬಿಗೆ ಭಾಷೆ ಕೊಟ್ಟು, ಬಹಳ ಬಗೆ ಹೇಳಿ ತಮ್ಮ ಬಳಿ ಇಟ್ಟುಕೊಂಡು ಇದ್ದಲ್ಲಿ, ಕಲಿಸಂದ ೪೮೭೩ನೇ ಖರ ಸಂವತ್ಸರದಲ್ಲಿ ಮಹಾರಾಷ್ಟ್ರದಿಂದ ತ್ರಿಯಂಬಕ ಮಾಮನು ಹೇರಳ ಪವುಜು ತೆಗೆದುಕೊಂಡು, ನವಾಬ ಹೈದರಲ್ಲಿ ಕಾನರ ಮೇಲೆ ಜಗಳಕ್ಕೆ ಬಂದು, ಮೈಸೂರು ಸಂಸ್ಥಾನದ ಸೀಮೆ ಯಾವತ್ತು [ದೌಡಾ ಮಾಡಿ] ± ಪಾಳು ಮಾಡುತ್ತ ಇದ್ದಲ್ಲಿ, ನವಾಬ ಹೈದರಲ್ಲಿ ಕಾನರಿಗೂ ತ್ರಿಯಂಬಕಮಾಮಗೂ ಚಿನಕುಳ್ಳಿಯ ಬಳಿಯು ಹೇರಳ ಲಡಾಯುವಾಗಿ, ಹೈದರಲ್ಲಿ ಕಾನರ ದಂಡು ಯಾವತ್ತೂ ಮುಳುಗಿ ಹೋಗಿ, ಒಂದು ಕುದುರೆ ಮೇಲೆ ಹತ್ತಿಕೊಂಡು

---

* ಬ ಮುಟ್ಟಿನ

§ ಬ ಕೊಟ್ಟೇವು. ನೀವು ಚಿಂತೆ ಮಾಡಬೇಡಿ.

± ಬ ದೌಡು ದಾಳಿ ಮಾಡಿ.

ಹೈದರಲ್ಲಿ ಕಾನರು ಪಟ್ಟಣಕ್ಕೆ ಹೊಕ್ಕರು. ಆ ಬಳಿಕ ತ್ರಿಯಂಬಕಮಾಮನ ದಂಡು ಖರ ನಂದನ ಸಂವತ್ಸರದಲ್ಲಿ ಎರಡು ವರ್ಷ, ಹೈದರಲ್ಲಿ ಖಾನರ ಸೀಮೆ ಯಾವತ್ತೂ ಸೂರೆ ಮಾಡುತ್ತ ಇದ್ದದ್ದರಿಂದ, ನವಾಬ ಹೈದರಲ್ಲಿ ಕಾನರು ತ್ರಿಯಂಬಕ ಮಾಮನ ಸಂಗಡ ಸಲ್ಲಾದ ಸವಾಲು ಜವಾಬು ಮಾಡಿಕೊಂಡು, ಹೇರಳ ದ್ರವ್ಯ ಕೊಟ್ಟದ್ದರಿಂದ, ಅವರು ತಮ್ಮ ಪವುಜು ಯಾವತ್ತು ತೆಗೆದುಕೊಂಡು, ಹೈದರಲ್ಲಿ ಕಾನರಿಗೆ ಸೇರಿದ ಸೀಮೆ ಬಿಟ್ಟು, ಮಹಾರಾಷ್ಟ್ರಕ್ಕೆ ಹೋದರು.

ಈ ತ್ರಿಯಂಬಕ ಮಾಮನ ಅತಂತ್ರದಿಂದ ಹೈದರಲ್ಲಿ ಕಾನರ ಸೀಮೆ ಯಾವತ್ತು ಬರ ಹತ್ತಿ, ಸೀಮೆ ರೈತರಿಗೂ ದಂಡಿನ ಮಂದಿಗೂ ತಿನ್ನೋದಕ್ಕೆ ಅನ್ನವಿಲ್ಲದೆ, ಹೇರಳ ಜನ ಸಾಯುತ್ತ ಇದ್ದಲ್ಲಿ, ಲಿಂಗರಾಜೇಂದ್ರ ಒಡೆಯರು ಹೈದರಲ್ಲಿ ಕಾನರ ಸಂಗಡ ಹೇಳಿದ್ದು ಏನೆಂದರೆ:— "ತ್ರಿಯಂಬಕ ಮಾಮನ ಅತಂತ್ರದಿಂದ ತಮ್ಮ ಸೀಮೆ ಯಾವತ್ತೂ ಕೆಟ್ಟುಹೋಗಿ ಬರ ಹತ್ತಿ, ಹೇರಳ ಜನ ಅನ್ನವಿಲ್ಲದೆ ಮೃತವಾಗುತ್ತ ಇದೆ. ಈ ಸಮಯದಲ್ಲಿ ನಮ್ಮ ಕೊಡಗಿನ ಸೀಮೆಗೆ ದಂಡು ತೆಗೆದುಕೊಂಡು ಹೋದುದೇ ಉಂಟಾದರೆ ಆ ಸೀಮೆಯಲ್ಲಿ ಹೇರಳದ ದವಸ ಧಾನ್ಯ ಸಿಕ್ಕುತ್ತದೆ. ನಿಮ್ಮ ಸೀಮೆ ಜನಕ್ಕೆ ಅನ್ನವಾಗುತ್ತದೆ. ಈ ಬರಗಾಲವು ಕಳೆದುಹೋಗುತ್ತದೆ."— ಎಂದು ಹೇಳಿದಲ್ಲಿ, ಆ ಮಾತಿಗೆ ಹೈದರಲ್ಲಿ ಕಾನರು ಒಡಂಬಟ್ಟು, ತಮ್ಮ ದಂಡನ್ನು ತೆಗೆದುಕೊಂಡು, ಲಿಂಗರಾಜೇಂದ್ರ ಒಡೆಯರನ್ನು ಕರೆದುಕೊಂಡು, ಕಲಿಸಂದ ೪೮೬೫ ನೆ ವಿಜಯ ಸಂವತ್ಸರದಲ್ಲಿ ಅರಕಲಗೋಡು ಬಳಿಯಿಂದ ಕೊಡಗು ಸೀಮೆ ವಳಿತವಾದ ಬೆಟ್ಟಕಣಿವೆ ಮಾರ್ಗವಾಗಿ ಕೊಡಗಿನ ಸೀಮೆವೊಳಗೆ ಬಂದಲ್ಲಿ, ಎಡವನಾಡು ಬಳಿಯ ಹೈದರಲ್ಲಿ ಖಾನ ಬಹದರವರ ದಂಡಿಗೂ ಕೊಡಗ ಜನಕ್ಕೂ ಜಗಳವಾಗಿ ಹೈದರಲ್ಲಿ ಕಾನರ ದಂಡಿಗೆ ಬಹಳ ಪೆಟ್ಟಾಗಿ, ಮುರಿದು, ಹಿಂದಕ್ಕೆ ಹೋಗಿ, ಅರಕಲಗೋಡು ಬಳಿಯಲ್ಲು ಇಳಿದುಕೊಂಡು,:— "ಈ ಮೇರೆ ನಮ್ಮ ದಂಡು ಒಳನುಗ್ಗುವುದಕ್ಕೆ ಕೊಡಗರು ಆಸ್ಪದ ಕೊಡದೆ ಹೋದರು. ನಿಮ್ಮ ಸೀಮೆ ಮಾರ್ಗವಾದರೆ ಬಹಳ ಇಕ್ಕಟ್ಟು. ಇನ್ನು ಮುಂದೆ ಏನು ಉಪಾಯ?"— ಎಂತ ಹೈದರಲ್ಲಿ ಕಾನರು ಲಿಂಗರಾಜೇಂದ್ರ ಒಡೆಯರವರ ಕೇಳಿದಲ್ಲಿ ಅವರು ಹೇಳಿದ್ದು— "ನಮ್ಮ ಕೊಡಗಿನ ಸೀಮೆಯಲ್ಲಿ ಬಹಳ ಜನ ಕೊಡಗರು ನಮಗೆ ಆಪ್ತರಿದ್ದಾರೆ. ಅವರಿಗೆಲ್ಲಾ

ನಾವು ಅಂತರಂಗದಲ್ಲಿ ಬರೆದು ಕಳುಹಿಸಿ, ಕೆಲವು ಕೊಡಗು ಜನರ ನಮ್ಮ ಕಡೆ ಸಹಾಯ ಮಾಡಿಕೊಂಡು, ಹೇರಳ ಲಡಾಯಿ ಬೀಳದಂತೆ, ಸರಾಗ ಮಾರ್ಗದಲ್ಲಿ ಕೊಡಗಿನ ಸೀಮೆವೊಳಗೆ ದಂಡನ್ನು ತೆಗೆದುಕೊಂಡು ಹೋಗುತ್ತೇವೆ."— ಎಂಬದಾಗಿ ಹೇಳಿದಲ್ಲಿ, 'ಅದೇ ಮೋರೆ ಮಾಡಿ' ಎಂಬದಾಗಿ ಹೇಳಿದರು. ಆ ಬಗ್ಗೆ ತಮಗೆ ಆಪ್ತರಾದಂತ (ಹ) ಕೊಡಗರಿಗೆ ಬರೆಸಿ ಕಳುಹಿಸಿದ ವಿವರ— "ನಮ್ಮ ನಮ್ಮ ಗ್ರಹಚ್ಛಿದ್ರವಾಗಿ ಅಣ್ಣ ತಮ್ಮಂದಿರು ಜಗಳ ಮಾಡಿಕೊಂಡು, ನಾವು ನವಾಬ ಹೈದರಲ್ಲಿ ಕಾನರ ಬಳಿಗೆ ಹೋಗಿ ಹೇಳಿದಲ್ಲಿ ನಿಮ್ಮ ಅಣ್ಣತಮ್ಮಂದಿರ ನ್ಯಾಯ ತೀರಿಸಿ, ನಿಮ್ಮ ರಾಜ್ಯ ನಿಮಗೆ ದಾಯಾದ್ಯರ ಕೈಯಿಂದ ಬಿಡಿಸಿಕೊಡುತ್ತೇವೆಂಬದಾಗಿ ಹೇಳಿ, ಭಾರಿ ದಂಡು ತೆಗೆದುಕೊಂಡು ಬಂದು ಇದ್ದಾರೆ. ಆದ್ದರಿಂದ ನಮ್ಮ ದಾಯಾದ್ಯರ ಮಾತಿನ ಮೇಲೆ ನೀವು ನಮ್ಮ ಸಂಗಡ ಜಗಳ ಮಾಡಿದ್ದುಂಟಾದರೆ ನಿಮಗೆ ಬಹಳ ದಣು ತೋರೀತು."— ಎಂದು ನಯ ಭಯ ತೋರಿ ಬರೆದು ಕಳುಹಿಸಿದಲ್ಲಿ, ಆ ಮಾತಿಗೆ ಕೆಲವು ಕೊಡಗರು, ರಾಜರಿಗೆ ಆಪ್ತರಾದಂತ (ಹ) ವರು, ಒಡಂಬಟ್ಟು— "ನೀವು ಬಾಳೆಲೆ ಮಾರ್ಗವಾಗಿ ಬಂದರೆ ನಾವು ಅಲ್ಪ ಸ್ವಲ್ಪ ಲಡಾಯ ಮಾಡಿ ನಿಮ್ಮ ಸಂಗಡ ಕೂಡುತ್ತೇವೆ"— ಎಂಬದಾಗಿ ಬರೆಸಿ ಕಳುಹಿಸಿದ್ದರಿಂದ, ಈ ವಿವರ ಲಿಂಗರಾಜೇಂದ್ರ ವೊಡೆಯರು ನವಾಬ ಹೈದರಲ್ಲಿ ಖಾನರಿಗೆ ಹೇಳಿದಲ್ಲಿ, ಆ ಮಾತಿಗೆ ಒಡಂಬಟ್ಟು, ಬಾಳೆಲೆ ಮಾರ್ಗವಾಗಿ ದಂಡು ತೆಗೆದುಕೊಂಡು ಬಂದಲ್ಲಿ, ಅಲ್ಲಿ ಇದ್ದಂತ (ಹ) ಕೊಡಗರು, ಆಪ್ತರಾದಂಥವರು ಸ್ವಲ್ಪ ಲಡಾಯ ಮಾಡಿ, ಲಿಂಗರಾಜೇಂದ್ರ್ರ ಒಡೆಯರವರ ಕಡೆಗೆ ಬಂದು ಕೂಡಿ, ದಂಡನ್ನು ಒಳಕ್ಕೆ ಬಿಟ್ಟುಕೊಂಡ ಕಾರಣ, ಆ ದೇವಪ್ಪರಾಜರು ಈ ಸೀಮೆಯಲ್ಲು ನಿಲ್ಲಲಾರದೆ ಗಟ್ಟ ಇಳಿದು ಮಲೆಯಾಳಕ್ಕೆ ಹೋದರು. ಆ ಬಳಿಕ ಆ ದೇವಪ್ಪರಾಜರ ಕುಟುಂಬ ಮಕ್ಕಳು ಅವರ ಸಂತತಿ ಯಾವತ್ತು, ಪಟ್ಟಣಕ್ಕೆ ಹಿಡಿದುಕೊಂಡು ಹೋಗಿ ಸೆರೆ ಹಾಕಿದರು. ಮಲೆಯಾಳಕ್ಕೆ ಹೋದ ದೇವಪ್ಪ ರಾಜರ (ನ್ನು) ಕೋಟೆ ಅರಸುಗಳು ನಂಬಿಗೆ ಕೊಟ್ಟು ಕರೆಸಿ—" [ನಿಮ್ಮ] ± ದೊಡ್ಡ ವೀರಪ್ಪ ಒಡೆಯರವರು ನಮ್ಮ ಕಾರಣವರ (ನ್ನು) ತೋಮರದಲ್ಲು ತಲೆ ಒಡೆದು ಹಾಕಿ ಇದ್ದಾರೆ. ಅದರ ಬದಲಿಗೆ ನಿಮ್ಮ

± ಬ ನಿಮ್ಮ ಹಿರಿಯರಾದ

ತಲೆ ಕೊಡಿ. ಅಲ್ಲದಿದ್ದರೆ ತಲೆ ಬೆಲೆ ದ್ರವ್ಯ ಕೊಡಿ ಎಂಬುದಾಗಿ ಕೇಳಿದ್ದರಿಂದ, ಅವರು ಲಾಚಾರಾಗಿ ೪೦,೦೦೦ ಸಾವಿರ [ವರಹಾ] * ತಲೆ ಬೆಲೆ ಕೊಟ್ಟು, ಅಲ್ಲಿ ನಿಲ್ಲಲಾರದೆ, ಸಂಗಡ ಇದ್ದ ಜನವನ್ನೆಲ್ಲ ಅಲ್ಲಿ ಬಿಟ್ಟು, ಬದಲು ವೇಷ ಹಾಕಿಕೊಂಡು, ನಾಲ್ಕು ಜನರ ಮಾತ್ರ ಕೂಡ ಕರೆದುಕೊಂಡು, ಮರಾಟೆ ಸೀಮೆಗೆ ಓಡಿ ಹೋಗುತ್ತಿದ್ದಲ್ಲಿ ಹರಿಹರದಲ್ಲಿ ಹೈದರಲ್ಲಿ ಕಾನರ್ ಕಡೆಯುವರು ಹಿಡಿದು ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟದ್ದರಿಂದ, ಆ ದೇವಪ್ಪರಾಜರ (ನ್ನು) ಪಟ್ಟಣದಲ್ಲು ಸೆರೆ ಹಾಕಿ, ಇವರನ್ನೂ ಇವರ ಕುಟುಂಬ ಮಕ್ಕಳು ಹೊರಮಲೆ ಸಂತತಿ ಯಾವತ್ತನ್ನೂ ಕೊಂದು ಹಾಕಿ ಬಿಟ್ಟದ್ದರಿಂದ, ದೊಡ್ಡವೀರಪ್ಪ ಒಡೆಯರ ಎರಡನೆ ಚಿಕ್ಕ ತಮ್ಮಂದಿರಾಗಿ ಹೊರಮಲೆಯಲ್ಲು ಇದ್ದ ನಂದರಾಜ ಅರಸುಗಳ ಸಂತಾನ ಯಾವತ್ತೂ ಇವರ ಮಗನಾದ ದೇವಪ್ಪ ರಾಜರ ಕಾಲಕ್ಕೆ ಕಲಿಸಂದ ೪೮೭೬ ನೆ ಜಯ ಸಂವತ್ಸರಕ್ಕೆ ಸಮಾಪ್ತವಾಯಿತು.

ಆ ಬಳಿಕ ನವಾಬ ಹೈದರಲ್ಲಿ ಖಾನರು ಲಿಂಗರಾಜೇಂದ್ರ ಒಡೆಯರ ಸಂಗಡ ಹೇಳಿದ್ದು:—"ನಿಮ್ಮ ಸೀಮೆ ನಿಮ್ಮ ದಾಯಾದ್ಯರ ಕಯ್ಯಿಂದ ತಪ್ಪಿತು. [ಆ] || ದೇವಪ್ಪರಾಜರು ನಮ್ಮ ಕೈಗೆ ಸಿಕ್ಕಿದರು. ಸೀಮೆ ಬಿಡಿಸಿ ಕೊಡುವ ಬಗ್ಗೆ ನಮ್ಮ ದಂಡು ತೆಗೆದುಕೊಂಡು ಬಂದದ್ದರಿಂದ, ನಮ್ಮ ದಂಡುಗಳಲ್ಲಿ ಹೇರಾಳ ಮಂದಿ ಸತ್ತರು. ಇದಕ್ಕೆ ಕರ್ಚು ಹೇರಾಳ ಮುಟ್ಟಿಯಿದೆ. ಕರಾರು ಮೇರೆ ನಿಮ್ಮ ಸೀಮೆಯನ್ನು ನಿಮ್ಮ ವಶ ಮಾಡಿಕೊಂಡು, ಸದರಿ ಬರೆದ ಮೇರೆ ಕರ್ಚು ಆಗಿ ಇರುವ ದ್ರವ್ಯ ನಮಗೆ ಕೊಡಬೇಕು"— ಎಂಬದಾಗಿ ಹೇಳಿದಲ್ಲಿ, ಲಿಂಗರಾಜೇಂದ್ರರು ಹೇಳಿದ್ದು ಏನೆಂದರೆ:— "ಈ ಪರಿಯಂತರ ನಮ್ಮ ದಾಯಾದಿ ದೇವಪ್ಪರಾಜರು ದೊರೆತನ ಮಾಡಿಕೊಂಡು ನಮ್ಮ ಸಂಸ್ಥಾನದ ದ್ರವ್ಯ ಯಾವತ್ತೂ ಕೊಂಡು ಹೋದರು. ನಮಗೆ ಈಗ ಹಣ ಎಲ್ಲಿ ಇದೆ?"— ಎಂತ ಹೇಳಿದಲ್ಲಿ, ಆ ಬಗ್ಗೆ ಹೈದರಲ್ಲಿ ಕಾನರು ಹೇಳಿದ್ದು:— "ನಿಮ್ಮ ಸೀಮೆ ನಿಮಗೆ ಬಿಟ್ಟು ಕೊಡುತ್ತ ಇದೇವೆ. ನಮ್ಮ ದಂಡಿನ ಕರ್ಚಿನ ಉದ್ದಿಶ್ಯವಾಗಿ ಕಾಲಂ ಪ್ರತಿಯಲ್ಲು ೨೪ ಸಾವಿರ ರೂಪಾಯಿ ಕೊಡುತ್ತ ಬರಬೇಕು"— ಎಂದು ಹೇಳಿದಲ್ಲಿ, ಲಿಂಗರಾಜೇಂದ್ರ ಒಡೆಯರವರು ಹೇಳಿದ್ದು— "ನಮ್ಮ ಸಂಸ್ಥಾ

---

* ಬ ಹಣ

|| ಬ ನಿಮ್ಮ ದಾಯಾದ್ಯರಾದ

ನಕ್ಕೆ ಪ್ರಾಕು ಕಲ್ಪಾತಿ ಪರಿಯಂತರಕ್ಕೂ ಕೆಲವು ಬಯನಾಡು ಸೀಮೆಗೆ ಸೇರಿತ್ತು. ಈಚಿಗೆ ಕೆಲವು ದಿವಸದಿಂದ ಅದನ್ನು ಕೋಟೆ ಅರಸುಗಳು ಆಕ್ರಮಿಸಿಕೊಂಡು ಇದ್ದಾರೆ. ಅವರ ಕಯ್ಯಿಂದ ಬಿಡಿಸಿ ನಮಗೆ ಕೊಟ್ಟು, ಕಲ್ಪಾತಿ ಪರಿಯಂತರ ನಮ್ಮ ಠಾಣ್ಯ ಮಡಗಿ ಕೊಟ್ಟರೆ, ಸದರಿ ಹೇಳಿದ ಮೇರೆ ಹಣವನ್ನು ಕಾಲಂಪ್ರತಿಯಲ್ಲು ತಮ್ಮ ಸರಕಾರಕ್ಕೆ ಸಂದಾಯ ಮಾಡಿ ಕೊಟ್ಟೇವು. ನಾವು ಕುಶಿಯಿಂದ ನಮ್ಮ ಸೀಮೆಯಲ್ಲು ಇದ್ದೇವು ”— ಎಂದು ಹೇಳಿದಲ್ಲಿ, ಆ ಮಾತಿಗೆ ಹೈದರಲ್ಲಿ ಕಾನರು ಹೇಳಿದ್ದು— “ಕೊಡಗಿನ ಸೀಮೆಯಲ್ಲು ಬಂದೋಬಸ್ತು ಮಾಡಿಕೊಂಡು ಇರತಕ್ಕ ಬಗ್ಗೆ ಮಡಿಕೇರಿಯಲ್ಲಿ ನಿಮ್ಮ ಅಣ್ಣನ ಮ (ಗ) ನ ಮಡಿಗಿ, ನೀವು ನಮ್ಮ ಸಂಗಡ ಪಟ್ಟಣಕ್ಕೆ ಬಂದರೆ ಕಲ್ಪಾತಿ ಪರಿಯಂತರ ನಿಮ್ಮ ಸೀಮೆ ಕೋಟೆ ಅರಸುಗಳು ಈಗ ಆಕ್ರಮಿಸಿಕೊಂಡು ಇರುವಂತಾದ್ದು ವಿಚಾರಿಸಿ, ಕೊಡಗಿನ ಸೀಮೆಗೆ ಸೇರಿದ್ದು ತಾರ್ಕಣ್ಯ ಹೌದಾದರೆ, ಅಲ್ಲಿ ನಿಮ್ಮ ಠಾಣ್ಯ ಇಡಿಸಿಕೊಡಲಾದೀತು”—ಎಂಬದಾಗಿ ಹೇಳಿದಲ್ಲಿ, ಆ ಮಾತಿಗೆ ಒಡಂಬಟ್ಟು, ಲಿಂಗರಾಜೇಂದ್ರ ಒಡೆಯರವರು ತಮ್ಮ ಅಣ್ಣನ ಮಗನಾದ ಅಪ್ಪಾಜಿರಾಜರಿಗೆ ಪಟ್ಟಕಟ್ಟಿ, ಮಡಿಕೇರಿಯಲ್ಲಿ ಇಟ್ಟು, ನವಾಬ ಹೈದರಲ್ಲಿ ಕಾನರ ಸಂಗಡ ಪಟ್ಟಣಕ್ಕೆ ಹೋದಲ್ಲಿ, ಆ ನವಾಬರು ಕಲ್ಪಾತಿ ಸಮೀಪದಲ್ಲು ಇರುವಂತ ಹಳಬರನ್ನು ಕರೆಸಿ ವಿಚಾರಿಸಿದಲ್ಲಿ, ಆ ಜನರು ಹೇಳಿದ್ದು—“ಅತಃ ಪ್ರಾಕು ಕಲ್ಪಾತಿ ಪರಿಯಂತರಕ್ಕೂ ಕೊಡಗಿನ ಸಂಸ್ಥಾನಕ್ಕೆ ಸೇರಿಯಿತ್ತು. ಈಚಿಗೆ ಕೆಲವು ಕಾಲದಿಂದ ಕೋಟೆ ಅರಸುಗಳು ಆಕ್ರಮಿಸಿಕೊಂಡು ಇದ್ದಾರೆ” ಎಂಬುದಾಗಿ ಆ ಜನರು ಹೇಳಿದಲ್ಲಿ ಈ ವಿವರ ಹೈದರಲ್ಲಿ ಕಾನರು ತಿಳಿದು ಲಿಂಗರಾಜೇಂದ್ರ ವಡೆಯರಿಗೆ ಹೇಳಿದ್ದು—“ನೀವು ಕೊಡಗಿನ ರಾಜ್ಯಕ್ಕೆ ಹೋಗಿ ಅದಕ್ಕೆಸೇರಿದ ಕಲ್ಪಾತಿ ಹತ್ತಿರ ನಿಮ್ಮ ಠಾಣ್ಯ ಇಟ್ಟು ಬಂದೋಬಸ್ತು ಮಾಡಿಕೊಳ್ಳಿ”— ಎಂದು ಹೇಳಿದ ಕಾರಣ *[ಲಿಂಗರಾಜರು ತಮ್ಮ ಸ್ಥಳಕ್ಕೆ]ಬಂದು, ೩೦೦೦ ಕೊಡಗು ಮಂದಿ ಕೂಡ ತೆಗದುಕೊಂಡು ಹೋಗಿ, ಕಲ್ಪಾತಿ ಸರಹದ್ದಿನಲ್ಲಿ ಲಕಡಿ ಕೋಟೆ ತಯಾರುಮಾಡಿಸಿ, ಒಂದು ವರುಷ ಅಲ್ಲಿ ಇದ್ದು ಆಬಳಿಕ ಆ ಕೋಟೆಯಲ್ಲಿ ೨೦೦೦ ಮಂದಿಯನ್ನು ಗಡಿ ಬಂದೋಬಸ್ತು ಬಗ್ಗೆ ಇಟ್ಟು, ಸದರಿ ಜನಕ್ಕೆ ಸರದಾರು ±[ಕಗ್ಗೋಡು] ನಾಡು ಅಣ್ಣಪ್ಪನ ಅಪ್ಪಯ್ಯ

---

* ಅದೇಮೇರೆ ಲಿಂಗರಾಜೇಂದ್ರ ಒಡೆಯರವರು ಕೊಡಿಗಿನ ಸೀಮೆಗೆ

± ಕಗ್ಗೋಡಲ

ನೇಮಿಸಿ ಇಟ್ಟು ಆ ಲಕಡಿ ಕೋಟೆ ಕಿಲ್ಲೇದಾರಿಕೆಯನ್ನು ಎಡೆನಾಲ್ಕು ನಾಡು [ಮಂಜುಡ]*ಅಪ್ಪಯ್ಯಗೆ ನೇಮಿಸಿ, ಉಳಿದ ಒಂದುಸಾವಿರ ಕೊಡಗರನ್ನು ಕರೆದುಕೊಂಡು ಕೊಡಗಿನ ಸೀಮೆಗೆ ಬಂದು ಇರುತ್ತ ಇದ್ದಲ್ಲಿ, ಕಲಿಸಂದ ೪೮೭೭ ನೇ ಮನ್ಮಥ ಸಂವತ್ಸರದಲ್ಲಿ ಈ ರಾಜ್ಯಭಾರ ಮಾಡುತ್ತ ಇದ್ದ ಅಪ್ಪಾಜಿ ರಾಜರು ಮೃತವಾದ್ದರಿಂದ, ಆ ಬಳಿಕ ಲಿಂಗರಾಜೇಂದ್ರ ಒಡೆಯರು, ತಮ್ಮ ಮಕ್ಕಳು, ತಮ್ಮ ಅಣ್ಣನ ಮಗ ಅಪ್ಪಾಜಿರಾಜರ = [ಮಗ ಈ ೩ ಜನ] ಸಹ ಸಲಹಿಕೊಂಡು ರಾಜ್ಯಭಾರ ಮಾಡುತ್ತ ಇದ್ದಲ್ಲಿ, ಕಲ್ಪಾತಿ ಲಕ್ಕಡಿ ಕೋಟೆಯಲ್ಲಿ ಕೊಡಗು ಜನ ಆ ಸರದಾರ ಕಿಲ್ಲೇದಾರ ಸಹವಾಗಿ ಕಲಿಸಂದ ೪೮೭೬ ನೇ ಜಯ ಸಂವತ್ಸರದಾರಭ್ಯ ಕಲಿಸಂದ ೪೮೮೦ ನೇ ವಿಳಂಬಿ ಸಂ। ದ ವರೆಗೆ ೫ ವರ್ಷ ಆ ಕಲ್ಪಾತಿಯನ್ನು ಬಲಕಾಯಿಸಿಕೊಂಡು ಇರುತ್ತ ಇದ್ದಲ್ಲಿ, ಆ ಕೋಟೆಯಲ್ಲು ಇದ್ದಂತಾ ರಸ್ತು ಮುಸ್ತೈದು ಯಾವತ್ತು ಮುಗಿದು ಹೋದ್ದರಿಂದ, ಕೋಟೆ ಅರಸುಗಳು ಆ ಕೋಟೆ ಒಳಗೆ ಠಾಣ್ಯ ಇರುವ ಜನಕ್ಕೆ ರಸ್ತು ಬರುವಂತಾ † [ಮಾರ್ಗ ಮುಟ್ಟಿಸಿ] ಬಹಳ ಕಿರುಕುಳ ಮಾಡಿದರಿಂದ, ಕೊಡಗು ಮಂದಿಗೆ ಸಾಮಾನು ಸಿಕ್ಕದೆ ಬೇಜಾರಾಗಿ, ಆ ಕಲ್ಪಾತಿ ಲಕ್ಕಡಿಕೋಟೆಯಲ್ಲು || [ಇದ್ದ ಠಾಣ್ಯ] ಎಬ್ಬಿಸಿಕೊಂಡು, ಇಬ್ಬರು ಕೊಡಗು ಸರದಾರರು ಕಲಿಸಂದ ೪೮೮೧ ನೇ ವಿಕಾರಿ ಸಂ। ದ ಚೈತ್ರಮಾಸದಲ್ಲಿ ಕೊಡಗಿನ ಸೀಮೆಗೆ ಬಂದು ಈ ವಿವರ ಯಾವತ್ತು ಲಿಂಗರಾಜೇಂದ್ರರಿಗೆ ಅರಿಕೆ ಮಾಡಿದಲ್ಲಿ, ಅದ ಕೇಳಿದ ಬಳಿಕ ಅವರು ತಮ್ಮ ಅಣ್ಣನ ಮಗ ಅಪ್ಪಾಜಿರಾಜ ಅರಸುಗಳ ಮಕ್ಕಳು ಇಬ್ಬರ ಸಂಗಡ ೨೦೦೦ ಸಾವಿರ ಕೊಡಗು ಮಂದಿಯನ್ನು ಕೂಡಿಸಿ, ಕಲ್ಪಾತಿ ಗಡಿ ಬಂದೋಬಸ್ತು ಮಾಡಿಕೊಂಡು [ಇರು] § ವದಕ್ಕೆ ಕಳುಹಿಸಿದಲ್ಲಿ, ಈ ಮಂದಿ ಹೋಗುವಂತ (ಹ) ಮಾರ್ಗವನ್ನು ಕೋಟೆ ಅರಸು ಮಂದಿ ± [ಇಟ್ಟು] ರಾತ್ರಿ ಕಾಲದಲ್ಲಿ ಮರೆ ಮೋಸದಿಂದ ಬಿದ್ದು, ಈ ಕೊಡ(ಗರ) × ಕಡಿದು ಹಾಕಿ, ಒಬ್ಬ ದೊರೆಮಗನನ್ನು ಕಡಿದು, ಮತ್ತೊಬ್ಬ

---

* ಬ ಮಂಜುರ

= ಬ ಮಕ್ಕಳು ಮೂವರ

† ಬ ಪಥಮಾರ್ಗ ಮುಟ್ಟಿಸಿ, ಆ ಸೀಮೆಯಲ್ಲಿ

|| ಬ ಠಾಣ್ಯಯಿದ್ದ ಮಂದಿ

§ ಬ ಠಾಣ್ಯಯಿರು

± ಬ ಇಟ್ಟು ಕಟ್ಟು

× ಬ ಗು ಜನರ ಯಾವತ್ತು

[ನ] ‖ ಕೈಸೆರೆ ಹಿಡಿದುಕೊಂಡು ಹೋಗಿ, ತದನೂರ ತೂಲಾ ಎಂಬಲ್ಲಿ ಸೆರೆಹಾಕಿ ಕೊಂದು ಬಿಟ್ಟರು.

ಆ ಬಳಿಕ ಇದೇ ಮಾಘ ಬ. ೧೦ ಬುಧವಾರ ಮಹಾದೇವಪುರ ದಲ್ಲಿ ಲಿಂಗರಾಜರು ಶಿವಾಧೀನರಾದರು. ಆ ಮೇಲೆ ಉಳಿದ ದೊರೆ ಮಕ್ಕಳು ಚಿಕ್ಕವರಾದ್ದರಿಂದ ನವಾಬ ಹೈದರಲ್ಲಿ ಖಾನರು ಹೇಳಿದ್ದು— "ಈ ಸೀಮೆ ಬಂದೋಬಸ್ತು ಮಾಡುವ ಬಗ್ಗೆ ನೀವು ಚಿಕ್ಕವರು. ನಿಮ್ಮಿಂದ ತೀರದು. ನೀವು ದೊಡ್ಡವರಾದ ಮೇಲೆ ನಿಮ್ಮ ರಾಜ್ಯ ನಿಮಗೆ ಕೊಡ ತೇವೆ"— ಎಂಬದಾಗಿ ಹೇಳಿ, ಕೊಡಗಿನ ರಾಜ್ಯವನ್ನು ಅಪಹರಿಸಿಕೊಂಡು, ಮೊದಲು [ಇಲ್ಲಿ] * ಕರಣಿಕನಾಗಿ ಇದ್ದ ಸುಬ್ಬರಸಯ್ಯಗೆ ಕೊಡಗಿನ ಸೀಮೆ [ಮಾಮಿಲೆಯನ್ನು] † ಕೊಟ್ಟು, ಕಲಿಸಂದ ೪೮೮೨ ನೇ ಶಾರ್ವರಿ ಸಂವ ತ್ಸರದಲ್ಲಿ ನವಾಬ ಹೈದರಲ್ಲಿ ಖಾನರು ದಂಡು ತೆಗೆದುಕೊಂಡು ಆರಕಾ ಡಿಗೆ ಹೋದರು. ಆಗ ಈ ಸೀಮೆಯಲ್ಲಿ ಇರುವ ಕೊಡಗ ಜನರು ಮನ ಸೂಬ ಮಾಡಿದ್ದುಃ— "ಕೊಡಗಿನ ಸಂಸ್ಥಾನದ ದೊರೆ [ಮಗನಿಗೆ] ± ರಾಜ್ಯಕೊಡದೆ ಹೈದರಲ್ಲಿ ಕಾನರು ಒಬ್ಬ ಬ್ರಾಹ್ಮಣನಿಗೆ ಅಮಲು ಕೊಟ್ಟು ಇವನ ಕೈಕೆಳಗೆ ನಮ್ಮ ಇಟ್ಟನಲ್ಲಾ! ದೊರೆ ಕುಮಾರರು ಇದ್ದ ಹಾಗೆ ಈ ಬ್ರಾಹ್ಮಣನ ಕ್ಕೆ ಕೆಳಗೆ ಇರುವದು ಯುಕ್ತವಲ್ಲ"— ಎಂದು ಕೊಡಗು ಜನ ಈ ಅಮಲ್‌ದಾರನ ಮೇಲೆ ಕಲಿಸಂದ ೪೮೮೪ ನೇ ಶುಭಕೃತು ಸಂವ ತ್ಸರದ ಜ್ಯೇಷ್ಠ ಮಾಸದಲ್ಲಿ ತಿರುಗಿ ಬಿದ್ದು ಶರಾರತ್ತು ಮಾಡಿದರು. ಈ ವಿವರವನ್ನು ಈ ಅಮಲ್ ಮಾಡುವವನು ನವಾಬ ಹೈದರಲ್ಲಿ ಖಾನರಿಗೆ ಬರೆದು ಕಳುಹಿಸಿದಲ್ಲಿ, ಅದಕ್ಕೆ ಜವಾಬು ಅವರು ಬರೆದು ಕಳುಹಿ ಸಿದ್ದುಃ— "ಕೊಡಗಿನ ದೊರೆ ಮಕ್ಕಳು ಮಹಾರಾಜನ ದುರ್ಗ ತಾಲೂಕು ಗೋರೂರಲ್ಲಿ ಇರಲಿ. ನಾವು ಆರಕಾಡಿಂದ ಪಟ್ಟಣಕ್ಕೆ ಬಂದ ಮೇಲೆ ಕೊಡ (ಗ) ರ ತುಂಟತನ ನಿಲ್ಲಿಸಿ ಅವರ ಸೀಮೆ ಅವರಿಗೆ ಕೊಟ್ಟು ಅಲ್ಲಿಗೆ ಕಳುಹಿಸಬಹುದು"— ಎಂಬದಾಗಿ ಬರೆದು ಕಳುಹಿಸಿದ್ದರಿಂದ, ಆ ಅಮಲ್‌ದಾರನು ಅದೇ ಹುಕ್ಕುಂ ಮೇರೆ ಇದೇ ಸಂವತ್ಸರದ ಭಾದ್ರಪದ ಮಾಸದಲ್ಲಿ [ಕುಟುಂಬ] § ಮಕ್ಕಳು ಸಹವಾಗಿ ಗೋರೂರಲ್ಲಿ ಮಡಗಿಸಿ

‖ ಬ ದೊರೆಮಗನ್ನ
* ಬ ಈ ಕೊಡಗಿನ ಸಂಸ್ಥಾನದ
† ಬ ಅಮಲು
± ಬ ಮಕ್ಕಳಿಗೆ
§ ಬ ಅರಮನೆ ಕುಟುಂಬ

ದನು. [ಅದೇ ಸಮಯದಲ್ಲಿ] = ಕೊಡಗರು ಯಾವತ್ತೂ ಪುಂಡು ಎದ್ದು, ಕೊಡಗಿನ ಸೀಮೆಯಲ್ಲಿ ಇರುವಂತಾ ಹೈದರಲ್ಲಿ ಖಾನರ ಠಾಣ್ಯದ ಮಂದಿ ಯಾವತ್ತೂ ಹೊರಡಿಸಿ ಬಿಟ್ಟು, ಕೋಟೆ ಕೊತ್ತಳ ಯಾವತ್ತನ್ನೂ ತೆಗೆದು ಕೊಂಡು, ಈ ಕೊಡಗ [ರು] || ಸೀಮೆಯನ್ನು ಕಟ್ಟಿಕೊಂಡು ಇರುತಿರು ವಲ್ಲಿ, ಇದೇ ವರುಷ ನವಾಬ ಹೈದರಲ್ಲಿ ಖಾನರು ಬೆನ್ನಿನಲ್ಲಿ ರಾಜಹುಣ್ಣು ಎದ್ದು ಆರಕಾಡಿನ [ಮೇಲೆ] * ಮೃತವಾದರು.

ಈ ಸಮಾಚಾರ ಕೇಳಿ, ಬೊಂಬಾಯಿಯಿಂದ ಇಂಗ್ರೇಜಿ ಬಹದ್ದರರ ಪವುಜು ತೆಗೆದುಕೊಂಡು ಜನರಲ್ [ಮತ್ತಿ ಸಾಹೇಬ] ± ರವರು ಬಂದು, ನಗರದ ಕೋಟೆ ಕೊಡಿಯಾಲದ ಕೋಟೆ ಮುಂತಾಗಿ ತೆಗೆದು ಕೊಂಡು, ಕೊಡಿಯಾಲದ ಕೋಟೆಯಲ್ಲು ಒಬ್ಬ ಸರದಾರ ಕೆಲವು ಪವುಜು ಸಹ ಠಾಣ್ಯ ಇಟ್ಟು, ನಗರದ ಕೋಟೆಯಲ್ಲಿ ಕಾಸ ಜನರಲ್ ಮತ್ತಿಸಾ ಹೇಬರವರು ಪವುಜು ಸಮೇತ ಇರುತ್ತ ಇದ್ದಲ್ಲಿ, ಈ ಸಮಾಚಾರವನ್ನು ನವಾಬ ಹೈದರಲ್ಲಿ ಖಾನರ ಮಗ ಟೀಪು ಸುಲ್ತಾನರು ಕೇಳಿ, ತಮ್ಮ ಪವುಜು ಯಾವತ್ತೂ ತೆಗೆದುಕೊಂಡು ಆ ಇಂಗ್ರೇಜಿ ಬಹದ್ದರವರ ಪವುಜಿನ ಮೇಲೆ ಜಗಳಕ್ಕೆ ಹೋಗುವಾಗ್ಗೆ, ಗೋರೂರಲ್ಲಿ ಇದ್ದ ಕೊಡಗಿನ ಸಂಸ್ಥಾ ನದ ದೊರೆಮಕ್ಕಳ ಕುಟುಂಬ ಯಾವತ್ತನ್ನೂ ಇದೇ ಸಂವತ್ಸರದ ಪುಷ್ಯ ಮಾಸದಲ್ಲಿ ಪಿರಿಯಾ ಪಟ್ಟಣದ ಕೋಟೆ ಒಳಗೆ ಮಡಗಿಸಿ, ಕೋಟೆಗಾವ ಲನ್ನು ಮಾಡಿಸಿದರು.

ಆ ಬಳಿಕ ಅರಮನೆ ಕುಟುಂಬ ಮಕ್ಕಳು ಯಾವತ್ತೂ ಸಿಡಿಬಿನ ಹುಣ್ಣಾಗಿ ರಸ್ತು ಮುಸ್ತೈದೆಯು ಇಲ್ಲವಾಗಿ ಬಹಳ [ಜನ] × ಮೃತ ವಾಗಿ ಹೋದರು. ಆವಾಗ್ಗೆ ವೀರರಾಜರ ಮಾತು ಶ್ರೀ ದೇವಾಂಬಿಕೆ ಅಮ್ಮನವರು ಇದೇ ಸಂವತ್ಸರದ ಪುಷ್ಯ [ಮಾಸದಲ್ಲಿ] † ಶಿವಾಧೀನವಾ ದರು. ಅದರಲ್ಲಿ ವೀರ [ರಾಜರವರ] § ಬಲ ಅಣ್ಣನ ಚಿಕ್ಕ ಕುಮಾರರು

= ಬ ಈ ತದನಂತರ

|| ಬ ರೈತರೇ

* ಬ ಲ್ಲೇ

± ಬ ಮೆಕ್ಯೂಸ

× ಬ ಕುಟುಂಬ ಮಕ್ಕಳು

† ಬ ಶು ೧೪ ಯು ಭಾನುವಾರ ಗಳಿಗೆ ೨೫ಕ್ಕೆ

§ ಬ ರಾಜೇಂದ್ರ ಒಡೆಯರವರು, ಇವರ

ಒಬ್ಬರು ಕೆಲವು ಕುಟುಂಬ ಮಕ್ಕಳು ಸಹ ಉಳಕೊಂಡು ಪಿರಿಯಾ ಪಟ್ಟಣವಲ್ಲು ಇರುತ್ತ ಇದ್ದರು.

ಟೀಪೂ ಸುಲ್ತಾನರು ನಗರಕ್ಕೆ ಹೋಗಿ, ಇಂಗ್ರೇಜಿ ಬಹದ್ದರ ಪವು ಜಿನ ಸಂಗಡ ಜಗಳ ಮಾಡಿ, ಸಾಧ್ಯವಿಲ್ಲದೆ ನಂಬಿಗೆ ಕೊಟ್ಟು, ಕೋಟೆ ಒಳಗೆ ಇದ್ದ ಇಂಗ್ರೇಜಿ ಪವುಜು ಜನರಲ್ ಮತ್ತಿಸಾಹೇಬರವರ ಸಹ ಸಲ್ಲಾದ ಮೇಲೆ ಇಳಿಸಿ, [ಕೈಗೆ] § ಸಿಕ್ಕಿದವರ ಘಾತಮಾಡಿ, ಸೆರೆಹಾಕಿ, ನಗರದ ಕೋಟೆಯನ್ನು ಸ್ವಾಧೀನಮಾಡಿಕೊಂಡು, ಅಲ್ಲಿಂದ ಕೊಡೆಯಾ ಲಕ್ಕೆ ಹೋಗಿ, ಆ ಕೋಟೆ (ಗೆ) ಮುತ್ತಿಗೆ ಹಾಕಿ, ಬಹಳ ಲಡಾಯಿ ಮಾಡಿದಾಗ್ಯೂ ಇವರಿಗೆ ಸಾಧ್ಯವಿಲ್ಲದೆ ಹೋಗಿ, ಆ ಕೋಟೆ ಒಳಗೆ ಇದ್ದ ಇಂಗ್ರೇಜಿಯವರ ಸಂಗಡ ಸಲ್ಲಾಮಾಡಿದಲ್ಲಿ, ಅವರು ಇಳಿದು, ಜಹಾಜು ಹತ್ತಿ ಹೋದರು. ಆ ಬಳಿಕ ಸುಲ್ತಾನರು ಆ ಕೋಡಿಯಾಲದ ಕೋಟೆ ಯನ್ನು ಕೆಡಗಿಸಿ ಬಿಟ್ಟು. ಆ ಮೇಲೆ ತಮ್ಮ ಪವುಜು ಯಾವತ್ತೂ ತೆಗೆದು ಕೊಂಡು, ಕಲಿಸಂದ ೪೮೮೫ ನೇ ಕ್ರೋಧಿ ಸಂವತ್ಸರದಲ್ಲಿ ಕೊಡಗಿಗೆ ಬಂದು, ಈ ಶರಾರತ್ತು ಮಾಡಿದ ಕೊಡಗರಿಗೆಲ್ಲಾ ನಂಬಿಗೆ ಭರವಸ ಕೊಟ್ಟು, ನಯಭಯದಿಂದ ಕವಲು ಕರಾರು ಮಾಡಿ, ಪಟ್ಟಣಕ್ಕೆ ಹೋದರು.

ಆ ಬಳಿಕ ಕಲಿಸಂದ ೪೮೮೬ ನೇ ವಿಶ್ವಾವಸು ಸಂವತ್ಸರದ ಶ್ರಾವಣ ಮಾಸದಲ್ಲಿ ಇದೇ ಮಾತಿನ ಒಗ್ಗೆ ಪುನಃ ಕೊಡಗು ಜನ ಯಾವತ್ತು ತಿರುಗಿ ಬಂದು ಶರಾರತ್ತು ಮಾಡಿದ್ದರಿಂದ, ಟೀಪು ಸುಲ್ತಾನರು ಈ ಶರಾ ರತ್ತು ನಿಲ್ಲಿಸುವ ಬಗ್ಗೆ ಜೈನುಲ್ಲಾಬ್ದೀನು ಸೂಸ್ತ್ರಿಯನ್ನು ೧೫ ಸಾವಿರ ಪವುಜು ಸಹ ಕೊಡಗಿಗೆ ಕಳುಹಿಸಿದಲ್ಲಿ, ಆ ಪವುಜು ಕೊಡಗಿನ ಸೀಮೆ ಯೊಳಗೆ ಬಂದು, ಉಲುಗುಲಿ ಸಂತೆ ಮಾಳದಲ್ಲಿ ಇಳುಕೊಂಡು ಇದ್ದಲ್ಲಿ, ೪--೫ ಸಾವಿರ ಕೊಡಗರು ಹೋಗಿ ಮುತ್ತಿಗೆ ಹಾಕಿಕೊಂಡು, ಲಡಾಯಿ ಮಾಡಿ, ಆ ಲಷ್ಕರಿನ [ಜನ] = ಗಳನ್ನು ಕಡಿದುಹಾಕಿದರು. ಆ ಸೂಸ್ತ್ರಿ ಯೂ ಮಡಕೇರಿ ಕೋಟೆ ಪರಿಯಂತರ ಬಂದು, ತನ್ನ ಜೋರು ಇಲಾಜು ಸಹ ಏನೂ ನಡೆಯದೆ ಲಾಚಾರಾಗಿ, ತಿರುಗಿ ಬೆಟ್ಟದಪುರದ ಕಡೆ

---

§ ಬ ಸಂಬಿಬಂದು ಕೈಗೆ

= ಬ ಬಹಳ ಜನ

[ತಿರುಗುತ್ತ] ± ಇದ್ದಲ್ಲಿ, ಇದೇ ಉಲುಗುಲಿ ಸಂತೆವಾಳದಲ್ಲಿ ಕೊಡಗರು ಹೋಗಿ ಲಡಾಯಿ ಮಾಡಿದಲ್ಲಿ, ಅವನ ಕಡೆ ಕೆಲವು ಮಂದಿ ಮೃತವಾಗಿ, ಸಾಮಾನು ಸರಂಜಾಮು ಅಲ್ಲೇ ಬಿಟ್ಟು, ಬಾಕಿ ಫವುಜು ತೆಗೆದುಕೊಂಡು ಬೆಟ್ಟದಪುರಕ್ಕೆ ಹೋಗಿ ಇಳಕೊಂಡನು.

ಆ ಬಳಿಕ ಈ ವರ್ತಮಾನವನ್ನು ಟೀಪೂ ಸುಲ್ತಾನರಿಗೆ ಬರೆದು ಕಳುಹಿಸಿದ್ದರಿಂದ, ಅವರು ಫವುಜು ತೆಗೆದುಕೊಂಡು [ಇಲ್ಲಿಗೆ] * ಬಂದು, ಉಲುಗುಲಿ ಮಾಳದಲ್ಲಿ ಇದೇ ವರುಷದ ಆಶ್ವೀಜ ಬ. ೩೦ ಯಲ್ಲು ಇಳಕೊಂಡಲ್ಲಿ, ಅಲ್ಲಿ ಇರುವಂತಾ ಕೊಡಗರಿಗೆ ನಂಬಿಗೆ ಭಾಷೆ ಹೇಳಿ ಕವುಲಿಗೆ ಇಳಿಸುತ್ತ [೧೫] × ದಿವಸ ಅಲ್ಲಿ ಇದ್ದು, ಆ ಬಳಿಕ ಮಡಿಕೇರಿಗೆ ಬಂದು, ಅಲ್ಲಿ ಇರುವಂತಾ ಯಾವತ್ತು ಕೊಡಗರಿಗೆ ನಂಬಿಗೆ [ಭಾಷೆ ಹೇಳಿ] † ಅಲ್ಲಿಂದ ಮಾರ್ಗಶಿರ ಶುದ್ಧ ೧ ದಿವಸ ಭಾಗಮಂಡಲಕ್ಕೆ ಹೋಗಿ, ಅದರ ಸಮೀಪದಲ್ಲಿ ಇರುವ ದೇವಟ್ಟುಪರಂಬು ಎಂಬ ಮೈದಾನದಲ್ಲು ಇಳಕೊಂಡು, ಅಲ್ಲಿ ಇರುವಂತಾ ಕೊಡಗರಿಗೆಲ್ಲ ನಂಬಿಗೆ ಕೊಟ್ಟು, [ಈ] = ಬ ೫ ದಿವಸ ಕವಲಿಗೆ ಬಂದು ಇದ್ದಂತ ಕೊಡಗರು, ಅವರ ಕುಟುಂಬ ಮಕ್ಕಳ ಸಹ ಸಮಸ್ತರನ್ನೂ ಬಳಸಿ ಹಿಡಿಕೊಂಡು, ಪಾರೆ ಹಾಕಿ ತೆಗೆದುಕೊಂಡು ಹೋಗಿ, ತಮ್ಮ ಸೀಮೆ ಗಡಿಗಳಿಗೆಲ್ಲ ಹಂಚಿ ಹಾಕಿ, ಆ ಯಾಯ ಸ್ಥಳಕ್ಕೆ ಕಳುಹಿಸಿ, ಆ ಜನಕ್ಕೆಲ್ಲ ಮುಂಜಿಮಾಡಿ, ಕುಲಗೆಡಿಸಿ, ಚೆಲೆಯರ ಮಾಡಿ ಇಟ್ಟುಕೊಂಡು, ಆ ಬಳಿಕ ತಮ್ಮ ಜಾತಿ ಸೇಕ್, ಸೈದ್, ಮೊಗಲ್, ಪಟಾಣ [ಎಂಬ ಜಾತಿಗೆ] § ಕೊಡಗಿನ ಸೀಮೆಗೆ ಕಳುಹಿಸಿ, ಕೊಡಗಿನ [ಸೀಮೆ ಭೂಮಿ] || ಯನ್ನು ಆ ಮುಸಲ್ಮಾನರಿಗೆ ಜಾಗೀರಾಗಿ ಕೊಟ್ಟು, ಆರಂಬದ ಬದುಕು ಮಾಡುವ ಬಗ್ಗೆ ಪ್ರಾಕು ಕೊಡಗರಿಗೆ ಬದುಕುಮಾಡುತ್ತ ಇದ್ದ ಹೊಲೆಯರನ್ನು ಈ

± ಬ ಹೋಗುತ್ತ

* ಬ ಕೊಡಗಿನ ಸೀಮೆ ಒಳಕ್ಕೆ

× ಬ ಕಾರ್ತಿಕ ಶು ೧೫ ಪರಿಯಂತರ ೧೫

† ಬ ಕೊಟ್ಟು ಇಳಿಸಿ

= ಬ ಮಾರ್ಗಶಿರ

§ ಬ ಎಂಬ ಮುಸಲ್ಮಾನ ಜಾತಿಯವರಿಗೆ

ಬ ಭೂಮಿ ಮನೆ

ಮುಸಲ್ಮಾನರಿಗೆ ಕೊಟ್ಟು, ಇವರಿಂದ [ಸಾಗು ಆಗದೆ] ± ಹೋದ ಭೂಮಿ ಮನೆಗೆ ಆದವಾನಿ ಸೀಮೆ ರಹಿತರ ಹಿಡಿತಂದು ಕೊಡಗಿನ ಸೀಮೆಯಲ್ಲಿ ರೈತಾವಿಗೆ ಇಟ್ಟು, ಅವರಿಗೆ ಬೇಕಾದ್ದು ಕೊಟ್ಟು, ಇಲ್ಲಿ ಸರಕಾರದ ಕೆಲಸ ಬಜಾಯಿಸುವ ಬಗ್ಗೆ ಪ್ರಾಕು [ಇಲ್ಲಿ] † ಕರಣೀಕತನ ಮಾಡಿಕೊಂಡು ಇದ್ದವನ ತಮ್ಮ ನಾಗಪ್ಪೈಯು ಎಂಬವನ ನೇಮಿಸಿ ಇಟ್ಟು ಇದ್ದಲ್ಲಿ, ಈ ನಾಗಪ್ಪೈಯು ಎಂಬವನು ಆ ರೈತರಿಗೆ ಸಲ್ಲುವಂತ (ಹ) ಕೆಲವು ಹಣ ದವಸ ಧಾನ್ಯ ತಟವಟ ಮಾಡಿ ತಿಂದದ್ದರಿಂದಲೂ, ಇದು ವಿನಹಾ ಕೆಲವು ರೈತರಿಂದ ಲಂಚ ತೆಗೆದುಕೊಂಡು ಅವರನ್ನು ಬಿಟ್ಟುಬಿಡುತ್ತ ಇದ್ದದ್ದರಿಂದಲೂ ಸಹ, ಮಧ್ಯೆ ಮಾರ್ಗದಲ್ಲಿ ಆ ಆದ್ವಾನಿಗೆ ಕದ್ದು ಹೋಗುತ್ತ ಇದ್ದಂತ (ಹ) ರೈತರಲ್ಲಿ ಕೆಲವರು ಗಡಿ ಪಾರೆದವರಿಗೆ ಸಿಕ್ಕಿದ್ದರಿಂದ, ಆ ಪಹಾರೆದವರು ಟೀಪೂಸುಲ್ತಾನರ ಬಳಿಗೆ ಕಳುಹಿಸಿದಲ್ಲಿ, ಅವರನ್ನ ವಿಚಾರಿಸುವಾಗ್ಗೆ, ಆ ನಾಗಪ್ಪಯ್ಯನ ದಗಲ್‌ಬಾಜಿತನ ತಿಳಿದರಿಂದ, ಆ ನಾಗಪ್ಪೈಯನನ್ನು ಹಿಡಿದು [ಗಲ್ಲು] * ಹಾಕಬೇಕೆಂಬದಾಗಿ ಟೀಪೂಸುಲ್ತಾನರು ಅಪ್ಪಣೆ ಕೊಟ್ಟದ್ದರಿಂದ, ಈ ವರ್ತಮಾನ ತಿಳಿದುಕೊಂಡು ಆ ನಾಗಪ್ಪಯ್ಯನು ಓಡಿಹೋಗಿ ಕೋಟೆ ಅರಸುಗಳ ಬಳಿ ಸೇರಿಕೊಂಡಲ್ಲಿ, ಅವರ ಕಡೆ ೫೦ ಜನ ನಾಯಿಮಾರರನ್ನು ಕೊಡಿಸಿ, ಪೈಯೊಟ್ಟು ಚಂದು ಎಂಬವನ ಗೊತ್ತು ಮಾಡಿ ಕೋಟೆ ಅರಸುಗಳು ಕೊಟ್ಟಲ್ಲಿ, ಆವಂದಿರ ಕರೆದುಕೊಂಡು ಕೊಡಗಿಗೆ ಬಂದು, ಕಾಡಲ್ಲಿ ಸೇರಿಕೊಂಡು ಇರುವಂತಾ ಕೊಡಗು ಜನರಿಂದಲೂ ಪಣ್ಯಾವ ಹೊಲೆಯರಿಂದ ಸಹ ಕೂಡಿಸಿ, ಎಲ್ಲಾ ೧೦೦ ಜನ ಪರಿಯಂತರ ಕೂಡಿಸಿಕೊಂಡು, [ಕಾಡಿನಲ್ಲಿ] || ರೈತಾವಿ ಮಾಡಿಕೊಂಡು ಇರುವ ಆದ್ವಾನಿ ರೈತರ ಮನೆ ಮಾಲು ಲೂಟಿಮಾಡಿಕೊಂಡು, ಶರಾರತ್ತುಮಾಡಿಕೊಂಡು ಇದ್ದಲ್ಲಿ, ಈ ಸಮಾಚಾರವನ್ನು ಈ ಸೀಮೆಯಲ್ಲಿ ಕಾಡು ಸೇರಿಕೊಂಡು ಇರುವಂತಾ ಕೊಡಗು [ಜನರು] ± ವೀರರಾಜೇಂದ್ರ

± ಬ ಸಾಗದೆ

† ಬ ಈ ಸಂಸ್ಥಾನದ

* ಬ ತೂಗ

|| ಬ ಕಾಡುಸೇರಿಕೊಂಡು, ಈ ಸೀಮೆಯಲ್ಲಿ

± ಬ ಜನರಲ್ಲಿ ವೀರರಾಜೇಂದ್ರ ಒಡೆಯರಿಗೆ ಆಪ್ತರಾದಂತವರು ಪೆರಿಯಾಪಟ್ಟಣಕ್ಕೆ

ಒಡೆಯರಿಗೆ ಹೇಳಿಕಳುಹಿಸಿದಲ್ಲಿ, ಅವರು ಅಲ್ಲಿಂದ ಕುಟುಂಬ ಮಕ್ಕಳ ಕರೆದುಕೊಂಡು ಕಲಿಸಂದ ೪೯೫೦ ನೇ ಕೀಲಕ ಸಂವತ್ಸರದ ಮಾರ್ಗಶಿರ ಬ ೭ [ದಿವಸ] * ರಾತ್ರೆ ಗಳಿಗೆ ೧೫ ರಲ್ಲಿ ಆ ಕೋಟಿ ಇಳಿದು, ತಮ್ಮ ಕೊಡಗುಸೀಮೆಗೆ ಬಂದು, [ಕುರುಚ್ಚಿ] = ಎಂಬ ಗ್ರಾಮದಲ್ಲಿ ತಮ್ಮ ಸಂಸಾರವನ್ನು ಮಡಗಿ, ತಾವು ಕಿಗ್ಗಟ್ಟನಾಡಲ್ಲು ಇರುತ್ತ ಇದ್ದಲ್ಲಿ, ಈ ನಾಗಪ್ಪೈಯು ಎಂಬವನು ಕೋಟಿ ಅರಸುಗಳ ಬಳಿಗೆ ಹೋಗಿ,:— "ಕೊಡಗಿನ ದೊರೆಗಳು ಪಿರಿಯಾಪಟ್ಟಣದಿಂದ [ಇಲ್ಲಿಗೆ] † ಬಂದು ಇದ್ದಾರೆ. ಗಿಡ ಸೇರಿಕೊಂಡು ಇರುವಂತವರನ್ನ ಜಮಾಯಿಸುತ್ತ ಇದ್ದಾರೆ" ಎಂದು ಹೇಳಿದಲ್ಲಿ, ಆ ಕೋಟಿ ಅರಸು ಹೇಳಿದ್ದು ಏನೆಂದರೆ:— "ನೀನು ಅವರ [ಕಡೆ] X ಚಾಕರಿಸಿದ್ದೀಯೆ! ನೀನು ಹೇಳಿದ ಮಾತು ಅವರು ಪ್ರಮಾಣವಾಗಿ ನಂಬುತ್ತ ಇದ್ದಾರೆ. ಏನು ಬಗೆಯಿಂದಾದರೂ ಉಪಾಯದಿಂದ ಅವರ ಇಲ್ಲಿಗೆ ಕರೆದುಕೊಂಡು ಬಾ. ಆ ಮೇಲೆ ಯಾವತ್ತೂ ಕಾರ್ಯ ಪ್ರವರ್ತಿಸಬಹುದು"— ಎಂಬದಾಗಿ ಹೇಳಿದ್ದರಿಂದ, ಆ ನಾಗಪ್ಪೈಯನು ವೀರರಾಜೇಂದ್ರ ಒಡೆಯರವರ ಬಳಿಗೆ ಬಂದು ಹೇಳಿದ್ದು:— "ತಾವು ತಮ್ಮ ರಾಜ್ಯಕ್ಕೆ ಬಂದ ವರ್ತಮಾನ ಕೋಟಿ ಅರಸುಗಳು ಕೇಳಿ ಬಹಳ ಹುರುಷಿತರಾದರು. ತಮ್ಮ ಭೇಟಿ ಆಗಬೇಕೆಂಬದಾಗಿ ಅವರಿಗೆ ಬಹಳ ಅಪೇಕ್ಷೆ ಇದೆ"— ಎಂದು ನಾನಾ ಪ್ರಕಾರ ಹೇಳಿ ನಂಬಿಸಿ, ರಾಜರ ಕರೆದುಕೊಂಡು ಹೋಗಿ, [ಅರಳ] § ಎಂಬ ಗ್ರಾಮದಲ್ಲಿ ಇಳಿಸಿ, ತಾನು ಕೋಟಿ ಅರಸುಗಳ ಬಳಿಗೆ [ಹೋಗಿ] ‖ ಏನೇನೋ ಮಾತನಾಡಿಕೊಂಡು, ಅಲ್ಲಿಂದ ೪೦ — ೫೦ ಜನ ಪರಿಯಂತರ ಆಯುಧ ಪಾಣಿ ನಾಯಿಮಾರರನ್ನು, ಕರೆದುಕೊಂಡು ಬಂದು, ರಾಜರು ಇಳಿದು ಇರುವ ಅರಳ ಎಂಬ ಗ್ರಾಮದ ಸುತ್ತ ಪಾರಾ ನಿಲ್ಲಿಸಿ ಬಿಟ್ಟನು. ಆ ಮೇಲೆ:— "ಅವರ ಕಂಡು ಭೇಟಿ ಆಗಬೇಕು"— ಎಂಬದಾಗಿ ಹೇಳಿದಲ್ಲಿ "ಎರಡು ದಿವಸ ಒಳ್ಳೇದಲ್ಲ. ಆ ಮೇಲೆ ಕಾಣಬಹುದು" ಎಂಬದಾಗಿ

---

* ಬ ಯಲ್ಲು ಬೃಹಸ್ಪತಿವಾರ

= ಬ ಕೊಡಗಿನ ಸೀಮೆ ವಳಿತವಾದ ಕುರ್ಚಿ

† ಬ ಕೊಡಗಿನ ಸೀಮೆಗೆ

X ಬ ಕಡೀಂ

§ ಬ ಅರಳ

‖ ಬ ಪಾಳೆಗೆ ಹೋಗಿ

ಹೇಳಿದರು. ಅಯಿರಡು ದಿನ ಕಳೆದ ಮೇಲೆ, "ಭೇಟಿ ಆಗಬೇಕು" ಎಂದು ಹೇಳಿದ್ದರಿಂದ, ಅವಾಗ್ಲೂ ಅದೇ ಮೇರೆಗೆ ನೆವನ ಹೇಳಿ ನಾಗಪ್ಪೈಯನು ಹೋದನು. ಆ ಬಳಿಕ ಮೂರನೇ ದಿವಸದಲ್ಲಿ ಬಂದು ಹೇಳಿದ್ದು:—"ನನಗೆ ತಿಥಿ ಪ್ರಸ್ತ ಇದ್ದುದರಿಂದ ಈಗ ಎರಡು ಮೂರು ದಿನ ಕುಟುಂಬ ಮಕ್ಕಳ ಬಳಿಯ ಇದ್ದೆ. ಕೋಟಿ ಅರಸುಗಳ ಬಳಿಯ ಹೋಗುವದಕ್ಕೆ ಸಮಯವಾಗಲಿಲ್ಲ"— ಎಂಬದಾಗಿ ಹೇಳಿದ(ನು). ಆ ಬಳಿಕ ಮುತ್ತೊಂದಾವರ್ತಿ ಈ ನಾಗಪ್ಪೈಯನ ಸಂಗಡ ಹೇಳಿ ಬಿಟ್ಟಲ್ಲಿ, ಅವನು ಹೋಗಿ ಕೋಟಿ ಅರಸುಗಳ ಬಳಿಯ [ಅಯಿದು] × ದಿವಸ ಕುಳಿತುಕೊಂಡ(ನು). ಈ ಮೇರೆಗೆ ಬೇಟಿ [ಆಗಿ] † ಅಲ್ಲಿಂದ ಬಿಡುಗಡೆ ಆಗಿ ಪುನಃ ತಿರುಗಿ ಬರುವ ಸಂಗತಿ(ಯೂ) ಕಾಣಲಿಲ್ಲ. ಈ ಮೇರೆ ಹದಿನೈದು ದಿವಸ ಕಾಲಹರಣ ಮಾಡಿ ಬಿಟ್ಟ (ನು). ಅಷ್ಟರಲ್ಲಿ ಟೀಪೂಸುಲ್ತಾನರು ತಮ್ಮ ಕಡೆ ಕೆಲವು ಪವುಜನ್ನು ವೀರರಾಜೇಂದ್ರರ ಹುಡುಕುವ ಬಗ್ಗೆ ಮೊಕರೂರು ಮಾಡಿ ಕಳುಹಿಸಿದರಿಂದ, ಈ ಸಮಾಚಾರ ಅವರ ಕುಟುಂಬ [ದ] * ಬಳಿಯ ನವಕರರು ಬಂದು ರಾಜರ ಸಂಗಡ ಹೇಳಿದಲ್ಲಿ, ಅವರು ಆ ಬಂದ ಮನುಷ್ಯರ ಸಂಗಡ ಕೋಟಿ ಅರಸುಗಳಿಗೆ ಹೇಳಿ ಕಳುಹಿಸಿದ ವಿವರಃ—"ನಮ್ಮ(ನ್ನು) ಹುಡುಕಿ ತಲಾಸು ಮಾಡುವ ಬಗ್ಗೆ ಟೀಪೂಸುಲ್ತಾನರ ಕೆಲವು ಪವುಜು ಬಂದು ಇದೆ ನಾವು ಇಲ್ಲಿಗೆ ಬಂದು ಇಪ್ಪತ್ತು ದಿನವಾಯಿತು. ಈಗ ನಮ್ಮನ್ನು ಬಿಟ್ಟರೆ ನಮ್ಮ ಕುಟುಂಬ ಮಕ್ಕಳ ಬಳಿಗೆ ಹೋಗಿ ಅವರನ್ನು ಬಂದೋಬಸ್ತಿನ ಜಾಗದಲ್ಲಿ ಇಟ್ಟು, ಆ ಬಳಿಕ ತಮ್ಮ ಭೇಟಿಗೆ ಬಂದೇವು"— ಎಂಬದಾಗಿ ಹೇಳಿಕಳುಹಿಸಿದಲ್ಲಿ, ಆ ಬಳಿಕ ಕೋಟಿ ಅರಸುಗಳು ಅದೇ ನಾಗಪ್ಪೈಯನ ಸಂಗಡ ಹೇಳಿಕಳುಹಿಸಿದ್ದು "ನಿಮ್ಮ ಹಿರಿಯ ಅಜ್ಜೈಯನವರಾದ ದೊಡ್ಡ ವೀರಪ್ಪ ಒಡೆಯರು ನಮ್ಮ ಹಿರಿಯ [ರವರ] ± ಒಬ್ಬರ ಕೊಂದು ಬಿಟ್ಟು ಇದ್ದಾರೆ. ಅದಕ್ಕೆ ನೀವು ತಲೆಗೆ ತಲೆ ಕೊಟ್ಟಲ್ಲದೆ ನಮ್ಮ ಬೇಟಿ ಆಗಲಿಕ್ಕಿಲ್ಲ"— ಎಂಬದಾಗಿ ಹೇಳಿ ಬಿಟ್ಟಲ್ಲಿ, ಈ ಮಾತಿಗೆ ಮಹಾರಾಜರು ಹೇಳಿದ್ದು— "ಈಗ ನೂರುವರುಷಕ್ಕೆ ಮುಂದೆ ನಿಮ್ಮ ಹಿರಿಯರವರು ನಮ್ಮ

× ಬ ಅಯಿದಾರು

† ಬ ಆಗುವ ಸಂಗತಿಯೂ

* ಬ. ಮಕ್ಕಳ

± ಬ ಕಾರಣವರ

ಅಜ್ಜೈಯನವರ ಕೂಡೆ ಜಗಳ ಮಾಡಿ ತೋಮರದ ಮೊಕ್ಕಾಮಿನಲ್ಲಿ ತೀರಿಹೋದರು. ಆದಕ್ಕೆ ಬದಲು ಈಗ ತಲೆಕೊಡಬೇಕೆಂದರೆ ಮಾಡತಕ್ಕದ್ದೇನು? ನಾವು ನಿಮ್ಮ ಮಾತ ನಂಬಿ ಬಂದು ನಿಮ್ಮ ಕೈಗೆ ಸಿಕ್ಕಿ ಇದೇವೆ. ತಾವು ಪಾಪ ಪುಣ್ಯ ಬಲ್ಲಂತವರಿದ್ದೀರಿ. ಎಲ್ಲಾ ನಿಮಗೇ ಕೂಡಿ ಇದೆ"— ಎಂಬದಾಗಿ ಹೇಳಿದಲ್ಲಿ ಆ ಮಾತಿಗೆ[ನಾಗಪ್ಪೈಯ ಹೇಳಿದ್ದು:— "ಮನಸ್ಸಿನಲ್ಲಿ] * ಕರಕರೆ ಮಾಡಬೇಡಿ. ನಾನು ಕೋಟಿ ಅರಸುಗಳ ಬಳಿಗೆ ಹೋಗಿ ಈ ವಿವರ ಯಾವತ್ತು ಅವರಿಗೆ ಹೇಳಿ ನಾಳೆ ದಿವಸ ಏನು ಬಗೆಯಿಂದಾದರೂ ತಮ್ಮ ಅವರ ಭೇಟಿ ಆಗುವ ಹಾಗೆ ಮಾಡುತ್ತೇನೆ"— ಎಂಬದಾಗಿ [ಹೇಳಿ ಹೋದನು] * ಮೂರನೆ ದಿವಸ ಬೆಳಗ್ಗೆ ರಾಜರನ್ನು [ಬೇಟಿ ಆಗುವ ಬಗ್ಗೆ] * ಕರೆ ಬಿಟ್ಟಲ್ಲಿ. ರಾಜರು ಬೇಟಿಗೆ ಎಂದು ಕೋಟಿ ಅರಸುಗಳ ಮೊಕ್ಕಾಂ ಪಾಲಿಗೆ ಹೋಗುತ್ತ ಇದ್ದಲ್ಲಿ, ನಾಗಪ್ಪೈಯನು ಬಂದು ಹೇಳಿದ್ದು "ಪ್ರಾಕಾರಭ್ಯ ಅವರಿಗೂ ನಮಗೂ ಇರುವ ಹಗೆತನ ತೀರಿತು ಎಂಬದಾಗಿ ಕೋಟಿ ಅರಸುಗಳು ಒಂದು ಕಾಗದ ಬರೆಸಿ ಮಡಗಿ ಇದ್ದಾರೆ. ಬೇಟಿ ಆದ ತರುವಾಯ ಆ ಕಾಗದಕ್ಕೆ ದಸ್ಕತು ಮಾಡಿಕೊಡಿ ಎಂತ ಕೋಟಿ ಅರಸುಗಳು ತಮ್ಮ ಕೈಲಿ ಕೊಟ್ಟಾರು. ದಸ್ಕತು ಮಾಡುವ ಬಗ್ಗೆ ತಾಮಸ ಮಾಡಿದರೆ, ತಾವು ಕೊಡಗಿಗೆ ಹೋಗುವಂತಾದ್ದು ಪ್ರಯಾಸವಾಗಿ ಕಾಣುತ್ತದೆ."— ಎಂಬದಾಗಿ ಹೇಳಿ, ಕರೆಕೊಂಡು ಹೋಗಿ ಬೇಟಿ ಮಾಡಿಸಿದ(ನು). ಆ ಬಳಿಕ, ಕೋಟಿ ಅರಸುಗಳು ಆ ಬರೆಸಿ ಇಟ್ಟು ಇದ್ದ ಕಾಗದವನ್ನು ರಾಜರ ಕೈಯ ಕೊಟ್ಟು, "ಇದಕ್ಕೆ ದಸ್ಕತು ಮಾಡಿ ಕೊಟ್ಟರೆ ಪ್ರಾಕಿನ ಹಗೆತನ ತೀರಿತು. ಇಲ್ಲದಿದ್ದರೆ ಕೊಲೆಗೆ ಕೊಲೆ ನಿಮ್ಮಿಂದ ತೆಗೆದು ಕೊಂಡೇವು" ಎಂಬದಾಗಿ ಹೇಳಿದಲ್ಲಿ, ದೊರೆಗಳು ತಮ್ಮ ಮನಸ್ಸಿನಲ್ಲಿ ಗ್ರಹಿಸಿದ್ದು— "ಈ ಕಾಗದಕ್ಕೆ ಗುರ್ತು ಹಾಕಿ ಕೊಟ್ಟದ್ದು ಏನು ಬಗೆಯಿಂದಾದರೂ ಇವರ ಕೈಯಿಂದ ತಪ್ಪಿ ನಮ್ಮ ರಾಜ್ಯಕ್ಕೆ ಹೋಗಿ, ಆ ಮೇಲೆ ಬೇಕಾದ ಹಾಗೆ ಮಾಡಬಹುದು" ಎಂಬದಾಗಿ ಆ ಕಾಗದಕ್ಕೆ ಗುರ್ತು ಹಾಕಿ ಕೊಟ್ಟರು. ಆ ಕಾಗದವನ್ನು ಕೋಟಿ ಅರಸುಗಳು ನಾಗಪ್ಪೈಯನ ಕೈಯ ಕೊಟ್ಟು, 'ಈ ಕಾಗದದ ಅಭಿಪ್ರಾಯ ಯಾವತ್ತು ದೊರೆಗಳಿಗೆ ಹೇಳು' ಎಂಬದಾಗಿ ಹೇಳಿದಲ್ಲಿ, ಅವನು ಓದಿ ತಿಳಿಯಪಡಿಸಿದ ವಿವರ:— "ಕೀಲಕ ಸಂವತ್ಸರದ ಪುಷ್ಯ ಮಾಸದಲ್ಲು ಪಾಲಿ ವೀರವರ್ಮರಾಜರಿಗೆ ಕೊಡಗಿನ ಸಂಸ್ಥಾನದ ಹಾಲೇರಿ ವೀರಪ್ಪ ಒಡೆಯರು

---

* ಈ ಭಾಗ ಅ. ಪ್ರತಿಯಲ್ಲಿ ಇಲ್ಲ

ಬರೆಸಿಕೊಟ್ಟ ಕಾಗದದ ಕ್ರಮವೆಂತೆಂದರೆ:— ಪ್ರಾಕು ನಿಮ್ಮ ಕಾರಣವರನ್ನು ನಮ್ಮ ಕಾರಣದವರು ಕೊಂದ ಪಾಪ ಪರಿಹಾರ ಉದ್ದಿಶ್ಯ ಪೆರುಮಾಳು ಭಗವತಿಗೆ ನಾವು ಬಿಟ್ಟುಕೊಟ್ಟದ್ದು: ಕಿಗ್ಗಟ್ಟು ಹತ್ತುನಾಡು, ಅಮ್ಮತ್ತಿ ನಾಡು, ಎಡೆನಾಲ್ಕು ನಾಡು, ನಿಮ್ಮ ಕಾರಣವರು ಬಿದ್ದು ಹೋದ ತೋಮರದಲ್ಲಿ ಒಂದು ಕೋಟೆಗೆ ಸ್ಥಳ ಕೊಡುತ್ತ ಇದೇವೆ. ಈ ದಿವಸ ನಿಮ್ಮ [ಕುಡುಪಿ] * ತೀರಿತು. ಇನ್ನು ಮುಂದೆ ನಮಗೆ ನಿಮಗೆ ಅನ್ಯೋನ್ಯವೇ ಸರಿ, ಎಂಬದಾಗಿ ಬರೆದು ಇತ್ತು. ಈ ಮೇರೆ ಕೋಟೆ ಅರಸುಗಳು ನಾಗಪ್ಪೈಯನ ಕೈಲಿ ಬರೆಸಿ ಇಟ್ಟು ಇದ್ದ ಕಾಗದಕ್ಕೆ, ಅಂಕೆಯಲ್ಲಿ ಒಂದು ಗುರ್ತು ಹಾಕಿಸಿ ತೆಗೆದುಕೊಂಡದ್ದೇ ಹೊರತು, ರಾಜರು ತಮ್ಮ ಸಂಸ್ಥಾನದ ರಾಜಮೊಹರವನ್ನು ಒತ್ತಿ ತಮ್ಮ ಹೆಸರ ಸೈ ಹಾಕಿ ರಜಾಮಂದಿಯಿಂದ ಕೊಡದೆ, ರಾಜರು ಅವನ ಪಾರದಿಂದ ಬಿಡುಗಡೆಯಾಗಿ, ತಮ್ಮ ಕೊಡಗು ಸೀಮೆ ಒಳಗೆ ಬಂದು, ತಮ್ಮ ಅರಮನೆ ಕುಟುಂಬ ಮಕ್ಕಳು ಇದ್ದ ಕುರುಚಿ ಎಂಬಲ್ಲಿಗೆ ತಲಪಿದರು. ಅಲ್ಲಿ ಚಳವಿಗೆ ಚೂಕರವಾದ್ದರಿಂದ, ಕೆಲವು ಕುಟುಂಬ ತಮ್ಮ ಅಣ್ಣನ ಮಗನ ಸಹ ಕುರಚ್ಚಿ ಗ್ರಾಮದಲ್ಲಿ ಮಡಗಿ, ಕೆಲವು ಅರಮನೆ ಕುಟುಂಬ ತಂದು ಭರಪೊಳೆ ಎಂಬಲ್ಲಿ ಇಟ್ಟು ಇರುತ್ತ ಇದ್ದರು.

ಆ ಬಳಿಕ [ಹತ್ತು] × ದಿವಸದ ಮೇಲೆ ಈ ಕೋಟೆ ಅರಸುಗಳು ಮುನ್ನೂರು ನಾಯಿಮಾರರನ್ನು ಕರೆದುಕೊಂಡು ಗಟ್ಟ ಹತ್ತಿ, ಕಿಗ್ಗಟ್ಟು ನಾಡು ವಳಿತವಾದ ಮರೇನಾಡಿಗೆ ಬಂದು, ಇಳಿದುಕೊಂಡು ಇರುವ ಸಮಾಚಾರ ರಾಜರು ಕೇಳಿ, ಈ ವಿವರವನ್ನು ತಮ್ಮ (ಆಶ್ರಿತ) ರಾದ † ಕಡಿಯತ್ತು ಮುರ್ನಾಡು ಅಪ್ಪನೆರವನ ಅಚ್ಚಯ್ಯಪಟ್ಟೆ ಚೆರುವನ ಬೋಳುಕನಿಗೆ ಹೇಳಿ ಕಳುಹಿಸಿದಲ್ಲಿ, ಅವರು ಕಡಿಯತ್ತು ಮುರ್ನಾಡಲ್ಲು ಇದ್ದ ಆಯುಧಪಾಣಿ ಕೊಡಗು ಜನ ಯಾವತ್ತು ಕರಕೊಂಡು ಬರಪೊಳೆಗೆ ಬಂದಲ್ಲಿ, ಈ ಮಂದಿ ಮತ್ತು ಕೆಲವು ಕೊಡಗು ಜನ ಇದರ ಸಂಗಡ ಕೂಡಿಸಿ, ಐನೂರು ಜನಕ್ಕೆ ಭರ್ತಿ ಮಾಡಿಕೊಂಡು, ಈ ಜನವನ್ನು ಕರಕೊಂಡು ರಾಜರು ಮರೆನಾಡಿಗೆ ಕೋಟೆ ಅರಸುಗಳು ಇದ್ದಲ್ಲಿಗೆ ಹೋಗಿ ಕೇಳಿದ ವಿವರ:- "ನೀವು ನಮ್ಮ ಕೊಡಗಿನ ಸೀಮೆ ಗಟ್ಟ ಹತ್ತಿ ಮಂದಿ ತೆಗೆದು

---

* ಬ ಕುತುಪಿ

× ಬ ಹತ್ತು ಹದಿನೈದು

† ಬ ಅಪ್ಪ

ಕೊಂಡು ನಮ್ಮ ಅಪ್ಪಣೆ ಇಲ್ಲದೆ ನಿಮ್ಮ ಹದ್ದು ದಾಟಿ ನಮ್ಮ ಅರ್ದಿಗೆ ಬರುವದಕ್ಕೆ ಕಾರಣವೇನು?" ಎಂಬದಾಗಿ ಕೇಳಿದಲ್ಲಿ, ಅವರು ಹೇಳಿದ ವಿವರಃ-"ನಿಮ್ಮ ಹಿರಿಯರು ನಮ್ಮ ಹಿರಿಯುವರ ಕೊಂದು ಹಾಕಿದ ತಲೆ ಬೆಲೆ ಉದ್ದಿಶ್ಯವಾಗಿ ಬರೆಸಿ [ಕೊಟ್ಟ]ಂತಾ * ಈ ನಾಡುಗಳನ್ನು ವಿಚಾರಿಸುವ ಬಗ್ಗೆ ಬಂದೆವು"- ಎಂಬದಾಗಿ ಕೋಟಿ ಅರಸುಗಳು ಹೇಳಿದ್ದಕ್ಕೆ, ಇವರು ಹೇಳಿದ ಜವಾಬುಃ– "ಹಾಗಾದರೆ ಬೈನಾಡಲ್ಲಿ ನಮ್ಮ ಅಣ್ಣ ತಮ್ಮಂದಿರಾದ ದೊರೆಮಕ್ಕಳು ಇಬ್ಬರನ್ನು ನೀವು ಹಿಡಿದು ಕೊಂದುಹಾಕಿದ್ದಿರಷ್ಟೇ? ಈ ಎರಡು ತಲೆ ಬೆಲೆ ನಮಗೆ ನೀವು ಏನು ಕೊಟ್ಟು ನಮ್ಮ ಹಗೆ ತೀರಿಸಿಕೊಂಡು ಇದ್ದೀರಿ?" ಎಂತ ಕೇಳಿವಲ್ಲಿ, ಅವರು ಹೇಳಿದ ವಿವರಃ- ತಾವು ಪಾಲೆಗೆ ಬಂದು ಇದ್ದಾಗ್ಗೆ ನಮ್ಮ ಹಿರಿಯರವರ(ನ್ನು) ನಿಮ್ಮ ಹಿರಿಯರವರು ಕೊಂದ ಮಾತು ನಾವು ತೀರಿಸಿಕೊಂಡೆವಷ್ಟೆ? ಆವಾಗ್ಗೆ ನಿಮ್ಮ ಮಾತು ನೀವು ತೀರಿಸಿಕೊಳ್ಳಬೇಕೇ ಹೊರತು ಈಗ ಕೇಳುವುದಕ್ಕೆ ಸಂಗತಿ ಏನು?" ಎಂತ ಕೋಟಿ ಅರಸುಗಳು ಕೇಳಿದಲ್ಲಿಃ" ಹಿಂದೆ ನೂರು ವರುಷದ ಆಚೆಗೆ ನಿಮ್ಮ ಹಿರಿಯುವರು ಜಗಳದಲ್ಲಿ ಬಿದ್ದು ಹೋದದ್ದನ್ನು ಈ ಪರಿಯಂತರಕ್ಕೂ ನಮ್ಮ ಸಂಸ್ಥಾನದ ದೊರೆಮಕ್ಕಳ ಕೂಡ ತೀರಿಸಿಕೊಳ್ಳದೆ (ಈಗ) † ನಮಗೆ ನಂಬಿಕೆ ಕೊಟ್ಟು ಪಾಲೆಗೆ ಕರೆಸಿಕೊಂಡು, ತಲೆ ಬೆಲೆ ಕೊಡಿ ಎಂಬದಾಗಿ ನಿಮಗೆ ಒಪ್ಪಿದಂತೆ ಬರೆದು, ನಮ್ಮ ಕೂಡೆ ಗುರುತು ಹಾಕಿಸಿಕೊಳ್ಳುವುದಕ್ಕೆ ಕಾರಣವೇನು?" ಎಂತ ಕೇಳಿದಲ್ಲಿ, ಇಷ್ಟು ದಿವಸವೂ ನಮಗೆ ಸಮಯ ಸಿಕ್ಕಲಿಲ್ಲ. (ನಮಗೆ)× ಸಿಕ್ಕಿದಾಗ್ಗೆ ನಾವು ತೀರಿಸಿಕೊಂಡೆವು" ಎಂಬದಾಗಿ ಹೇಳಿದರು ಆ ಮಾತಿಗೆ ರಾಜರು ಹೇಳಿದ್ದು— "ನೂರು ವರ್ಷದ ಆಚೆ ಆದ ಮಾತನ್ನು ನೀವು ಇಂದು ಪರಿಯಂತರ ಸಾಧಿಸಿ ಇದ್ದೀರಷ್ಟೇ ! ನಾವು ನಿಮ್ಮ ಕಯ್ಯೊಳಗೆ ಪಾಲೆಯಲ್ಲು ಸಿಕ್ಕಿಕೊಂಡು ಈ ಮಾತು ಹೇಳಿದರೆ, ನಮಗೆ ನೀವು ದಗಾ ಮಾಡೀರಿ ಎಂಬದರಿಂದ ನಿಮ್ಮ ಸೀಮೆ ಬಿಟ್ಟು ನಮ್ಮ ಸೀಮೆಗೆ ಬಂದ ಮೇಲೆ ನಿಮ್ಮ(ನ್ನು) ಕೇಳಬಹುದು ಎಂಬದಾಗಿ ಕುರಿತು ನಾವು ಹದಿನಯಿದು ದಿವಸ ಸಮಯ ಸಾಧಿಸಿದೆವು. ಈ ಬಗ್ಗೆ ನೀವು ನಮ್ಮ ಸ್ಥಳಕ್ಕೆ ಬಂದು ಇದ್ದೀರಷ್ಟೇ? ಈಗ ನಮ್ಮ ಮಾತನ್ನು ತೀರಿಸಿಕೊಟ್ಟು ಹೋಗಿ. ಅಲ್ಲದಿದ್ದರೆ, ನಿಮ್ಮ ಕಾರಣವರ ತಲೆ ಚಿನ್ನದ್ದಾದರೆ, ನಮ್ಮ ಸಂಸ್ಥಾನದ ದೊರೆಮಕ್ಕಳ ತಲೆ

* ಬ ಂಡ

† ಈ ಮಾತುಗಳು ಅ. ಪ್ರತಿಯಲ್ಲಿ ಇಲ್ಲ.

ಮಣ್ಣಿನದು ಅಲ್ಲವಷ್ಟೆ?" ಎಂಬದಾಗಿ ಕೋಟಿ ಅರಸುಗಳಿಗೆ ಕೇಳಿದಲ್ಲಿ, ಇದಕ್ಕೆ ಪ್ರತಿಜವಾಬು ಕೊಡುವದಕ್ಕೆ ಅವರಿಗೆ ಮಾತು ಸಿಕ್ಕದೆ ಸುಮ್ಮನೆ ಇದ್ದರು. ಆ ಬಳಿಕ ರಾಜರು ಹೇಳಿದ್ದುಃ—" ಜೈನಾಡಲ್ಲು ಬಿದ್ದು ಹೋದ ದೊರೆಮಕ್ಕಳ ತಲೆ ಎರಡರಲ್ಲಿ ಒಂದು ತಲೆ ನಿಮ್ಮ ಕಾರಣವರ ತಲೆಗೆ ಸಮವಾಯಿತು. ಮತ್ತೊಂದು ತಲೆಗೆ ನಿಮ್ಮ ತಲೆ ಕೊಡಿ"— ಎಂಬದಾಗಿ ಕೇಳಿದಲ್ಲಿ, ಆ ಮಾತಿಗೆ ಕೋಟಿ ಅರಸುಗಳು ಹೇಳಿದ ವಿವರಃ— "ತಾವು ಹೇಳಿದ ಹಾಗೆ ನಮ್ಮ ಕಾರಣವರ ತಲೆ ಒಂದಕ್ಕೆ ನಿಮ್ಮ ಸಂಸ್ಥಾನದ ದೊರೆಮಗನ ತಲೆ ಒಂದಕ್ಕೆ ಸಮವಾಯಿತು. ಮತ್ತೊಂದು ದೊರೆಮಗನ ತಲೆಗೆ, ಜೈನಾಡು ಕಲ್ಪಾತಿ ಪರಿಯಂತರಕ್ಕೂ ನಮ್ಮದು ನಿಮ್ಮದು ಎಂಬದಾಗಿ ನಿಮಗೆ ನಮಗೆ ವಿವಾದ ಬಿದ್ದು ಇದಯಷ್ಟೆ? ಅದಕ್ಕೆ ನಾವು ಇನ್ನು ಮುಂದೆ ವಿವಾದ ಮಾಡುವದಿಲ್ಲ"— ಎಂಬದಾಗಿ ಹೇಳಿದರು ಆ ಮಾತಿಗೆ ರಾಜರು ಹೇಳಿದ್ದುಃ— "ನೀವು ಬಾಯಿಂದ ಹೇಳಿದರೆ ಈ ಮಾತು ತೀರಲಿಕ್ಕಿಲ್ಲ ಆ ಬಗ್ಗೆ ಬರೆದು ಕೊಡಿ"— ಎಂಬದಾಗಿ ಹೇಳಿದಲ್ಲಿ, ಅದಕ್ಕೆ ಒಡಂಬಟ್ಟು, ಕೋಟಿ ಅರಸುಗಳು ದೊರೆಗಳಿಗೆ ಬರೆದು ಕೊಟ್ಟ ಕಾಗದ (ದ) ಕ್ರಮವೆಂತೆಂದರೆ— "ಕೀಲಕ ಸಂವತ್ಸರದ ಮಾಘ ಶುದ್ಧ ೫ಲ್ಲು ಶ್ರೀಮತು ಕೊಡಗಿನ ಸಂಸ್ಥಾನದ ಹಾಲೇರಿ ವೀರಪ್ಪ ಒಡೆಯರವರಿಗೆ, ವಾಲಿ ವೀರವರ್ಮರಾಜರು ಬರಸಿಕೊಟ್ಟ ಕಾಗದ ಕ್ರಮವೆಂತೆಂದರೆ— ತಮ್ಮ ಸಂಸ್ಥಾನದ ದೊರೆಮಕ್ಕಳು ಇಬ್ಬರನ್ನು ಜೈನಾಡಲ್ಲಿ ಕೊಂದು ಹಾಕಿದ್ದಕ್ಕೆ ಈ ಎರಡು ತಲೆಯಲ್ಲಿ ಒಬ್ಬ ದೊರಮಗನ ತಲೆಗೂ ಪ್ರಾಕು ತೋಮರದಲ್ಲಿ ನಮ್ಮ ಕಾರಣವರ (ನ್ನು) ನಿಮ್ಮ ಕಾರಣರವರು ಹೊಡೆದ ತಲೆಗೂ ಒಂದಕ್ಕೊಂದು ಸಮವಾದ್ದು ಹೋಗಲಾಗಿ, ಬಾಕಿ ಮತ್ತೊಂದು ನಿಮ್ಮ ಸಂಸ್ಥಾನದ ದೊರೆಮಗನ ತಲೆಗೆ, ಜೈನಾಡು ಕಲ್ಪಾತಿ ಪರಿಯಂತರವೂ ನಿಮ್ಮದು ನಮ್ಮದು ಎಂಬದಾಗಿ ನಮಗೆ ವಿವಾದ ಬಿದ್ದು ಇದೆಯಷ್ಟೆ? ಅದಕ್ಕೆ ನಾವು ಇನ್ನು ಮುಂದೆ ವಿವಾದ ಮಾಡುವದಿಲ್ಲ. ಆ ಕಲ್ಪಾತಿ [ಗಡಿ] || ಪರಿಯಂತರಕ್ಕೂ ನಿಮ್ಮದೇ ಸರಿ. ನಮಗೆ ಸಂಬಂಧವಿಲ್ಲ. ನಾವು ವಾಲೆಯಲ್ಲಿ ಬರೆಸಿ ನಿಮ್ಮ ಕಯ್ಯಲ್ಲು ಗುರುತು ಹಾಕಿಸಿ[ತೆಗೆದು] || ಕೊಂಡ ಕಾಗದಕ್ಕೆ ಇನ್ನು ಮುಂದೆ ಕಾರಣವಿಲ್ಲ. ಈ ದಿವಸ ನಮ್ಮ

|| ಈ ಶಬ್ದಗಳು ಅ. ಪ್ರತಿಯಲ್ಲಿ ಇಲ್ಲ.

ನಿಮ್ಮ ಉಭಯಸ್ಥರ [ಕುಡುಪಿ] * ತೀರಿತು. ಇನ್ನು ಮುಂದೆ ನಮಗೆ ನಿಮಗೆ ಅನ್ಯೋನ್ಯವೇ ಸರಿ"— ಎಂಬದಾಗಿ ಕೋಟೆ ಅರಸುಗಳು ಕಾಗದ ಬರೆದು, ತಮ್ಮ ಕೈ ಒಪ್ಪಿತ ಹಾಕಿ, ಆ ಕಾಗದವನ್ನು ಕೋಟೆ ಅರಸುಗಳು ಕೊಡಗಿನ ರಾಜರ ಕೈಲಿ ಕೊಟ್ಟರು. ಆ ಕಾಗದ ತೆಗೆದು ಕೊಂಡು ದೊರೆಗಳು ಬಿಡಾರಕ್ಕೆ ಹೋಗಿ ಇಳಿದುಕೊಂಡರು. ಆ ದಿವಸ ಸಮರಾತ್ರೆಯಲ್ಲು ಈ ಕೋಟೆ ಅರಸುಗಳು ರಾಜರವರಿಗೆ ತಿಳಿಯದಂತೆ ಅವರ ಕಡೆ ನಾಯಿಮಾರ ಜನವನ್ನು ಕರೆದುಕೊಂಡು, ಗಟ್ಟಯಿಳಿದು ಕೊಡಗಿನ ಸೀಮೆ ಸರಹದ್ದು ದಾಟಿ, ಅವರ ಸೀಮೆಗೆ ಓಡಿಹೋದರು.

ಆ ಬೆಳಿಗ್ಗೆ ಈ ಸಮಾಚಾರ ಮಹಾರಾಜರು ಕೇಳಿ, ನೂರು ಜನ ಪರಿಯಂತರ ಕೊಡಗರನ್ನು— "[ಅಲ್ಲಿ] † ಪರಿಯಂತರಕ್ಕೂ ಹೋಗಿ ನೋಡಿಕೊಂಡು ಬನ್ನಿ"— ಎಂಬದಾಗಿ ಅಪ್ಪಣೆ ಕೊಟ್ಟು ಕಳುಹಿಸಿ ದಲ್ಲಿ, ಇವರು ಹೋಗುವಾಗ್ಗೆ, ನಡುಮಾರ್ಗದಲ್ಲಿ ನಾಗಪ್ಪಯ್ಯನು ಸಿಕ್ಕಿ ದ್ದರಿಂದ, ಅವನಿಗೆ ಪಹರೆ ಹಾಕಿಕೊಂಡು, ಈ ಜನ ಹೋಗಿ ಕೊಡ ಗಿನ ಸೀಮೆ ಅರ್ದಿ ಪರಿಯಂತರಕ್ಕೂ ನೋಡಿದಲ್ಲಿ, ಕೋಟೆ ಅರಸು ಗಳು ಕೊಡಗಿನ ಸೀಮೆ(ಯ) ಅರ್ದಿ ದಾಟಿ, ರಾತಾರಾತ್ರೆಯೇ ತಮ್ಮ ಸೀಮೆಗೆ ಹೋಗಿ ಇದ್ದದ್ದರಿಂದ, ಈ ಕೊಡಗು ಜನರು ಪುನಃ ಬಂದು, ಈ ವರ್ತಮಾನವನ್ನು ಶ್ರುತಗೊಳಿಸಿ, ಈ ನಾಗಪ್ಪಯ್ಯನನ್ನು ಒಪ್ಪಿಸಿದ್ದ ರಿಂದ, ರಾಜರು ಅವನನ್ನು ತೆಗೆದುಕೊಂಡು, ಮರೆನಾಡಿಂದ ಅರಮನೆ ಕುಟುಂಬಯಿದ್ದ ಕುರುಚಿ ಗ್ರಾಮ ಸಮೀಪವಾದ್ದರಿಂದ ಅಲ್ಲಿಗೆ ಹೋಗಿ, ಆ ಕೋಟೆ ಅರಸುಗಳು ಬರೆದು ಕೊಟ್ಟಂಥಾ ಕೈಕಾಗದವನ್ನು ಸಂದೂ ಕದ ಒಳಗೆ ಹಾಕಿ ಅಲ್ಲಿ ಇಟ್ಟು, ಐದು ದಿವಸ ಅಲ್ಲಿ ಇದ್ದು, ಆ ಬಳಿಕ ನಾಗಪ್ಪಯ್ಯನನ್ನು ತೆಗೆದುಕೊಂಡು ಬರಮೊಳೆಗೆ ಬಂದು, ಅಲ್ಲಿ ಇದ್ದ ತಮ್ಮ ಕುಟುಂಬವನ್ನೂ ಅವರ ಗರ್ಭದಲ್ಲಿ ಜನಿಸಿದ ತಮ್ಮ ಕುಮಾರತಿ ರಾಜಮ್ಮಾಜಿಯನ್ನು ಸಹ ಕರಕೊಂಡು, ಪಾಡಿನಾಲ್ಕುನಾಡು ವಳ್ಳಿತ ವಾದ ಯವರುಕಪಾಡಿ ಎಂಬ ಗ್ರಾಮಕ್ಕೆ ಇದೇ ಸಂವತ್ಸರದ ಮಾಘ ಶುದ್ಧ ೧೩ ದಿವಸ ಬಂದು, ಕೇಟ್ಟುವಳಿ ಮನೆ ಬಿಡಾರ ಮಾಡಿಸಿ, ಕುಟುಂಬ ಸಮೇತ ಅಲ್ಲಿ ಇಳುಕೊಂಡು, ಆ ನಾಗಪ್ಪಯ್ಯ ಎಂಬ ನಿಮ್ಮಾ

* ಬ ಕುತುಪಿ

† ಬ ಅರ್ದಿ

ಕ್‌ಹರಾಮನ ಕಾಲಿಗೆ ಸಂಕೋಲೆ ಹಾಕಿ ಅಲ್ಲಿ ಸೆರೆಮನೆ ಕೂಡಿಸಿ ಬಿಟ್ಟು, ಹತ್ತು ದಿವಸ ಅಲ್ಲಿ ಇದ್ದು, ವೀರರಾಜೇಂದ್ರ ಒಡೆಯರವರು ಕೂಡ ಇದ್ದ ಜನರ ಕರೆದುಕೊಂಡು ಹೋಗಿ ತಮ್ಮ ರಾಜ್ಯದಲ್ಲಿ ಟೀಪೂ ಸುಲ್ತಾನರ ಕಡೆಯಿಂದ ಉಂಬಳಿ ಪಡಕೊಂಡು ಇದ್ದಂತ ಸೇಕು ಸೈದ್ ನೋಗಲ್ ಪರಾಣ ಎಂಬ ಮುಸಲ್ಮಾನರಿಗೆ ತಂಬ ಸೊಂಚಾಯಿಸಿ, ಅವರನ್ನು ಪಲಾಯನ ಮಾಡಿಸಿ, ಆವವಾನಿ ಸೀಮೆ ಪ್ರಜೆಗಳನ್ನು ಸೆರೆ ಬಿಡಿಸಿ ಬಿಟ್ಟು, ಕಾಡು ಸೇರಿಕೊಂಡು ಇದ್ದಂತಾ ಕೊಡಗ ಜನರನ್ನು ಕರೆಸಿ, ಅವರವರ ಭೂಮಿ ಮನೆ ಅವರವರಿಗೆ ಕೊಡಿಸಿ, ಆ ಭೂಮಿಯಿಂದ ಮುಸಲ್ಮಾನರು ಬೆಳೆದು ಕೂಡಿಸಿ ಇದ್ದಂಥಾ ನವಧಾನ್ಯ ದನ ಕರ ಪಂಚಲೋಹ ಮುಂತಾಗಿ ಆಯಾಯಾ ಮನೆ ಯಲ್ಲು ಇದ್ದದ್ದನ್ನು ಆ ಭೂಮಿ ಮನೆ ಜಮ್ಮಗಾರರಿಗೆ ಕೊಡಿಸಿ, "ನಿರ್ಭ ಯದಿಂದ ನಿಮ್ಮ ನಿಮ್ಮ ಮನೆಯಲ್ಲಿ [ಒಕ್ಕಲಾಗಿ] × ಬಾಳುತ್ತ ಇರಿ"— ಎಂದು ಅಭಯವನ್ನು ಕೊಟ್ಟು, ಕೊಡಗು ಸೀಮೆ ಸರಹದ್ದು ಸಿದ್ಧೇ ಶ್ವರನಬೆಟ್ಟದ ಆಶ್ರಯದಲ್ಲಿ ಮೀರರಾಜರು ಇದ್ದುಕೊಂಡು, ಮೈಸೂರು ಸೀಮೆ ಸರಹದ್ದು ಬಂದಹಾಗೆ ಬಿಸಲೆಗಟ್ಟದಿಂದ ಜೈನಾಡು ಸರಹದ್ದು ಪರಿಯಂತರ ಸಂಚಾರ ಮಾಡುತ್ತ, ದಿವದಲ್ಲಿ ಮುಸುಮಾನರ ಕಡೆ ಮುಸಲ್ಮಾನರ ಸಂಗಡ ಲಡಾಯಿ ಮಾಡಿ ಅವರನ್ನು ತಮ್ಮ ಸೀಮೆ ಯಿಂದ ಹೊರಡಿಸುತ್ತ, ರಾತ್ರಿಕಾಲದಲ್ಲಿ ಮೈಸೂರು ಸೀಮೆಗೆ ಹೋಗಿ, ಆನಾಜು ವಗೈರೆ ಲೂಟಿಮಾಡಿಕೊಂಡು ಬಂದು, ತಮ್ಮ ಕಡೆ ಮಂದಿಗೆ ಊಟದ ಬಗ್ಗೆ ಕೊಡಿಸುತ್ತ, ಈ ಮೇರೆ ಕಾಲಕ್ಷೇಪ ಮಾಡುತ್ತ ಇರ ಲಾಗಿ, ಆ ಮುಸಲ್ಮಾನರು ಈ ವಿವರವನ್ನು ಟೀಪೂ ಸುಲ್ತಾನರಿಗೆ ಪಿರ್ಯಾದಿ [ಯಾಗಿ ಜಾಹೀರು] × ಮಾಡಿದ್ದರಿಂದ, ಈ ವರ್ತಮಾನ ಟೀಪುಸುಲ್ತಾನರು ಕೇಳಿ, ಕಂದಾಚಾರದ ಭಕ್ಷಿ ಸಮೂರು ಗುಲಾಮಲ್ಲಿಗಾಜಿ [ಖಾದಲೆ ದಿಲ್ ಬಾ] ‖ ಯಿವರ ಸಂಗಡ ಭಾರಿ ಫೌಜು ಕುಮರಿ ಪಾಯಿದಳ ಸಹ ಕೊಡಗಿನ ಕಡೆಗೆ ರವಾನೆ ಮಾಡಿದ್ದರಿಂದ, ಆ ಗುಲಾಮಲ್ಲಿಯು ಸಿದ್ಧೇ ಶ್ವರನ ಗದ್ದಿಗೆ ಮಾರ್ಗವಾಗಿ ಕೊಡಗಿನ ಸೀಮೆ ಒಳನುಗ್ಗುವಲ್ಲಿ, ಕೊಡ ಗರಿಗೂ ಅವರಿಗೂ ಜಗಳವಾಗಿ, ಈ ಕಡೆ ಜನರ ಮದ್ದುಗುಂಡು ತೀರಿ

× ಈ ಮಾತುಗಳು ಅ. ಪ್ರತಿಯಲ್ಲಿ ಇಲ್ಲ.

‖ ಬ ಕಾದಲೇರದಿಲ್‌ಕಾ

ಹೋಗಿ ಜಗಳ ನಿಂತದ್ದರಿಂದ, ಗುಲಾಮಲ್ಲಿಭಕ್ಷಿಯು ಒಳನುಗ್ಗಿ ಬಂದು, ಈ ಸೀಮೆಯಲ್ಲಿ ಇದ್ದ ದವಸ ಧಾನ್ಯ ಯಾವತ್ತೂ ಸೂರೆಮಾಡುತ್ತ, ದನ ಕರು ಯಾವತ್ತೂ ಹಿಡಿದುಕೊಂಡು, ಕೊಡಗು ಜನರ ಕುಟುಂಬ ಮಕ್ಕಳ ಹಿಡಿಯಬೇಕೆಂಬದಾಗಿ ಮಾರ್ಗ ತೋರಿಸುವ ಬಗ್ಗೆ ಈ ಸೀಮೆ ಜೀತಗಾರ ಹೊಲೆಯರ(ನ್ನು) ಹಿಡಿದುಕೊಂಡು, ಅವರ ಕೂಡೆ ದಾರಿ ತೋರಿಸಿಕೊಳ್ಳುತ್ತ, ಮಲೆಪೊತ್ತಿನಲ್ಲಿ, ಇಕ್ಕಟ್ಟಿನ ಸ್ಥಳದಲ್ಲಿ, ಕೊಡಗು ಮುಂದಿಯ ಕುಟುಂಬ ಮಕ್ಕಳು ಇದ್ದದ್ದು ಹಿಡಿಯುವ ಬಗ್ಗೆ ದಂಡನ್ನು ಒಂದೊಂದು ತುಕ್ಕಡಿ ಮಾಡಿ ಒಂದೊಂದು ಕಡೆಗೆ ಕಳುಹಿಸುತ್ತ ಇದ್ದನು. ಅಷ್ಟರಲ್ಲಿ ಇವರಿಗೆ ಕುಮ್ಮಕ್ಕಾಗಿ ಚರಕಲ್ಲು ರಾಜರು ಕೆಲವು ನಾಯಿಮಾರರನ್ನು ತಮ್ಮ ಕಡೆ ಕಾರೆಕಾರರ ಸಂಗಡ ಕೂಡಿಸಿ ಕಳುಹಿಸಿದಲ್ಲಿ, ಅವರು ಬಂದು ಗುಲಾಮಲ್ಲಿ ಸದೂರನ(ನ್ನು) ಕಂಡಲ್ಲಿ, "ನಮ್ಮ ಕಡೆಯಿಂದಲೂ ಕೆಲವು ಫೌಜನ್ನು ಕೊಡುತ್ತೇವೆ. ಅವರೂ ನೀವೂ ಕೂಡಿ ಕಾಡೊಳಗೆ ಸೇರಿಕೊಂಡು ಇರುವಂಥಾ ಕೊಡಗರ ಕುಟುಂಬ ಮಕ್ಕಳ ಹಿಡಿದು ತರಬೇಕೆ" ಂಬುದಾಗಿ ಹೇಳಿ, ಕೆಲವು ಫೌಜನ್ನು ಕೊಟ್ಟಲ್ಲಿ, ಈ ನಾಯಿಮಾರರು ಆ ಫೌಜು ಸಹ ಒಟ್ಟಾಗಿ ಪಾಡಿನಾಲ್ಕುನಾಡ ದೇವಸ್ಥಾನದ ಬಳಿಗೆ ಹೋದಲ್ಲಿ, ಅಲ್ಲಿ ಇದ್ದ ಕೊಡಗರು ಜಗಳ ಮಾಡಿದಲ್ಲಿ, ಆ ನಾಯಿಮಾರರು ಪೆಟ್ಟು ತಡೆಯಲಾರದೆ ಆ ದೇವಸ್ಥಾನಕ್ಕೆ ಬೆಂಕಿ ಹಾಕಿ ಸುಟ್ಟು, ಮಲೆಯಾಳಕ್ಕೆ ಓಡಿಹೋದರು. ಗುಲಾಮಲ್ಲಿ ಕಡೆಯ ಜನರು ಅವನ ಕಡೆಯ ದಂಡಿಗೆ ಕೂಡಿಕೊಂಡು ಕೊಡಗರ ಕುಟುಂಬ ಮಕ್ಕಳ ಹಿಡಿಯುವ ಬಗ್ಗೆ ಪ್ರಾರಂಭಿಸಿದಲ್ಲಿ, ಆ ಕುಟುಂಬ ಮಕ್ಕಳ ಬಳಿಯಿದ್ದ ಕೊಡಗರು ಯಾವತ್ತೂ ಅವರು ಬರುವಂತಾ ಇಕ್ಕಟ್ಟಿನ ಮಾರ್ಗವನ್ನು ಕಟ್ಟಿಕೊಂಡು, ಮದ್ದು ಗುಂಡು ತೀರುವ ಪರಿಯಂತರ [ಗುಂಡಿನಿಂದ] ± ಹೊಡೆದು, ತೀರಿದ ಕೂಡಲೆ ಕತ್ತಿ ತೆಗೆದುಕೊಂಡು ಮೇಲೆ ಬಿದ್ದು ಕಡಿಯುತ್ತ, ದಿನವೊಂದಕ್ಕೆ ಅವರ ಕಡೆ ೫೦—೬೦ ಜನದ ಮೇಲೆ ಜಾಯ [ಜಖಮ] ± ಮಾಡುತ್ತ ಇರಲಾಗಿ, ಈ ಕೊಲೆ ತಡೆಯಲಾರದೆ ಲಾಚಾರಿಯಿಂದ ಗುಲಾಮಲ್ಲಿ ಭಕ್ಷಿ ತನ್ನ ಕಡೆ ದಂಡಿನ ಜನ ಯಾವತ್ತು ಒಟ್ಟು ಮಾಡಿಕೊಂಡು, ಮಲೆಪತ್ತಿನ ಇಕ್ಕಟ್ಟಾದ ಗ್ರಾಮಗಳಿಗೆ ಬಾರದೆ, ನಡುಸೀಮೆಯಲ್ಲು ಮೈದಾನ ಆಗಿ ಇರುವ ಜಾಗದಲ್ಲಿ ಇರುವ ರೈತರ

± ಈ ಮಾತುಗಳು ಅ. ಪ್ರತಿಯಲ್ಲಿ ಇಲ್ಲ

ಮನೆಮಾರು ಲೂಟಿ ಮಾಡಿ, ಬೆಂಕಿ ಹಾಕುತ್ತ ಇದ್ದನು. ಅಷ್ಟರಲ್ಲು ಟೀಪೂಸುಲ್ತಾನರ ಕೈ ಒಳಗೆ ಇದ್ದಂತಾ ಮಲೆಯಾಳರು ಯಾವತ್ತೂ ಈ ಕೊಡಗಿನ ಸಮಾಚಾರ ಕೇಳಿ, ಪುಂಡಾಗಿ. ಕಾಡು ಸೇರಿಕೊಂಡು ಶರಾರತ್ತು ಮಾಡುತ್ತ ಇದ್ದದ್ದರಿಂದ, ಟೀಪೂಸುಲ್ತಾನರು ತಿಳಿದು, ಗುಲಾಮಲ್ಲಿ ಸದೂರರಗೆ ಬರೆಸಿ ಕಳಿಸಿದ್ದು:— "ನೀನು ಕೊಡಗಿನ ಸೀಮೆಯಿಂದ ಹೊರಟು ಮಲೆಯಾಳಕ್ಕೆ ಹೋಗಿ, ಅಲ್ಲಿ ಶರಾರತ್ತು ಮಾಡುವಂಥಾ ಜನಕ್ಕೆ ತಂಬಿ ಪೌಂಚಾಯಿಸಿ ಬಂದೋಬಸ್ತು ಮಾಡು" ಎಂಬುದಾಗಿ ಬರೆಸಿ ಕಳುಹಿಸಿದ್ದರಿಂದ, ಆ ಗುಲಾಮಲ್ಲಿ ಭಕ್ಷಿಯು ತನ್ನ ಪವುಜು ಸಮೇತ ಕೊಡಂತುರದ ಮಾರ್ಗನಾಗಿ ಹೋಗುತ್ತ ಇದ್ದಲ್ಲಿ, ಕೊಡಗರು ಹೋಗಿ ಮಧ್ಯಗಟ್ಟದಲ್ಲಿ ಲಡಾಯಿ ಮಾಡಿದಲ್ಲಿ, ಈ ಜನದ ಮದ್ದು ಗುಂಡು ತೀರಿ ಹೋಗಿ ಜಗಳ ಸ್ತಂಭನ ಆದ್ದರಿಂದ, ಆ ಗುಲಾಮಲ್ಲಿಯು ಅಲ್ಲಿಂದ ಹೋಗಿ, ಪೈಯ್ಯಾ ಊರಿನಲ್ಲು ಇಳಕೊಂಡು, [ಆ] * ದೇವಸ್ಥಾನಕ್ಕೆ ಬೆಂಕಿ ಹಾಕಿ, ಆ ಸೀಮೆ ರೈತರ ಮನೆಮಾರು ಲೂಟಿ ಮಾಡುತ್ತ ಇದ್ದಲ್ಲಿ, ಪೈಚಿಯಲ್ಲು ಇದ್ದ ಪಾಲೇ ಅಂಸುಗಳ ಅಣ್ಣನು— "ತಾನು ಟೀಪೂಸುಲ್ತಾನರ(ನ್ನು) ಕಂಡುಕೊಂಡು ಇದ್ದೇನೆ ತನ್ನ ತಮ್ಮನಾದ ಪಾಲೆ ವೀರವರ್ಮ ಅರಸು ಟೀಪೂಸುಲ್ತಾನರ ಸಂಗಡ ತಿರುಗಿ ಬಿದ್ದು ಕಾಡು ಸೇರಿಕೊಂಡಿದ್ದಾನೆ. ಈಗ ಅವರ ಪವುಜ ಬಂದು ಇದೆ. [ಇದನ್ನು ಕಾಣುವದರಿಂದ] × ಇನ್ನು ಮೇಲೆ ಏನಾದೀತೋ!"— ಎಂಬದಾಗಿ ಭಯಸ್ಥನಾಗಿ, ತನ್ನ ಕುಟುಂಬ ಮಕ್ಕಳನ್ನು ತೆಗೆದುಕೊಂಡು ರಾತಾರಾತ್ರಿಯೇ ಅನಂತಶಯನದ ಕಡೆಗೆ ಓಡಿ ಹೋದರು. ಈ ವಿವರ ಗುಲಾಮಲ್ಲಿ ಸದೂರನು ಟೀಪೂಸುಲ್ತಾನರಿಗೆ ಬರೆದು ಕಳುಹಿಸಿದ್ದರಿಂದ, ಕುಮ್ಮಕ್ಕಿನ ಬಗ್ಗೆ ಮುಹಮ್ಮದ್ ರಜಾ ಭಕ್ಷಿ, ಅಜಂ ಅಲ್ಲೀ ಖಾನ ಭಕ್ಷೀ, ಫಜಲ್‌ಖಾನ್, [ಪಾಸಮೂನ್ನೆ,] || ಜಾನ್ ಕಸ್ತೂರೀ, ಅವನ ಸಂಗಡ ೩ ಜನ ಕಪ್ತಾನರು, ಇವರ ಸಂಗಡ ಭಾರೀ ಪವುಜ ಸಹ ರವಾನೆ ಮಾಡಿದರು.

---

* ಬ. ಪೈಯ್ಯಾವೂರು

× ಈ ಶಬ್ದಗಳು ಬ. ಪ್ರತಿಯಲ್ಲಿ ಇಲ್ಲ

|| ಬ. ಪರಾಸಿಸ್ ಮೂಸಿ

ಆ ಸರದಾರರು, ದಂಡು ಸಮೇತ ಮಲೆಯಾಳಕ್ಕೆ ಹೋಗುವ ಬಗ್ಗೆ ಕೊಡಗು ಸೀಮೆ ಮಾರ್ಗವಾಗಿ ಬಂದು, ಹೆಗ್ಗಳದ ಗಟ್ಟದ ಮೇಲೆ ಇಳುಕೊಂಡಲ್ಲಿ, ಆ ದಿವಸವೇ ವೀರರಾಜರು ಮಂದಿ ತೆಗೆದುಕೊಂಡು ಹೋಗಿ, ಗಟ್ಟಯಿಳಿದು ಹೋಗುವ ಮಾರ್ಗಗ (ನ್ನು) ಕಟ್ಟಿ, [ಮುಸಲ್ಮಾನರ] * ಲಷ್ಕರಿನ ಸಂಗಡ ಲಡಾಯಿ ಮಾಡುವ ಬಗ್ಗೆ ದಾರಿ ನೋಡುತ್ತಾ ಇದ್ದಲ್ಲಿ, ಆ ಮಾರಣೆ ಬೆಳಿಗ್ಗೆ ಪಜಲ್‌ಕಾನನು ತಂದ ದಂಡು ತೆಗೆದುಕೊಂಡು ಅಗಾಡಿಯಾಗಿಕೊಂಡು, ಪಿಚಾಡಿಗೆ ಜಾನ್ ಕಸ್ತೂರಿ ಇಟ್ಟು, ಮಧ್ಯೆ ಗುನಗು ಬಿಟ್ಟುಕೊಂಡು, ಮಲೆಯಾಳದ ಕಡೆ ಹೋಗುತ್ತಾ ಇರುವಲ್ಲಿ, ಲಡಾಯಿವಾಗಿ, ಪೆಟ್ಟು ತಾಳಲಾರದೆ, ಅಗಾಡಿ ಇದ್ದ ಪಜಲ್‌ಕಾನ (ನು) ದಂಡು ಸಹ ಗಟ್ಟಯಿಳಿದು ಓಡಿ ಹೋದನು. ಜಾನ್‌ಕಸ್ತೂರಿಯು ಕೊಡಗು ಜನರ [ಬಳಸಿಗೆ] † ಸಿಕ್ಕಿ, ಜಗಳವಾಗಿ, ಬಹಳ ಜನಕ್ಕೆ ಜಾಯ [ಜಕ್ಮಮ್ಮಿ] § ಯಾದ್ದರಿಂದ, ಲಾಚಾರಾಗಿ, ರಸ್ತು ಗುನಗು ಬಿಟ್ಟು, ಅಗಾಡಿಯಿದ್ದ ಪವುಜಿಗೆ ಕೂಡತಕ್ಕ ಬಗ್ಗೆ ಧೈರ್ಯಗುಂದಿ ಹೋಗುತ್ತಿರುವಲ್ಲಿ, ಕೊಡಗು ಮಂದಿಯು ಕಾದು ನಿಂತು ಇದ್ದ ಬಳಿಯಿಂದ ಅವನ ದಂಡಿನ ಮೇಲೆ ಬಿದ್ದು, ಎಂಟುನೂರು ಜನದ ತಲೆ ಹೊಡೆದರು. ನಾನೂರು ಜನಕ್ಕೆ ಗಾಯವಾಯಿತು. ಜಾನ್ ಕಸ್ತೂರಿ, ಅವನ ಸಂಗಡ ಇದ್ದ [ಸರಸ] = ಸರದಾರರನ್ನು ತಲೆ ಹೊಡೆದರು. ಅಷ್ಟರಲ್ಲಿ ಕೊಡಗು ಜನರು ಸಾಮಾನು ಸರಂಜಾಮು ಸೂರೆಮಾಡುವುದಕ್ಕೆ ಪ್ರಾರಂಭಿಸಿದಲ್ಲಿ, ಕೆಲವು ಜಕಂ ಆದಂತ ಜನ ಮುಂತಾಗಿ ಕಾಡುಬಿದ್ದು ಓಡಿಹೋಗಿ, ಪಜಲ್‌ಕಾನನ ದಂಡಿಗೆ ಕೂಡಿದರು. ಆ ಬಳಿಕ ದಂಡಿನಲ್ಲಿ ಸಿಕ್ಕಿದಂತಾ ಸಾಮಾನು ಸರಂಜಾಮು ಯಾವತ್ತು ದಂಡಿನಲ್ಲಿ ಕೈಸೆರೆ ಸಿಕ್ಕಿದಂತಾ ಜನರ ಕೂಡೆ ಹೊರಿಸಿಕೊಂಡು ಹೆಗ್ಗಳಕ್ಕೆ ತಂದು ಮಡಗಿ, ಆ ಬಳಿಕ ಆ ಜನರನ್ನು ಸೆರೆಯಿಂದ ಬಿಟ್ಟು, ಬಾಳೆಲೆ ಮಾರ್ಗವಾಗಿ ಕಳುಹಿಸಿ, ಆ ಮಾರಣೇ ದಿನ ಸಿಕ್ಕಿದಂತದರಲ್ಲಿ ಕತ್ತಿ, ಕೋವಿ, ಮದ್ದು, ಗುಂಡು, ಅರಮನೆಗೆ ಸೇರ

* ಬ ದುಷ್ಮಾನನ

† ಬ ಬಳವಿಗೆ

§ ಬ ಜಖಮು

= ಬ ಸರಾಸೀಸ

ತಕ್ಕಂತದಾದ್ದರಿಂದ ಅದನ್ನು ತೆಗೆದುಕೊಂಡು, ಉಳಿಕೆ ಸರಂಜಾಮು ಕೊಡಗರಿಗೆಲ್ಲಾ ಹಂಚಿಕೊಡಿಸಿದರು.

ಆ ಬಾಳಿಲೆ ಮಾರ್ಗವಾಗಿ ಹೋದ ಜನ [ಅ] × ಲಕ್ಕಾಡಿ ಕೋಟೆಗೆ ಹೋಗಿ, [ಯಾವತ್ತೂ] || ಅಲ್ಲಿ ರಾಣ್ಯಾಯಿದ್ದ ಸರದಾರ [ತಡಮಾರಿ] ± ಮಲ್ಲಪ್ಪನಾಯಕ ಎಂಬವನಿಗೆ [ಹಿಡಿ) † ದಲ್ಲಿ, ಆ ರಾಣ್ಯದವನು ಈ ವರ್ತಮಾನ ಕೇಳಿ ಹೆದರಿ, ಮದ್ದು ಗುಂಡು ಮುಂತಾದ ಸಾಮಾನು ಅಲ್ಲೇ ಬಿಟ್ಟು, ರಾತಾರಾತ್ರಿಯೇ ತನ್ನ ಮಂದಿಯನ್ನು ತೆಗೆದುಕೊಂಡು ಸಿರಿಯಾಪಟ್ಟಣಕ್ಕೆ ಓಡಿಹೋದನು.

ಆ ಬಳಿಕ ಈ ಸಮಾಚಾರವನ್ನು ಟೀಪೂಸುಲ್ತಾನರು ಕೇಳಿ, ಮಹಾ ಕೋಪದಿಂದ ತಮ್ಮ ಭಾವಮೈದನಾದ ಬುರಾನ ದಿನರ್ ಎಂಬವನಿಗೆ ಮಡಿಕೇರಿ ಕೋಟೆ, ಕುಸಲ್‌ನಗರದ ಕೋಟೆ, ಬೆಪ್ಪುನಾಡು ಲಕ್ಕಡಿಕೋಟೆ, ಭಾಗಮಂಡಲದ ಲಕ್ಕಡಿಕೋಟೆ ಸಹ ಈ ನಾಲ್ಕು ಕೋಟೆ (ಗೆ) ರಸ್ತು ತಲಪಿಸುವ ಬಗ್ಗೆ ಭಾರೀ ಪವುಜು ಕೊಟ್ಟು ಕಳುಹಿಸಿದಲ್ಲಿ, ಆ ಬುರಾನ ದೀನರು ಪವುಜು ಸಮೇತ ಕುಸಲ್‌ನಗರ ಎಂಬುವ ಮುಳುಸೋಗೆ ಹತ್ತಿರ ಇಳಿದುಕೊಂಡು, ಆ ಕೋಟೆಗೆ ಬೇಕಾದ ರಸ್ತು ತುಂಬಿ, ಉಳಿಕೆ ಮೂರು ಕೋಟೆಗೆ ಇದ್ದ ರಸ್ತು ತೆಗೆದುಕೊಂಡು ದಂಡು ಸಮೇತ ಮಡಿಕೇರಿಗೆ ಬರುತ್ತಾ ಇದ್ದಲ್ಲಿ, ಮಧ್ಯೆ ಮಾರ್ಗಕ್ಕೆ ಮಹಾರಾಜರು ತಮ್ಮ ಮಂದಿ ತೆಗೆದುಕೊಂಡು ಹೋಗಿ ಲಡಾಯಮಾಡಿದಲ್ಲಿ, [ಅವರ] * ದಂಡಿಗೆ ಬಹಳ ಪೆಟ್ಟಾಗಿ, ಮೂರು ಕೋಟೆಗೆ ಇದ್ದ ರಸ್ತಿನಲ್ಲಿ ಅರೆವಾಸಿ ಅಲ್ಲಿ ಬಿಟ್ಟು, ಅರೆವಾಸಿ ಸಾಗಿಸಿಕೊಂಡು ಹೋಗಿ ಮಡಿಕೇರಿ ಕೋಟೆಗೆ ಹಾಕಿದರು. ಉಳಿಕೆ ಎರಡು ಲಕ್ಕಡಿ ಕೋಟೆಗೆ ಇದ್ದ ರಸ್ತು ಕೊಡಗರಿಗೆ ಸಿಕ್ಕದ್ದರಿಂದ, ಬುರಾನ್ ದಿನರು ದಂಡು ಸಮೇತ ಪುನಃ ಪಟ್ಟಣಕ್ಕೆ ಹೋಗಿ, ಕೊಡಗಿನಲ್ಲಿ ಆದ ವೃತ್ತಾಂತ ಟೀಪೂ ಸುಲ್ತಾನರಿಗೆ ಹೇಳಿದಲ್ಲಿ, ಅವರು ಬುರಾನ್‌ದೀನರ

× ಬ ಬಾಳಿಲೆ

|| ಬ ಈ ವಿವರ ಯಾವತ್ತು

± ಬ ತಾಡಮಾರಿ

† ಬ ಹೇಳಿ

* ಬ ಆ ಬುರಾನ್ ದೀನರ

ಸಂಗಡ ಹುಕ್ಕುಂ ಕೊಟ್ಟದ್ದು-- "ಈಗ ಕೋಟೆ ಅರಸುಗಳು ರಾಮ ರಾಜರ ಸೀಮೆ ಕಡೆಗೆ ಓಡಿಹೋಗಿ ಇದ್ದಾರೆ. ಮಲೆಯಾಳ ಸೀಮೆ ಯಾವತ್ತು ಪುಂಡಾಗಿ ಇದೆ. ಅದನ್ನು ನಿಲ್ಲಿಸಿ ಬಂದೋಬಸ್ತು ಮಾಡ ತಕ್ಕ ಬಗ್ಗೆ ನಾವು ಅರೆವಾಸಿ ಪವುಜು ತೆಗೆದುಕೊಂಡು ಗಜ್ಜಲ(ಹ)ಟ್ಟಿ ಮಾರ್ಗವಾಗಿ ಬೇಂಗಾಟು ಅಂಗಡಿಗೆ ಬರುತ್ತ ಇದ್ದೇವೆ. ಅರೆವಾಸಿ ಪವುಜನ್ನು ನಿಮ್ಮ ತಾಬೆಗೆ ಕೊಡುತ್ತೇವೆ. ಆ ದಂಡು ಮೂರು ತುಕ್ಕಡಿ ಮಾಡಿ, ಮೂರು ಮಾರ್ಗದಿಂದ ಕೊಡಗಿನ ಸೀಮೆ ಒಳಗೆ ನುಗ್ಗಿ ಕೊಡಗರಿಗೆ ಯಾವತ್ತು ಹೊಡೆದು, ಆ ನಾಲ್ಕು ಕೋಟೆಗೆ ಮಳೆಗಾಲ [ನಾಲ್ಕು] ± ತಿಂಗಳಿಗೆ ಬೇಕಾದ ರಸ್ತು ಹಾಕಿ, ಹೆಗ್ಗಳದ ಗಟ್ಟದ ಮಾರ್ಗವಾಗಿ ನಾವು ಇರುವಲ್ಲಿಗೆ ಬಾ"-- ಎಂದು ಹುಕ್ಕುಂ ಕೊಟ್ಟು, ಟೀಪೂಸುಲ್ತಾನರು [ಅರೆವಾಸಿ] § ಪವುಜನ್ನು ಸೈದ್ ಹಮೂದ ಸಿಪಾದಾರ, ಶೇಕು ಅನ್ಸರ್ ಶಿಪಾದಾರ(ರ) ರಸ್ತು ಸಾಮಾನು ಸರಂಜಾಮು ಮುಂತಾಗಿ ಬುರಾನ್‌ದಿನ್ ಶಿಪಾ[ದಾರನ] * ತಾಬೆ ಮಾಡಿ, ಬಾಕಿ ಅರೆವಾಸಿ ಪವುಜನ್ನು ತಮ್ಮ ಸಂಗಡ [ಕಲಿ] = ಸಂದ ೪೮೯೧ನೇ ಸೌಮ್ಯ ಸಂವತ್ಸರ [ದಲ್ಲಿ] × ಪಟ್ಟಣದಿಂದ ಹೊರಟು, ಗಜ್ಜಲ (ಹ) ಟ್ಟಿ ಗಟ್ಟಯಿಳಿದು ಕೋಟೆ ಅರಸುಗಳ ಸೀಮೆ ಮಾರ್ಗವಾಗಿ ಬೇಂಗಾಟ್ಟು ಅಂಗಡಿಯಲ್ಲು ಇಳಿದುಕೊಂಡು, "ಮಲೆಯಾಳದ ರಾಜರು ತುಂಟರು ಇದ್ದಾರೆ. ಇವರನ್ನೆಲ್ಲಾ ಓಡಿಯಬೇಕೆ"ಂಬುದಾಗಿ ವಿಚಾರಿಸಿದಲ್ಲಿ, ಈ ಸೂಕ್ಷ್ಮವನ್ನು ಚರಕಲ್ಲಿ ರಾಜರು ತಿಳಿದು, "ಕೋಟೆ ಅರಸುಗಳು ದಗಾ ಮಾಡಿ ಓಡಿಹೋದ್ದರಿಂದ ಟೀಪೂಸುಲ್ತಾನರಿಗೆ ಮಲೆಯಾಳದ ರಾಜರ ನಂಬಿಗೆಯಿಲ್ಲದೆ ಹೋಯಿತು. ಆದ್ದರಿಂದ ನಮ್ಮ ಅರ್ಥ ಪ್ರಾಣ ಯಾವ ಮೇರೆ ಉಳಿದೀತೆ"ಂಬುದಾಗಿ ಗ್ರಹಿಸಿ, ತಮ್ಮ ಕುಟುಂಬ ಮಕ್ಕಳನ್ನು ನಂಬಿಗಸ್ತರ ಸಂಗಡ ಕೂಡಿಸಿ, ರಾತಾರಾತ್ರಿಯೆ ತಲಚೇರಿಗೆ ಸಾಗಿಸಿ, "ಈ ವರ್ತಮಾನ ರಾತ್ರಿಯೇ ಬಂದು ಹೇಳಿದರೆ ನಾವು ಈ ರಾತ್ರಿ ಮೂರು ಜಾವದಲ್ಲಿ ಹೊರಟು ತಲಚೇರಿಗೆ ಬರುತ್ತೇವೆ." ಎಂಬದಾಗಿ

± ಬ ಆರು

§ ಬ ಅದೇ ಮೇರೆ ಅರೆವಾಸಿ

* ಬ ಸಾಲಾರರ

= ಬ ತೆಗೆದುಕೊಂಡು, ಕಲಿ

× ಬ ದ ವೈಶಾಖಮಾಸದಲ್ಲಿ

ತಾಕೀತಿ ಮಾಡಿ ಕಳುಹಿಸಿದಲ್ಲಿ, ಆ ಜನರು ಕುಟುಂಬ ಮಕ್ಕಳ(ನ್ನು) ತಲಚೇರಿ ಸರಹದ್ದಿಗೆ ದಾಟಿಸಿ ಆ ರಾತ್ರಿಯೇ ಪುನಃ ಬಂದು ಈ ವರ್ತಮಾನ ಹೇಳುವದಕ್ಕೆ ಹೊತ್ತಾದ್ದರಿಂದ, ಕೆಲವು ಮಾಪಿಳ್ಳೆಯರು ಈ ವರ್ತಮಾನ ತಿಳಿದುಕೊಂಡು ಟೀಪೂಸುಲ್ತಾನರ ಬಳಿಗೆ ಬಂದುಃ— "ಚರಕಲ್ಲ ರಾಜರು ಕುಟುಂಬ ಮಕ್ಕಳ(ನ್ನು) ತಲಚೇರಿಗೆ ಸಾಗಿಸಿದ್ದಾರೆ. ಈಗ ಅವರು ಕೂಡ ಅಲ್ಲಿಗೆ ಓಡಿಹೋಗುವವರಾಗಿದ್ದಾರೆ"— ಎಂಬದಾಗಿ ಹೇಳಿದ್ದರಿಂದ ಈ ವಿವರ ಕೇಳಿ ಟೀಪೂ ಸುಲ್ತಾನರು ತಮ್ಮ ಕಡೆ [ಅಹಾಷಾಂ] † ಪ್ಯಾದೆಯರಿಗೆ ತಯಾರುಮಾಡಿ ಆ ಚರಕಲ್ಲ ರಾಜರ(ನ್ನು) ಹಿಡಿಯುವ ಬಗ್ಗೆ ಕಳುಹಿಸಿದಲ್ಲಿ, ಅವರು ಅದೇ ಮೇರೆ ರಾಜರು ಇದ್ದ ಪೈಚಿ ಜಾಗ ಬಳಸುವದರೊಳಗೆ ಈ ವಿವರವನ್ನು ಅಲ್ಲಿ ಇದ್ದ ನಾಯಮಾರರು ಚರಕಲ್ಲ ರಾಜರಿಗೆ ಹೇಳಿದ್ದರಿಂದ, ಅವರು ಹೆದರಿ ಆ ಕ್ಷಣ ಗಿಡ ಬಿದ್ದು ಓಡುತ್ತ ಇದ್ದಲ್ಲಿ, ಆ ಓಲೇಕಾರ ಜನಗಳು ಕಂಡು ಬೆನ್ನತ್ತಿ ಹೋಗಿ ಹಿಡಿಯುವಷ್ಟರಲ್ಲಿ, ಅವರು— "ಇವರ ಕೈಗೆ ಸಿಕ್ಕಿದರೆ ತಮಗೆ ಸುಖ ಬಾರದು"— ಎಂದು ತಿಳಿದು, ತಮ್ಮ ಪ್ರಾಣ ತಮ್ಮ ಕಯ್ಯಿಂದ ಕಳೆದುಕೊಂಡರು. ಆ ಬಳಿಕ ಆ ವಾಲೇಕಾರರು ಆ ರಾಜರ ಶವವನ್ನು ಟೀಪೂ ಸುಲ್ತಾನರ ಬಳಿಗೆ ತೆಗೆದುಕೊಂಡು ಹೋದಲ್ಲಿ, ಟೀಪೂಸುಲ್ತಾನರು ಆ ಶವದ ಕಾಲಿಗೆ ಹಗ್ಗ ಹಾಕಿ ದಂಡಿನ ಸುತ್ತ ಎಳೆಸಿ, ಆ ಬಳಿಕ ಒಂದು ಮರಕ್ಕೆ ತೂಗಿಸಿ ಬಿಟ್ಟರು. ಆದರಿಂದ ಆ ಮಲೆಯಾಳದ ಕೆಲವು ಅರಸುಗಳು, ನಾಯರರು, ನಂಬಿಯಾರರು ಮುಂತಾಗಿ ಬೆದರಿ, ಅನಂತಶಯನದ [ರಾಜ್ಯಕ್ಕೆ] § ಓಡಿ ಹೋದರು.

ಈ ಸಮಾಚಾರವನ್ನು ಟೀಪೂ ಸುಲ್ತಾನರು ಕೇಳಿ— "ಈ ಮೇರೆ ನಮ್ಮ ಸರಕಾರಕ್ಕೆ ಸೇರಿದ ಮಲೆಯಾಳದ ಜನರು ಮುಂತಾಗಿ ನಿಮ್ಮ ಸೀಮೆ ಕಡೆಗೆ ಓಡಿ ಬಂದು ಇದ್ದಾರೆ. ಆ ಜನರ ಯಾವತ್ತೂ ಹಿಡಿದು ಕಳುಹಿಸಿ ಕೊಡಬೇಕು. ಇಲ್ಲದಿದ್ದರೆ ನಿಮ್ಮ ಸೀಮೆ ಯಾವತ್ತೂ ಲೂಟಾಯಿಸಿ ಆಕ್ರಮಿಸಿಕೊಳ್ಳುತ್ತೇವೆ"— ಎಂಬದಾಗಿ ತಮ್ಮ ಕಡೆ ಹರಿಕಾರ ಮುಂತಾದವರ ಸಂಗಡ ಹೇಳಿ ಕಳುಹಿಸಿದಲ್ಲಿ, ಈ ಮಾತಿಗೆ

---

† ಬ. ಅಹಶಾಂ

§ ಬ. ರಾಮರಾಜರ ಸೀಮೆಗೆ

ರಾಮರಾಜರು ಒಡಂಬಡದೆ, ಆ ಜನರನ್ನು ಬಿಟ್ಟು ಕೊಡದೆ, ಹರಿಕಾರ ಮುಂತಾದವರನ್ನು ಹಿಂತಿರುಗಿಸಿ ಬಿಟ್ಟಿದ್ದರಿಂದ, ಆ ಜನ ಬಂದು ಈ ಮಾತು ಟೀಪೂ ಸುಲ್ತಾನರಿಗೆ ಹೇಳಿದಲ್ಲಿ, ಅವರು, ಮಳೆಗಾಲ ಆರು ತಿಂಗಳು ಕಳೆದ ಬಳಿಕ ಅನಂತಶಯನದ ರಾಮರಾಜರ ಸೀಮೆಯನ್ನು ಹೊಡಿತ ಹೊಡೆದು ತೆಗೆದುಕೊಳ್ಳಬೇಕೆಂಬದಾಗಿ ಕೊಯಮುತ್ತೂರಿಗೆ ಹೋಗಿ [ಇಳಿದುಕೊಂಡು], * ಜಗಳಕ್ಕೆ ಬೇಕಾದ ಸನ್ನಾಹ ಮಾಡುತ್ತಾ ಇದ್ದರು.

ಇತ್ತಲಾಗಿ ಟೀಪೂ ಸುಲ್ತಾನರು ಮಾಡುವಂತ ಅನಾಹುತ ಯಾವತ್ತನ್ನು ಆ ರಾಮರಾಜರು ಇಂಗ್ರೇಜಿ ಬಹದ್ದರ ಕುಂಪಣಿ ದೊಡ್ಡಸ್ಥಾನವಾಗಿ ಇರುವ ಬಂಗಾಳದ [ಜರ್ನಲ್] = ಮಹಾರಾಜ ಶ್ರೀಲಾರ್ಡು [ಕರ್ನಲ್‌ವಾಲಿಸ್] ± ಸಾಹೇಬಹದ್ದರವರಿಗೂ ಮದರಾಸಿನ ಜನರಲ್ [ಮೇಂಡರಸ್] § ಸಾಹೇಬರವರಿಗೂ ಬೊಂಬಾಯಿ ಗವರ್ನರ್ ಜನರಲ್ ರಾಬರ್ಟ್ಸು [ಸಾಹೇಬ] † ಹದ್ದರವರಿಗೂ ಸಹ ಬರಸಿ ಕಳುಹಿಸಿದಲ್ಲಿ, ಈ ಮೂವರು ದೊಡ್ಡ ಸರದಾರರು — “ನೀವು ಅಂಜಬೇಡ” — ಎಂಬದಾಗಿ ರಾಮರಾಜರಿಗೆ ಜವಾಬು ಬರೆಸಿ ಕಳುಹಿಸಿ, ಅವರು ಲಡಾಯಿಕ್ಕೆ ಸನ್ನಾಹರಾಗುತ್ತ ಇದ್ದರು. ಹೀಗೆ ಇರುತ್ತ ಇದ್ದಲ್ಲಿ, ಕೊಡಗಿನ ಒಳಗೆ ಇರುವ ನಾಲ್ಕು ಕೋಟೆಗೆ ರಸ್ತು ಹಾಕುವ ಬಗ್ಗೆ ಬೇಕಾದ ಸಾಮಾನು ಜಮಾಯಿಸುತ್ತ ಇದ್ದಂತಾ ಸಮಾಚಾರ ಕೊಡಗಿನ ರಾಜರು ಕೇಳಿ, ಅವರು ರಸ್ತು ತೆಗೆದುಕೊಂಡು ಬರುವದಕ್ಕೆ ಮುಂಚಿತವಾಗಿ ಕೊಡಗಿನ ಒಳಗೆ ನಾಲ್ಕು ಕೋಟೆಯನ್ನು ಮಳೆಗಾಲದ ಒಳಗೆ ಸಾಧಿಸಬೇಕು ಎಂಬದಾಗಿ, ಜ್ಯೇಷ್ಠ ಶುದ್ಧ ೧೦ ದಿವಸ ೧೭೯೦ ಕೊಡಗು ಜನರನ್ನು ತೆಗೆದುಕೊಂಡು ಹೋಗಿ, ನಂಜರಾಯಪಟ್ಟಣದ ದೇವಸ್ಥಾನದಲ್ಲು ಇಳಿದುಕೊಂಡು, ನಾಲ್ಕು ದಿವಸ ಅಲ್ಲಿ ಇದ್ದು, — ಟೀಪೂಸುಲ್ತಾನರು ಕುಸಲ್‌ನಗರ ಎಂಬ ಕೋಟೆ ಹೊಸದಾಗಿ ಕಟ್ಟಿಸುತ್ತಾರಷ್ಟೆ!

---

* ಬ ಛಾವಣಿಮಾಡಿ

= ಬ ಜನರಾಲ್

± ಬ ಕಾರ್ನವಾಲಿಸ್

§ ಬ ಮೆಂಡೂಸ್

† ಬ ಆಬರ್‌ಕಂಬಿ ಸಾಹೇಬ

ಆ ಕೋಟೆ ಸಮೂನೆ ಯಾವ ಮೇರೆಯಿದೆ? ಆ ನೆಲ ಯಾವ ಮೇರೆಯಿದೆ? ಅದರ ಒಳಗೆ ಮಂದಿ ಎಷ್ಟುಯಿದೆ? ಜಗಳ ಮಾಡುವಾಗ್ಗೆ ನಮ್ಮ ಮಂದಿ ನಿಲ್ಲುವ ಬಗ್ಗೆ ಒರವಾಗಿ ಆ ಕೋಟೆ ಒಳಗೆ ಇರುವ ಮಂದಿಗೆ ಊನವಾಗಿ ನಮಗೆ ಆಸ್ಪದ ಇರುವ ನೆಲ ಯಾವದು? ಎಂಬದಾಗಿ ನೋಡತಕ್ಕ ಬಗ್ಗೂ, ನಾವು ಆ ಕೋಟೆ ಸಮೀಪಕ್ಕೆ ಹೋದರೆ ಅದರ ಒಳಗೆ ಇರುವಂತಾ ಜನ ಕಂಡು ಜಗಳಕ್ಕೆ ಹೊರಟು ಬರುತ್ತಾರೋ? ಭಯಪಟ್ಟು ಕೋಟೆ ಒಳಗೆ ಕೂಡಿಕೊಂಡು ಗುಂಡು ಹಾರಿಸುತ್ತಾರೋ? ಎಂಬ ಅವರ ಧೈರ್ಯ, ಅಧೈರ್ಯ ನೋಡುವ ಬಗ್ಗೆಯೂ, ವೀರರಾಜರು ತಮ್ಮ ಮಂದಿ ಸಮೇತ ಆ ದಿವಸ ಮೂರನೇ ಜಾವದಲ್ಲಿ ಹೊರಟು, ಮಡಿಕೇರಿಯಿಂದ ಬರುವ ರಹದಾರಿಗಾಗಿ ಸಾಯಂಕಾಲಕ್ಕೆ ಐದು ಗಳಿಗೆ ಇದ್ದಂತೆ ಕುಶಾಲ್‌ನಗರದ ಕೋಟೆ ಸಮೀಪಕ್ಕೆ ಹೋದಲ್ಲಿ, ಆಗಾಡಿ ಇದ್ದ ಸ್ವಲ್ಪ ಜನವನ್ನು ಆ ಕೋಟೆ ಒಳಗೆ ಇದ್ದವರು, ಸ್ವಲ್ಪ ಮಂದಿ ಇದೆ ಎಂತ ತಿಳಿದು, ಆ ಕೋಟೆಯಿಂದ ಇನ್ನೂರು ಜನ ಪರಿಯಂತರ ವಾಲೇಕಾರರು ಕೊಡಗು ಜನರ ಮೇಲೆ ಗುಂಡು ಹಾಕಿ ಬೆನ್ನು ಹತ್ತಿದಲ್ಲಿ, ಈ ಆಗಾಡಿ ಇದ್ದ ಜನ ಜಗ್ಗಿ ಹಿಂತಿರುಗಿ ಓಡಿಬರುತ್ತ ಇದ್ದಲ್ಲಿ, ರಾಜರು ಆ ಓಡಿಬರುವ ಹೇಡಿ ಜನರ ಮೋರೆ ಮೇಲೆ ಕಡಿದು, ತಮ್ಮ ಹತ್ತಿರ ಇದ್ದ ಜನರನ್ನು ಅವರ ಇದಿರಾಗಿ ಕಳುಹಿಸಿದಲ್ಲಿ, ಇವರ ಮೇಲೆ ಆ ಜನರು ಗುಂಡು ಇಟ್ಟರು. ಅದನ್ನು ಗುಮಾನಕ್ಕೆ ಹಾಕದೆ ಮೇಲೆ ಬಿದ್ದು ಜಗಳ ಮಾಡಿದಲ್ಲಿ, ಆ ಜನರು ಪೆಟ್ಟು ತಾಳಲಾರದೆ ಓಡಿ ಹೋಗಿ ಕೋಟೆ ಒಳಗೆ ನುಗ್ಗಿದಲ್ಲಿ, ಆ ಜನರ(ನ್ನು) ಓಡಿಸಿಕೊಂಡು ಹೋಗಿ ಕೊಡಗು ಜನವೂ ಕೋಟೆ ಒಳಗೆ ನುಗ್ಗಿದಲ್ಲಿ, ಆ ಕೋಟೆ ಒಳಗೆ ಇದ್ದ ಏಳುನೂರು ಜನ ವಾಲೇಕಾರರು ಪೆಟ್ಟು ತಾಳಲಾರದೆ ಕೋಟೆಬಿಟ್ಟು ಕಾವೇರೀಹೊಳೆ ಬಿದ್ದು, ಬೆಟ್ಟದಪುರದ ಮಾರ್ಗ ಹಿಡಿದು ಓಡುತ್ತಿದ್ದಲ್ಲಿ, ಕೊಡಗು ಜನರು ಬೆನ್ನಟ್ಟಿ, ಕಾವೇರಿ ಹೊಳೆ ಒಳಗೆ ೩೦೦ ಜನ ಪರಿಯಂತರ ಕಡಿದು, ಅಲ್ಲಿಂದ ಬೆನ್ನಟ್ಟಿ ಬೆಟ್ಟದಪುರದ ಸಮೀಪದ [ಬೆಳಗುಲಿ] || ಪರಿಯಂತರ ಇನ್ನೂರು ಜನ, ದನಕರ ಕಡಿದು ಹಾಕಿ, ಆ ಕುಶಾಲ್ ನಗರದ ಕಿಲ್ಲೇದಾರನ ತಲೆಯನ್ನು ಕುಲ್ಲಟ್ಟಿ ಪೊನ್ನಣ್ಣನು ಕಡಿದು ತಂದು, ಮಹಾರಾಜರ ಮುಂದೆ ನಿವಾಳಿಸಿ ಹಾಕಿ ಬಿಟ್ಟನು. ದೊರೆಗಳು ಆ

|| ಬ ಬೆಳಗುರಿ

ದಿವಸ ಆ ಕೋಟೆ ಒಳಗೆ ಇದ್ದು, ಮೂರನೇ ದಿವಸ ಬೆಳಿಗ್ಗೆ ಕೋಟೆ ಒಳಗೆ ಸಿಕ್ಕಿದಂತ ಸಾಮಾನದಲ್ಲಿ, ಅರಮನೆಗೆ ಸಲ್ಲುವಂಥಾ ಮದ್ದು, ಗುಂಡು, ಕೋವಿ ಮುಂತಾಗಿ ನಾಲ್ಕುನಾಡು ಅರಮನೆಗೆ ಸಾಗಿಸಿ, ಉಳಿಕೆ ಬಟ್ಟೆ ಬರೆ, ದವಸಧಾನ್ಯ. ಪಂಚಲೋಹ, ದನ ಕರು ಮುಂತಾಗಿ ತಮ್ಮ ಮಂದಿಗೆ ಹಂಚಿಕೊಟ್ಟು, ಆ ಲಕ್ಕಾಡಿ ಕೋಟೆಗೆ ಬೆಂಕಿ ಹಾಕಿ ಸುಟ್ಟುಬಿಟ್ಟು, ನಾಲ್ಕು ನಾಡು ಅರಮನೆಗೆ ಬಂದು ಇರುತ್ತ ಇದ್ದರು. ಆ ಮೂರನೆ ಶ್ರಾವಣ ತಿಂಗಳಲ್ಲಿ ರಾಜರು ತಮ್ಮ ಮಂದಿ ತೆಗೆದುಕೊಂಡು ಬಂದು, ಬೆಪ್ಪುನಾಡು ಲಕ್ಕಡಿ ಕೋಟೆಗೆ ಮುತ್ತಿಗೆಹಾಕಿದಲ್ಲಿ, ಆ ಲಕ್ಕಡಿಕೋಟೆ ಒಳಗೆ ಇದ್ದ ರಾಯದುರ್ಗದ ವಾಲೇಕಾರರು ನಿಸ್ತರಿಸಲಾರದೆ ಸಲ್ಲಾಕ್ಕೆ ಇಳಿದು ಬಂದದ್ದರಿಂದ, ಮಹಾರಾಜರು ಆ ಕಿಲ್ಲೇದಾರನಿಗೂ ಆ ವಾಲೇಕಾರ ಜನರಿಗೂ ಅವರ ಸಾಮಾನು ಸಮೇತ ಕೊಡಗಿನ ಸೀಮೆಯಿಂದ ದಾಟಿಸಿ ಬಿಟ್ಟು, ಆ ಕೋಟೆಯನ್ನು ಸಾಧಿಸಿಕೊಂಡು, ಅದರಲ್ಲು ಇದ್ದ ಮದ್ದು ಗುಂಡು, ಪಿರಂಗಿ, ಕೋವಿ ಮುಂತಾದ್ದು ನಾಲ್ಕುನಾಡು ಅರಮನೆಗೆ ಸಾಗಿಸಿ, ದವಸ ಧಾನ್ಯ, ದನ ಕರ ಕೊಡಗು ಮಂದಿಗೆ ಹಂಚಿಕೊಟ್ಟು ಆ ಲಕ್ಕಡಿ ಕೋಟೆಗೆ ಬೆಂಕಿ ಹಾಕಿ ಸುಟ್ಟು ಬಿಟ್ಟಲ್ಲಿ, ಆ ಸಮಾಚಾರ ಈ ಕೋಟೆಯಲ್ಲಿ ಇದ್ದ ಕಿಲ್ಲೇದಾರನು ಪಟ್ಟಣಕ್ಕೆ ಹೋಗಿ ಬುರಾನದೀನರ ಸಂಗಡ ಹೇಳಿದಲ್ಲಿ, ಅವರು ತಮ್ಮ ಸಂಗಡ ಸೈದ್ ಹಮೀದ್ [ಶಿಪಾಯಿದಾರನ] × ಸಹ ಕೂಡಿಸಿಕೊಂಡು, ಭಾರೀ ಪವುಜು ಸಮೇತ ಎರಡು ಕೋಟೆಗೆ ಇರುವ ರಸ್ತೆ ತೆಗೆದುಕೊಂಡು ಹೊರಟುಬಂದು, ಸೈದ್ ಹಮೀದ್ ಶಿಪಾಯಿದಾರನನ್ನು ಪವುಜು ಸಮೇತ ಅರಕಲಗೋಡು ಮಾರ್ಗವಾಗಿ ಎಡವನಾಡಿಗೆ ಕಳುಹಿಸಿ, ಶೇಕ್ ಅನಸರ್ ಶಿಪಾಯಿದಾರನನ್ನು ಪವುಜು ಸಮೇತ ಬಾಳಲೆ ಮಾರ್ಗವಾಗಿ ಕೊಡಗಿನ ಸೀಮೆ ಒಳಗೆ ರವಾನೆಮಾಡಿ, ತಮ್ಮ ದೊಡ್ಡ ಪವುಜನ್ನು ತೆಗೆದುಕೊಂಡು, ರಸ್ತೆ ಸಾಮಾನು ಸಾಗಿಸಿಕೊಂಡು, ಸಿದ್ಧೇಶ್ವರನ ಬೆಟ್ಟದ ಮಾರ್ಗವಾಗಿ ಬಂದು, ಅಮ್ಮತ್ತಿಗ್ರಾಮದಲ್ಲಿ ಇಳುಕೊಂಡರು. ಶೇಕಅನ್‌ಸರನು ಕಾಂಬಾಡಿಯಲ್ಲು ಇಳಕೊಂಡನು. ಸೈದ್ ಹಮೀದನು ಎಡವನಾಡಲ್ಲಿ ಇಳಕೊಂಡನು. ಈ ಸಮಾಚಾರ ವೀರರಾಜರು ಕೇಳಿ, ಆ ಸೈದು ಹಮೀದನ ಸಂಗಡ ಜಗಳ

×' ಬ. ಶಿಪಾದಾರ, ಹಜರತ್ ಖಾನ್ ಗೋರಿ ಶಿಪಾದಾರ, ಅಕಬರ್ ಮನವಲಿ ಶಿಪಾದಾರ, ಹಾಪಿಜ ಮುರ್ತುಜ ಶಿಪಾದಾರನ

ಮಾಡತಕ್ಕ ಬಗ್ಗೆ ತಕ್ಕಷ್ಟು ಜನ ಎಡವನಾಡು ಕಡೆಗೆ ಕಳುಹಿಸಿ, ಬುರಾನ್‌ದೀನ್‌ರ ಸಂಗಡ ಲಡಾಯ ಮಾಡತಕ್ಕ ಬಗ್ಗೆ ವೀರರಾಜರು ಮುಂದಿ ತೆಗೆದುಕೊಂಡು ಹೋಗುತ್ತಿದ್ದಲ್ಲಿ, ಕಾಂಬಾಡಿಯಲ್ಲಿ ಇಳಿದು ಇದ್ದ ಶೇಕ ಅನ್‌ಸರನ [ಪೌಜಿನ] § ಸಂಗಡ ಜಗಳ ಮಾಡಿ, ಅವನ ಕಡೆ ೫೦೦ ಜನ ಪರಿಯಂತರ ಜಾಯ ಆದ್ದರಿಂದ, ಜಗಳ ಮಾಡುವದಕ್ಕೆ ನಿರ್ವಾಹಯಿಲ್ಲದೆ ಉಳಿಕೆ ಮುಂದಿಯನ್ನು ತೆಗೆದುಕೊಂಡು ಹೋಗಿ ಬುರಾನ್‌ದೀನರ ದಂಡು ಇದ್ದ ಅಮ್ಮತ್ತಿಗೆ ಸಮೀಪವಾದ್ದರಿಂದ ಆ ದಂಡಿಗೆ ಕೂಡಿದನು.

ಆ ಮಾರಣೆ ದಿವಸ [ಅವರು] = ಆ ಪವುಜು ಸಮೇತ ರಸ್ತು ಸಾಮಾನು ಸಾಗಿಸಿಕೊಂಡು ಭಾಗಮಂಡಲಕ್ಕೆ ಹೋಗತಕ್ಕ ಬಗ್ಗೆ ಕಡಿಯತ್ತುನಾಡು ಮಾರ್ಗವಾಗಿ ಹೋಗುತ್ತಿದ್ದಲ್ಲಿ, ಅಲ್ಲಿಯೂ ಲಡಾಯವಾಗಿ, ಅವರ ಕಡೆ ಕೆಲವು ಜನಕ್ಕೆ ಅಪಾಯವಾಗಿ, ಅಲ್ಲಿಂದ ಬಂದು ಪಾಡಿನಾಲ್ಕುನಾಡು ವಳ್ಳಿತವಾದ ನೂರಂಬಾಡದ ಮೈದಾನದಲ್ಲಿ ಇಳಕೊಂಡರು. ಆ ಬಳಿಕ ವೀರರಾಜರು ತಮ್ಮ [ಮುಂದಿ] || ಯನ್ನು ಭಾಗಮಂಡಲಕ್ಕೆ ಹೋಗುವ ಮಾರ್ಗದಲ್ಲಿ ಮಾವಟ್ಟಿಯೆಂಬ ಇಕ್ಕಟ್ಟಿನ ಜಾಗದಲ್ಲಿ ನಿಲ್ಲಿಸಿ, ಜಗಳಕ್ಕೆ ಕಾದು ಇದ್ದರು. ಆ ಮಾರಣೇ ದಿವಸ ಬೆಳಿಗ್ಗೆ ಬುರಾನ್‌ದೀನರು ಸೇಕನ್‌ಸರ ದಂಡು ಸಮೇತ ಬಂದು ಆ ಮಾವಟ್ಟಿಗೆ ತಲಪಿದಲ್ಲಿ, ಹೇರಾಳ ಲಡಾಯವಾಗಿ, ಅವರ ದಂಡಿಗೆ ಬಹಳ ನೋವಾಗಿ, ಮಾರ್ಗ ಇಕ್ಕಟ್ಟು ಆದ್ದರಿಂದ ರಸ್ತು ಯಾವತ್ತೂ ಸಾಗಿಸುವುದಕ್ಕೆ ಕೂಡದೆ, ಕೆಲವು ರಸ್ತು ಸಾಮಾನು ಅಲ್ಲೇ ಹಾಕಿಬಿಟ್ಟು. ಭಾಗಮಂಡಲದ ಕೋಟೆ ಸೇರಿದರು. ಅವರು ಅಲ್ಲಿ ಬಿಟ್ಟು ಹೋದ ಸಾಮಾನು ಯಾವತ್ತೂ ಕೊಡಗು ಜನಕ್ಕೆ ಸಿಕ್ಕಿತು. ಆ ಕೋಟೆಗೆ ರಸ್ತು ಸಾಲದೆ ಹೋದ್ದರಿಂದ ಪೆರಿಯಾಪಟ್ಟಣದಿಂದ ರಸ್ತು ತರುವ ಬಗ್ಗೆ ದೂರವಾದ್ದರಿಂದ [ಪ್ರಯಾಸ] † ಎಂಬದು ತಿಳಿದು, ಮೊಣಸಿನಗಟ್ಟದ ಮಾರ್ಗವಾಗಿ ಹೋಗಿ ತುಳುವ ನಾಡಿಂದ ಸಾಮಾನು ತರಬೇಕೆಂತ ಪವುಜು ಸಮೇತ ಬಂದು ಗಟ್ಟದ ಸಮೀಪ ಪಟ್ಟಿ ಎಂಬಲ್ಲಿಗೆ ತಲಪಿದಲ್ಲಿ, ಕೊ

---

§ ಬ ಈ ಮಾತು ಆ ಪ್ರತಿಯಲ್ಲಿ ಇಲ್ಲ.

= ಬ ಬುರಾನ್‌ದೀನರು

|| ಬ ಕಡೆ ಮುಂದಿ

† ಬ ಪ್ರಯಾಸವಾದೀತು

ಡಗು ಜನಕ್ಕೂ ಆಬುರಾನ್‌ದೀನರ ದಂಡಿಗೂ ಲಡಾಯಿಯಾಗಿ, ಆಯಿ
ನೂರು ಜನ ಪರಿಯಂತರ ಅವರ ಕಡೆಯಲ್ಲಿ ಜಾಯಾ [ಜಖಮಿ] *
ಆದಾಗ್ಯೂ ದಕ್ಕದೆ ದಂಡನ್ನು ತೆಗದುಕೊಂಡು ತುಳುವ ನಾಡಿಗೆ ಹೋಗಿ,
ಅಲ್ಲಿಂದ ರಸ್ತು ಸಾಗಿಸಿಕೊಂಡು ಪುನಃ ಬಂದಲ್ಲಿ, ಕೊಡಗು ಜನವು
ನಡುಗಟ್ಟಿನಲ್ಲಿ ಜಗಳ ಮಾಡಿದಲ್ಲಿ, ಪೆಟ್ಟು ತಾಳಲಾರದೆ, ಅರೆವಾಸಿ
ರಸ್ತನ್ನು ಅಲ್ಲಿಯೇ ಬಿಸಾಟುಬಿಟ್ಟು, ಬಾಕಿ ರಸ್ತನ್ನು ಸಾಗಿಸಿ ತಂದು
ಭಾಗಮಂಡಲದ ಕೋಟೆಗೆ ತಲಪಿಸಿ [ನಾಲ್ಕು] ± ದಿವಸ ಇದ್ದು,
ಮತ್ತೊಂದು ಸಲ ರಸ್ತು ತರಬೇಕು ಎಂತ ಸದರಿ ಗಟ್ಟ ಇಳಿಯುವ ಬಗ್ಗೆ
ಬಂದಲ್ಲಿ, ಕೊಡಗು ಜನ ಲಡಾಯಿ ಮಾಡಿ, ಗಟ್ಟ ಇಳಿಯುವ ಬಗ್ಗೆ
ಬಿಡದೆ ಹೋದ್ದರಿಂದ, ಹಿಂತಿರುಗಿ ಬಂದ ಮಾರ್ಗವನ್ನೇ ಹಿಡಿದು ಬಂದು
ಬೆಪ್ಪುನಾಡಲ್ಲು ಇಳಕೊಂಡು, ಮೂರನೇ ದಿವಸ ಬೆಳಿಗ್ಗೆ ಟೀಪೂ ಸುಲ್ತಾ
ನರ ದಂಡಿನ ಸಂಗಡ ಕೂಡತಕ್ಕ ಬಗ್ಗೆ ಹೆಗ್ಗಳದ ಮಾರ್ಗವಾಗಿ ಹೋ
ಗುತ್ತ ಇದ್ದಲ್ಲಿ, ಅಲ್ಲಿ ಕೊಡಗು ಜನ ನಿಂತು ಲಡಾಯಿ ಮಾಡಿದಲ್ಲಿ, ಪೆಟ್ಟು
ತಾಳಲಾರದೆ. ಅಲ್ಲಿಂದ ಹಿಂತಿರುಗಿ, ಸಿದ್ಧೇಶ್ವರನ ಬೆಟ್ಟದ ಮಾರ್ಗವಾಗಿ
ದಂಡುಸಮೇತ ಪಟ್ಟಣಕ್ಕೆ ಹೋದರು. ಈ ಸಮಾಚಾರವನ್ನು ಎಡವ
ನಾಡಲ್ಲಿ ಹೊಂಬಾಳೆನಾಯಕನ ಸಂಗಡ ಲಡಾಯಿ ಮಾಡುತ್ತ ಇದ್ದ
ಸ್ಯೈದ ಹಮೀದನು ಕೇಳಿ, ಹೆದರಿ, ಪಟ್ಟಣಕ್ಕೆ ಹೋಗಿ, ಬುರಾನ್‌ದೀನರ
ಸಂಗಡ ಕೂಡಿದನು. ಆ ಬಳಿಕ ಬುರಾನ್‌ದೀನ್ ಶಿವಾ [ಸಾಲಾರೂ] §
ಸ್ಯೈದಹಮೊದ ಶಿಪಾಹಾರ, ಶೇಕನ್‌ಸರ್ ಶಿಪಾದಾರ ಈ ಮೂವರು ಸರ
ದಾರರು ದಂಡು ಸಮೇತ ಗೆಜ್ಜಲಟ್ಟಿ ಗಟ್ಟ ಇಳಿದು ಹೋಗಿ, ಟೀಪೂ
ಸುಲ್ತಾನರ ದಂಡಿನ ಸಂಗಡ ಕೂಡಿದರು.

ಆ ಬಳಿಕ ಮೂರು ತಿಂಗಳ ಮೇಲೆ ಪುಷ್ಯಮಾಸದಲ್ಲಿ ಟೀಪೂಸು
ಲ್ತಾನರ ಪವುಜು ಮಡಿಕೇರಿ ಕೋಟೆಗೆ ಇರುವ ರಸ್ತು ಸಾಗಿಸಿಕೊಂಡು
ಬರುತ್ತ ಇದ್ದಲ್ಲಿ, ವೀರರಾಜೇಂದ್ರ ಒಡೆಯರವರು ತಮ್ಮ ಮಂದಿ ತೆಗೆ
ದುಕೊಂಡು ಹೋಗಿ, ಹೊರೂರು [ನೂರೊಕ್ಲು] † ನಾಡುವಳಿತ
ವಾದ ನೇಗದಾಳದಲ್ಲಿ ಮಾರ್ಗ ಅಡ್ಡಗಟ್ಟಿ, ಜಗಳ ಮಾಡಿದಲ್ಲಿ, ಆ ಟೀಪೂ

* ಬ ಜಖಮಿ ಆಯಿತು

± ಬ ಅಲ್ಲಿ ನಾಲ್ಕು

§ ಶಿಪಾದಾರ

† ಬ ನಾಲ್ಕು

ಸುಲ್ತಾನರ ಫವುಜು ಯಾವತ್ತೂ ಹುರಿದು, ಜಾಯ ಜಕುಮಿ ಆಗಿ ಹಲಾಕಾದ್ದರಿಂದ, ಆ ರಸ್ತೆ ಸಾವಿರಾರು ದನ ಕರು ಆಯುಧ ಮುಂತಾದ್ದನ್ನು ಕೊಡಗು ಜನಕ್ಕೆ ಪಾಲು ಮಾಡಿಕೊಟ್ಟು ಬರುವದರೊಳಗೆ,— "ವೀರರಾಜೇಂದ್ರ ಒಡೆಯರು ಕುಟುಂಬ ಮಕ್ಕಳನ್ನು [ಕುರ್ಚಿ] § ಯೆಂಬ ಗ್ರಾಮದಲ್ಲಿ ಇಟ್ಟು ಟೀಪೂ ಸುಲ್ತಾನರ ಫವುಜಿನ ಸಂಗಡ ಲಡಾಯಿ ಮಾಡುವ ಬಗ್ಗೆ ಹೋಗಿ ಇದ್ದಾರೆ'— ಎಂಬದಾಗಿ [ಕಿರ್ನೆಲ್ಲಿ ಟಿಕ್ಕಾ ಮುತ್ತು] ± ಎಂಬವನು [ಪೈಚಿ] = ಅರಸುಗಳಿಗೆ ತಿಳಿಸಿದ್ದರಿಂದ, ಈ ಮಾತು ಕೇಳಿ ಅವರು ತಮ್ಮ ಕಡೆ ನಾಯಮಾರರು ಮುಳ್ಳು ಕುರುಬರಿಂದ ಸಹ ಇನ್ನೂರು ಜನವನ್ನು ಆ [ಷೇಕ] || ಮುತ್ತನ ಸಂಗಡ ಕೊಟ್ಟು— "ರಾತ್ರಿ ವೇಳೆಯಲ್ಲಿ ಹೋಗಿ ಕುರ್ಚಿಯಲ್ಲಿರುವ ಕೊಡಗಿನ ದೊರೆಗಳ ಕುಟುಂಬ ಮಕ್ಕಳನ್ನೂ ಕಡಿದು ಹಾಕಿ, ಅವರ ಅರಮನೆಯಲ್ಲಿ ಇರುವಂತ ಬದುಕು ಸರ್ವಸ್ವವನ್ನೂ ಲೂಟಿ ಮಾಡಿಕೊಂಡು ಬಾ"— ಎಂಬದಾಗಿ ಹೇಳಿದ್ದರಿಂದ, ಅದೇ ಪೇರೆ [ಷೇಕ] * ಮುತ್ತನು ರಾತಾರಾತ್ರಿಯೇ ಬಂದು, ಆ ಕುರ್ಚಿ ಗ್ರಾಮದಲ್ಲಿ ಅರಮನೆ [ಲೂಟಿ] × ಮಾಡಿ, ಇಬ್ಬರು ಅರಸಿತಿಯರನ್ನೂ, ವೀರರಾಜರ ಬಲ ಅಣ್ಣನ ಮಗ ಒಬ್ಬರನ್ನೂ, ಎರಡು ಜನ ಬಾಂದಿಯರನ್ನೂ ಸಹ ಅಂಬಿನಿಂದ ಇಟ್ಟು ಕೊಂದು ಹಾಕಿ, ಅಲ್ಲಿದ್ದ ಇಪ್ಪತ್ತು ಜನ ಪರಿಯಂತರ ಕೊಡಗರನ್ನು ಕಡಿದು ಹಾಕಿ, ವೀರರಾಜರವರ ಹಿರಿಯುವರು ಪ್ರಾಕಾರಭ್ಯದಿಂದ ಸಂಪಾದಿಸಿದಂಥ [ನಗ] † ನಾಣ್ಯ ಹಣ ಕಾಸು ಯಾವತ್ತನ್ನೂ ತೆಗೆದುಕೊಂಡು, ಅರಮನೆಗೆ ಬೆಂಕಿ ಹಾಕಿ ಸುಟ್ಟುಬಿಟ್ಟು, ರಾತಾರಾತ್ರಿಯೇ ಆ ಜನವನ್ನು ಕರಕೊಂಡು ಕಾಡು ಬಿದ್ದು ಹೋಗಿ, ಆ ಬಗೆಯ ನಗ ನಾಣ್ಯದಲ್ಲಿ ಒಳ್ಳೆ ಒಳ್ಳೆ ಅನರ್ಘ್ಯವಾದ ಕೆಲವು ನಗಗಳನ್ನು ಆ [ಷೇಕು] ||

§ ಬ ಕುರುಚಿ
± ಬ ಕಿರುನೆಲ್ಲಿ ಟಿಂಕಮುತ್ತಾ
= ಬ ಕೋಟಿ
|| ಬ ಟಿಂಕ
* ಬ ಆಟಿಂಕ
× ಬ ಕುಟುಂಬ ಇದ್ದ ಮನೆಯನ್ನು ಲೂಟಿ
† ಬ ಅನರ್ಘ್ಯವಾದ ಒಳ್ಳೇ ಒಳ್ಳೇ
|| ಬ ಟಿಂಕ

ಮುತ್ತನು ತೆಗೆದುಕೊಂಡು, ಉಳಿದ ನಗ ನಾಣ್ಯ ಯಾವತ್ತೂ ಕೋಟೆ ಅರಸುಗಳಿಗೆ ಕೊಟ್ಟನು.

ಈ ಸಮಾಚಾರ ವೀರರಾಜೇಂದ್ರ ಒಡೆಯರವರು ಕೇಳಿ, ಆ ಕುರ್ಚಿಗೆ ಬಂದು, ನೋಡಬಾರದಂತದ(ನ್ನು) ಕಣ್ಣಿಂದ ನೋಡಿ, ಈ ಕೋಟೆ ಅರಸು ಮಾಡಿದಂತಾ ಮಹಾದೋಷಕ್ಕೆ ಮಹಾದೇವನೇ [ಸಾಕ್ಷಿ ಸರಿ] ± ಎಂತ ಮನಸ್ಸಿನಲ್ಲು ಧ್ಯಾನಿಸಿ, ಅಲ್ಲಿಂದ ನಾಲ್ಕುನಾಡು ಅರಮನೆಗೆ ಬಂದು,— "ಕೋಟೆ ಅರಸು ಅರ್ಥಪ್ರಾಣ ತೆಗೆದುಕೊಂಡಂತಾದ್ದು ಅನೇಕ ಕಾಲ ಮರೆಯದಂತ ಉಪಕಾರ; ಇದಕ್ಕೆ ಪ್ರತಿ ಉಪಕಾರ ಮಾಡುವದಕ್ಕೆ ನಮಗೆ ಈ ವರೆಗೆ ಸಂದರ್ಭ ಆಗಲಿಲ್ಲ. ಇನ್ನು ಮುಂದೆ ಮಹಾದೇವನ ಕಟಾಕ್ಷ ಒದಗಿದರೆ ಪ್ರತಿ ಉಪಕಾರ ಮಾಡಬಹುದು."— ಎಂದು ಹೇಳಿ, ಒಂದೂ ವರೆ ತಿಂಗಳು ನಾಲ್ಕುನಾಡು ಅರಮನೆಯಲ್ಲು ಇದ್ದು, ಇದೇ ಮಾಘ ಮಾಸದಲ್ಲು ಕೊಡಗು ಮಂದಿ ಯಾವತ್ತನ್ನೂ ತೆಗೆದುಕೊಂಡು ಭಾಗ ಮಂಡಲದ ಕೋಟೆಗೆ ಹೋಗಿ, ಮುತ್ತಿಗೆ ಹಾಕಿ, [ಮುಂಭಾರತ್ತು] § ಎಂಬ ಮೋಟೆಯಲ್ಲಿ ಪಿರಂಗಿ ಮಡಗಿ, ಆ ಪಿರಂಗಿಯಿಂದ ಖಾಸಾ ವೀರ ರಾಜೇಂದ್ರ ಒಡೆಯರವರೇ ಸಿಸ್ತು ನೋಡಿ ಕೋಟೆಗೆ ಇಡುತ್ತಿದ್ದರು. ಇವರ [ತಾವಳ ಖಜಮತ್ತು] = ಗಾರರು ಪಿರಂಗಿ ತುಂಬಿ ಕೊಡುತ್ತ ಇದ್ದರು ಆ ಕೋಟೆಯಿಂದ ದೊರೆಗಳ ಮೇಲೆ ಏಳು ಪಿರಂಗಿಯಿಂದ ಗುಂಡು ಇಡುತ್ತ ಇದ್ದರು. ಈ ಮೆಹನತ್ತು ಮಾಡಿ ಆಯಿದು ದಿವ ಸದಲ್ಲಿ ಆ ಕೋಟೆಯನ್ನು ತೆಗೆದುಕೊಂಡರು. ಆ ಕೋಟೆ ಒಳಗೆ ಇದ್ದ ಮದ್ದು ಗುಂಡು ಪಿರಂಗಿ ಮುಂತಾದ ಸಾಮಾನು ದೊರೆಗಳಿಗೆ ಸಿಕ್ಕಿತು. ಅಲ್ಲಿ ಕನಕೆ, ಕಾವೇರಿ, ಸುಜ್ಯೋತಿ ಎಂಬ ಪುಣ್ಯ ನದಿಗಳು ತ್ರಿವೇಣೀ ಸಂಗಮವಾಗಿ ಇರುವಂತ ಜಾಗದ ಹೆಸರು ಭಾಗಮಂಡಲ. ಅಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಈ [ಮೂರು] × ದೇವಸ್ಥಾನವುಂಟು. ಅದರ ಮೇಲೆ ತಾಮ್ರದ ತಗಡು ಹೊದಿಸಿ ಇದೆ. ಆ ದೇವಸ್ಥಾನದ

± ಬ ಶಿಕ್ಷಿಸಲಿ!

§ ಬ ಮುಂಬಾರತ್ತು

= ಬ ತಾವಾ ವಳಕಿದ್ದ ಮದ್ದು

× ಬ ಮೂರು ತ್ರಿಮೂರ್ತಿಗಳಿಗೂ ಮೂರು

ಸುತ್ತ ಕೋಟೆ ಕಟ್ಟಿ, ಆದರ ಒಳಗೆ ಟೀಪೂಸುಲ್ತಾನರ ಕಡೆ ಪವುಜು ಕಿಲ್ಲೇದಾರ ಸಹ ಇದ್ದರು. ದೊರೆಗಳು ಆ ಕೋಟೆಗೆ ಪಿರಂಗಿಯಿಂದ ಗುಂಡು ಹೊಡೆಯುವಾಗ್ಗೆ ಆ ಮೂರು ದೇವಸ್ಥಾನಕ್ಕೂ ಗುರ್ತಿನ ಬಗ್ಗೆ ಮೂರು ಗುಂಡು ಹೊಡೆದಲ್ಲಿ, ಆ ದೇವಸ್ಥಾನಗಳ ಮೇಗಣ ತಾಮ್ರದ ತಗಡು ಕತ್ತರಿಸಿ ಹೋದ್ದರಿಂದ, ಆ ಕತ್ತರಿಸಿ ಹೋದ ಜಾಗಕ್ಕೆ ಬೆಳ್ಳಿ ತಗಡು ಹತ್ತಿಸಿ ಇರುವಂತಾದ್ದು [ಹಾಜರು] × ಇದೆ. ಆ ಕೋಟೆಯಲ್ಲು ಇದ್ದ ಆಯುಧ ಮದ್ದು ಗುಂಡು ಪಿರಂಗಿ ಮುಂತಾದ್ದು ನಾಲ್ಕುನಾಡು ಅರಮನೆಗೆ ಸಾಗಿಸಿ, ಆ ಬಳಿಕ ತುಳುವನಾಡು ಸೀಮೆ ಸಾಧಿಸುವ ಬಗ್ಗೆ ಕೊಡಗು ಮಂದಿಯನ್ನು ಹೊಂಬಾಳೆ ನಾಯಕನ ಸಂಗಡ ಕೂಡಿಸಿ, ಮೆಣಸಿನ ಗಟ್ಟದ ಮಾರ್ಗವಾಗಿ ಕಳುಹಿಸಿದಲ್ಲಿ, ಹೊಂಬಾಳೆ ನಾಯಕನು ಟೀಪೂಸುಲ್ತಾನರ ಪವುಜಿನ ಸಂಗಡ ಲಡಾಯಿಮಾಡಿ, ಅಮರಸುಳ್ಯದ ಸರಹದ್ದಿನ ಆಚೆ ಕೊಡೆಯಾಲದ ಈಚೆಗೆ ನಡುಮಧ್ಯ ಇರುವಂತಾ ಸೀಮೆಯನ್ನು ಕಟ್ಟಿಕೊಂಡು, ಮೊಗರ್ನಾಡು ಹೊಳೆಬಳಿಯ ಒಡ್ಡು ಕಟ್ಟಿ, ಕೆಲವು ಮಂದಿಯನ್ನು ಠಾಣ್ಯ ಯಿಟ್ಟು, ಆ ವಿವರಕ್ಕೆ ರಾಜರಿಗೆ ಬಿನ್ನಹವತ್ತಲೆ ಬರಕೊಂಡಲ್ಲಿ— "ಈಗ ಹೊಸದಾಗಿ ಕಟ್ಟಿರುವ ಸೀಮೆ ಅಮಲನ್ನು ನಿನಗೆ ಮೊಕರೂರು ಮಾಡಿ ಇದೆ. ಕೊಡಗು ಮಂದಿಯಲ್ಲು ಅಲ್ಲಲ್ಲಿ ಠಾಣ್ಯಕ್ಕೆ ಬೇಕಾದ ಮಂದಿ ಇಟ್ಟುಕೊಂಡು, ಉಳಿಕೆ ಮಂದಿಯನ್ನು ಹಜೂರಿಗೆ ಕಳುಹಿಸುವದು"— ಎಂಬದಾಗಿ ನಿರೂಪ ಬರೆಸಿ ಕಳುಹಿಸಿದ್ದರಿಂದ, ಆದೇ ಮೇರೆಗೆ ಬಂದೋಬಸ್ತುಮಾಡಿ, ಉಳಿಕೆ ಮಂದಿಯನ್ನು ಕಲಿಸಂದ ೪೮೯೨ ನೆ ಸಾಧಾರಣ ಸಂವತ್ಸರದ ಚೈತ್ರ ಮಾಸದಲ್ಲಿ ಕಳುಹಿಸಿಕೊಟ್ಟನು.

ಆ ಬಳಿಕ ಮಂಡೆಪ್ಪನ ಅಪ್ಪಯ್ಯ ನಗರಹಳ್ಳಿ ಪುಟ್ಟಯ್ಯ ಗವುಡಗೆ ಸಹ ಅಪ್ಪಣೆ ಕೊಟ್ಟದ್ದು:— "ಮಹಾದೇವನ ಕಟಾಕ್ಷದಿಂದ ಮಡಿಕೇರಿ ಕೋಟೆಯ ವಿನಾ ನಮ್ಮ ರಾಜ್ಯ ಯಾವತ್ತೂ ನಮ್ಮ ಕೈವಶವಾಯಿತು. ಇದಲ್ಲದೆ ತುಳುವ ರಾಜ್ಯದ ಸೀಮೆಯನ್ನು ಹೊಸದಾಗಿ ಸಾಧಿಸಿದೆವು. ಮಡಕೇರಿ ಕೋಟೆಯು ನಮ್ಮ ಸಂಸ್ಥಾನದ ಜಾಗವಿದೆ. ಅಲ್ಲಿ [ಜಾಫರಲ್ಲಿ] * ಬೇಗು ಕಿಲ್ಲೇದಾರನು ಪವುಜು ಸಮೇತ ಇದ್ದಾನೆ.

× ಬ ಗುರುತು ಹಾಜರು

* ಬ ಜಾಫರಕುಲ್ಲಿ

ನೀವು ಮಂದಿ ತೆಗೆದುಕೊಂಡು ಹೋಗಿ, ಮಡಿಕೇರಿ ಕೋಟೆಗೆ ರಸ್ತೆ ಬರುವಂತಾ [ಪಕ್ಕ] = ಮಾರ್ಗಕ್ಕೆಲ್ಲ ಮಂದಿ ಇಟ್ಟು, ಮಾರ್ಗ ಕಟ್ಟಿ, ಉಳಿಕೆ ಮಂದಿ ಯಾವತ್ತೂ ತೆಗೆದುಕೊಂಡು ಹೋಗಿ ಟೀಪೂಸುಲ್ತಾನರ ಸೀಮೆ ಸಾಧಿಸುವುದೆ"ಂತ ಅಪ್ಪಣೆ ಕೊಟ್ಟು ಕಳುಹಿಸಿದಲ್ಲಿ, ಅದೇ ಅಪ್ಪಣೆ ಪ್ರಕಾರ ಮಂದಿ ತೆಗೆದುಕೊಂಡು ಹೋಗಿ, ಮಡಿಕೇರಿ ಕೋಟೆಗೆ ರಸ್ತೆ ಬರುವಂತ [ಪಕ್ಕ] = ಮಾರ್ಗಕ್ಕೆಲ್ಲ ಮಂದಿ ಇಟ್ಟು ಬಂದೋಬಸ್ತು ಮಾಡಿ, ಟೀಪೂಸುಲ್ತಾನರ [ಸೀಮೆ] ± ಅರಕಲಗೋಡು, ಕೊಣನೂರು ಸೀಮೆ ಲೂಟಿ ಮಾಡುತ್ತ ಇದ್ದಲ್ಲಿ, ಈ ಎರಡು ತಾಲೂಕಿನ ರೈತರು ಲಾಚಾರಾಗಿ ಬಂದು—"ನಾವು ರೈತರು ಇದ್ದೇವೆ ನಮಗೆ ದುಃಖ ಕೊಡಬೇಡ. ನಾವು ಟೀಪೂ ಸುಲ್ತಾನರಿಗೆ ಒಂದು ವರಹ ತೆತ್ತರೆ ನಿಮಗೆ ಒಂದು ರೂಪಾಯಿ ತೆತ್ತೇವು. ಈ ಮೇರೆ ನಮ್ಮ ಎರಡು ತಾಲೂಕಿನಿಂದ ಟೀಪೂಸುಲ್ತಾನರಿಗೆ ಎಷ್ಟು ವರಹ ಕೊಡುತ್ತ ಇದ್ದೇವೋ ಅಷ್ಟು ರೂಪಾಯಿ ನಿಮ್ಮ ಸರಕಾರಕ್ಕೆ ತೆತ್ತು ಕೊಟ್ಟೇವು"— ಎಂಬದಾಗಿ ಎರಡು ತಾಲೂಕಿನ ರೈತರೂ ಒಡಂಬಟ್ಟು ಅದೇಮೇರೆ ನಿಗದಿ ಮಾಡಿದ್ದರಿಂದ, ಆ ತಾಲೂಕಿನಲ್ಲಿ ದವುಡು ಮಾಡುವಂತಾದ್ದು ನಿಲ್ಲಿಸಿ, ಆ ಮಂಡೆಪ್ಪನ ಅಪ್ಪಯ್ಯ, ನಗರ(ಹ)ಳ್ಳಿ ಪುಟ್ಟಯ್ಯ ಗೌಡ ಸಹ ಮಂದಿ ತೆಗೆದುಕೊಂಡು, ಐಗೂರು ಸೀಮೆಗೆ ಹೋಗಿ, ಅಲ್ಲಿ ಠಾಣ್ಯ ಇದ್ದ ಟೀಪೂಸುಲ್ತಾನರ ಕಡೆ ಜನರನ್ನು ಹೊಡೆದು ಓಡಿಸಿ ಬಿಟ್ಟು, ಮಂಜರಾಬಾದು ತಾಲೂಕಿನ ಕೆಲವು ಸೀಮೆಯನ್ನು ಕಟ್ಟಿಕೊಂಡು, ಅದರ ಸಮೀಪದ ಅರಕೆರೆಯಲ್ಲಿ ಒಡ್ಡು ಕಟ್ಟಿ, ಠಾಣ್ಯ ಇಟ್ಟು [ಆ] § ಮಂದಿಗೆ ಸರದಾರನಾಗಿ ಈ ನಗರಹಳ್ಳಿ ಪುಟ್ಟೇ ಗೌಡನು ಇದ್ದ(ನು). ಮಂಡೆಪ್ಪನ ಅಪ್ಪಯ್ಯನು ಆ ಸೀಮೆಯನ್ನು ವಿಚಾರಿಸಿಕೊಂಡು ಬಂದೋಬಸ್ತು ಮಾಡಿಕೊಂಡು ಇದ್ದನು. ಈ ಮೇರೆ ಇರುವಲ್ಲಿ, ಟೀಪೂ ಸುಲ್ತಾನರು ಫವುಜು ಸಮೇತ ರಾಮರಾಜರ [ಕೊಚ್ಚಿ] † ಕೋಟೆಯನ್ನು ತೆಗೆದುಕೊಳ್ಳಬೇಕೆಂಬುದಾಗಿ ಅದರ ಸಮೀಪದಲ್ಲಿ ಇಳಿದುಕೊಂಡು, ಮೂರು ದಿವಸದ

= ಬ ಪಥ

± ಬ ಇಲಾಖೆ

§ ಬ ಆ ಠಾಣ್ಯದ

† ಬ ಚಿಟ್ಟೆ

ಮೇಲೆ ಮೂರನೆ ಜಾವದಲ್ಲಿ [ಅವರು ಖಾಸಾ ಮಂದಿಯನ್ನು] * ತೆಗೆದುಕೊಡು. ಅಹಂಕಾರದಿಂದ ಹೆಡ [ಹೊಳೆ ಮಾರ್ಗಕ್ಕಾಗಿ] § ಆ [ಕೊಚ್ಚಿ] ಕೋಟೆಗೆ ನುಗ್ಗಿ, [ನಾಲ್ಕು] × ಬತ್ತೇರಿಯನ್ನು ಆಕ್ರಮಿಸಿಕೊಂಡು ಜಗಳಕ್ಕೆ ನಿಂತಲ್ಲಿ, ಮೇಗಣ ಬತೇರಿಗಳಿಂದ ಪಿರಂಗಿ ಗುಂಡು ಬಂದೂಕಿನ ಗುಂಡು ಸಹ ಇಟ್ಟು ಕತ್ತಿ ತೆಗೆದು [ಕೊಂಡು] = ಕಡಿಯುತ್ತ ಬಂದಲ್ಲಿ, ಟೀಪೂ ಸುಲ್ತಾನರ ಅಗಾಡಿ ಪವುಜಿನಲ್ಲಿ ಇದ್ದ ಜಮಾಬೇಗು ಎಂಬ ಶಿಪಾದಾರನು ಬಿದ್ದು ಹೋಗಿ, ಆ ಕೋಟೆ ಮೇಲೆ ಬತ್ತೇರಿಗಳ ಮೇಲೆ ಸಹ ಹತ್ತಿ ಇದ್ದಂತಾ ಟೀಪೂ ಸುಲ್ತಾನರ ಪವುಜು ಯಾವತ್ತು ಪೆಟ್ಟು ತಡೆಯಲಾರದೆ, ದಾರಿ ಕಾಣದೆ, ಕೋಟೆ ಮೇಗಣಿಂದ ಕಂಧಕದ ಒಳಗೆ ಬಿದ್ದು, ಮೃತವಾದರು. ಟೀಪೂ ಸುಲ್ತಾನರು ಔರಂಗ ಎಂಬ ಖಾಸಾ ಪಾಲಕಿ, ಖಾಸಾ ಮೊಹರ ಇದ್ದಂತಾ ಕಲಂದಾನಿ, ಸವಾರಿ ಕುದುರೆ, ಖಾಸಾ ಕತ್ತಿ ಸಹಾ ಅಲ್ಲಿ ಬಿಟ್ಟು, ಟೀಪೂ ಸುಲ್ತಾನರು ಮುಖಭಂಗಿತರಾಗಿ ಆ ಕಂದಕದಿಂದ ಗಿಡಬಿದ್ದು ಬಂದು ತಮ್ಮ ತಂಬಿಗೆ ಸೇರಿದರು. ಆ ಕಂದಕದಲ್ಲಿ ಬಹಳ ಮಂದಿ ದೊಡ್ಡ ದೊಡ್ಡ ಸರದಾರರು ಹೇರಳ ಪವುಜು ಸಹ [ಪ್ರಾಣ ಬಿಟ್ಟರು]. ± ಆ ಬಳಿಕ ಟೀಪೂ ಸುಲ್ತಾನರು [ಕೊಚ್ಚಿ] † ಕೋಟೆ ತೆಗೆದುಕೊಳ್ಳಬೇಕೆಂದು ಅಲ್ಲಿಯೇ [ಕಚೇರಿ] ‖ ಮಾಡಿಕೊಂಡು ಸನ್ನದ್ಧರಾಗುತ್ತ ಇದ್ದರು.

ಇತ್ತಲಾಗಿ ತಲಚೇರಿ ಕೋಟೆ ಛೀಫ್ ರಾಬರ್ಟ್ಸು ಟೆಲ್ಲೇರೀ ಸಾಹೇಬರು ಕೆಲವು ಪವುಜನ್ನು ತಲಚೇರಿಯಿಂದ ಕಳುಹಿಸಿ, ಕದನೂರು ಎಂಬ ಜಾಗದಲ್ಲಿ ಟೀಪೂ ಸುಲ್ತಾನರ ಕಡೆ ಠಾಣ್ಯ ಇದ್ದ ಮಂದಿಯನ್ನು ಹೊಡೆದು ಓಡಿಸಿ ಬಿಟ್ಟು, ಆ ಜಾಗವನ್ನು ತೆಗೆದುಕೊಂಡರು. ಆ ಸಮಯದಲ್ಲಿ ಕಣ್ಣೂರ ಬಲಿಯ ಬೀಬಿಯು ಟೀಪೂ ಸುಲ್ತಾನರ

---

* ಬ ಆರು ಕುಸುಮ್ಮನ್ನು

§ ಬ ವಳಿಮಾರ್ಗದಿಂದ

× ಬ ಮೂರು ನಾಲ್ಕು

= ಬ ಕೊಂಡು ಮೇಲೆ ಬಿದ್ದು

± ಬ ಮೃತಪಟ್ಟು ಹೋದರು.

† ಬ ಚೆಟ್ಟಿ

‖ ಬ ಛಾವಣಿ

ಕಡೆ ಪಜಲ್‌ಖಾನನ ಕುಷುಮ್ಮಿನ ಜನ ಆರು ಸಾವಿರ, ತನ್ನ ಕಡೆ ಮಾಪಳೆಯರು ನಾಲ್ಕು ಸಾವಿರ ಜನ ಸಹ ಕೂಡಿಕೊಂಡು ಇದ್ದದ್ದರಿಂದ, ಛೀಪ್ ರಾಬರ್ಟ್ಸ ಟೆಲ್ಲೇರೀ ಸಾಹೇಬರವರು ಆ ಬೀಬಿಗೆ— "ಟೇಪೂ ಸುಲ್ತಾನರ ಪವುಜು [ನೀನು] * ಜಗಳ ಮಾಡುವವಳೋ? ಅದಲ್ಲಾ, ಅವರ ದೋಸ್ತಿ ಬಿಟ್ಟು ಇಂಗ್ರೇಜಿ ಬಾಹದ್ದರವರ ಕುಂಪಣಿಯವರ ಕೂಡೆ ಕೂಡಿ ನಿಲ್ಲುವವಳೊ ?" ಎಂಬದಾಗಿ ಹೇಳಿ ಕಳುಹಿಸಿದಲ್ಲಿ, ಆ ಬೀಬಿಯು ಟೇಪೂ ಸುಲ್ತಾನರ ಕಡೆ ಪವುಜಿನ ಸರದಾರರ ಕೂಡೆ ಹೇಳಿದ್ದು:-"ಇಂಗ್ರೇಜಿ ಬಾಹದ್ದರವರ ಪವುಜನ್ನು ಉಪಾಯ [ದಿಂದ] † ಕರೆಸುತ್ತೇನೆ. ಅವರು ಬಂದಲ್ಲಿ ನೀವೂ ನಾವೂ ಕೂಡಿ ಅವರನ್ನು ಹೊಡೆಯಬೇಕೆಂ"ಬುದಾಗಿ ಹೇಳಿದಲ್ಲಿ, ಅವರು ಒಪ್ಪಿಕೊಂಡದ್ದರಿಂದ, ಆ ಬೀಬಿಯು ತಲಚೇರಿ ಸರದಾರ ಛೀಪ್ ರಾಬರ್ಟ್ಸ ಟೆಲೇರು ಸಾಹೇಬರವರಿಗೆ ಹೇಳಿಕಳುಹಿಸಿದ ವಿವರ— "ಕಂಣೂರು ಕೋಟೆ ಒಳಗೆ ಇರುವ ಟೇಪೂ ಸುಲ್ತಾನರ ಪವುಜನ್ನು ೭–೮ ದಿವಸದ ಒಳಗೆ ಉಪಾಯದಿಂದ ಕೊಡಿಯಾಲದ ಕಡೆಗೆ ಕಳುಹಿಸಿಬಿಡುತ್ತೇನೆ. ಈ ಮಂದಿ ಕೋಟೆಯಿಂದ ಇಳಿದು ಹೋದ ಬಳಿಕ, ಇಂಗ್ರೇಜಿ ಬಹದ್ದರವರ ಪವುಜು ಕಳುಹಿಸಿಕೊಟ್ಟಲ್ಲಿ, ಅವರನ್ನು ಕೋಟೆ ಒಳಗೆ ಕರೆದುಕೊಂಡು, ಕೋಟೆಮೇಲೆ ಅವರ ಜಾಂಡೆ ಹಾಕಿಸಿಕೊಳ್ಳುತ್ತೇನೆ"— ಎಂಬದಾಗಿ ಹೇಳಿಕಳುಹಿಸಿ, ಆ ಬಳಿಕ ೫ ದಿವಸದ ಮೇಲೆ ಬೀಬಿಯು ಟಿಪ್ಪೂಸುಲ್ತಾನರ ಕಡೆ ಸರದಾರನಿಗೆ ಹೇಳಿದ್ದು— "ನೀವು ನಿಮ್ಮ ಪವುಜು ತೆಗೆದುಕೊಂಡು ಕೊಡಿಯಾಲಕ್ಕೆ ಹೋಗುತ್ತೇವೆ ಎಂಬದಾಗಿ ಸುದ್ದಿ ಹುಟ್ಟಿಸಿಬಿಟ್ಟು, ಕವಾಯಿಯಲ್ಲಿ ಇಳಕೊಂಡು ಇರಿ. ಆ ಬಳಿಕ— "ಈ ಮೇರೆ ಟೇಪೂಸುಲ್ತಾನರ ಪವುಜು ಕೋಟೆಯಿಂದ ಹೊರಗೆ ಹೋಯಿತು ನಿಮ್ಮ ಪವುಜು ತೆಗೆದುಕೊಂಡು ಇಲ್ಲಿಗೆ ಬಂದು ನಾಳೆ ದಿವಸ ಕೋಟೆ ಮೇಲೆ ನಿಮ್ಮ ಜಾಂಡೆ ಹಾಕಿಕೊಳ್ಳಿ"— ಎಂಬದಾಗಿ ಹೇಳಿ ಕಳುಹಿಸುತ್ತೇನೆ. ಅವರು ಪವುಜು ತೆಗೆದುಕೊಂಡು ಇಲ್ಲಿಗೆ ಬಂದಲ್ಲಿ, ಅವರನ್ನು ಕೋಟೆ ಹೊರಗೆ ಇಳಿಸಿ ಇರುತ್ತೇನೆ. ಆ ಸಮಯದಲ್ಲಿ ನೀವು ಪವುಜು ಸಮೇತ ರಾತಾರಾತ್ರಿಯೇ ಬಂದು ಮಾಪಿಳ್ಳೆಯರ ಸಹ ಕೂಡಿಕೊಂಡು, ಅವರ ಪವು

---

* ಬ ನೀನು ತೆಗೆದುಕೊಂಡು

† ಬ ತಂತ್ರದಿಂದ

ಜನ್ನು ಹೊಡೆದು ಜಾಯಾ ಮಾಡಬೇಕು"— ಎಂಬದಾಗಿ ಹೇಳಿ, ಆ ಟಿಪ್ಪೂಸುಲ್ತಾನರ ಸರದಾರನ(ನ್ನು) ಕೋಟಿಯಿಂದ ಹೊರಗೆ ಕಳುಹಿಸಿ ಬಿಟ್ಟು, "ಟೇಪೂಸುಲ್ತಾನರ ಪವುಜು ಕೋಟಿ ಬಿಟ್ಟು ಹೊರಗೆ ಹೋಯಿತು. ನಿಮ್ಮ ಕಡೆ ಮಂದಿ ಜಲದಿ ಕಳುಹಿಸಿಕೊಟ್ಟು ಕೋಟಿಗೆ ಇಂಗ್ರೇಜಿ ಬಹದರರ ಜಾಂಡೆ ಹಾಕಿಕೊಳ್ಳಿ"-- ಎಂಬವಾಗಿ ಛೀಫ್ ರಾಬರ್ಟ್ಸ ಟಿಲೇರಿ ಸಾಹೇಬರವರಿಗೆ ಹೇಳಿಕಳುಹಿಸಿದಲ್ಲಿ, ಆ ಮಾತನ್ನು ನಂಬಿ, ಮೇಜರ್ ಡೋ ಸಾಬರಿಗೆ— "ನಿಮ್ಮ ಪವುಜು ತೆಗೆದುಕೊಂಡು ಕಣ್ಣೂರು ಕೋಟೆಗೆ ಹೋಗಿ 'ಇಂಗ್ರೇಜಿ ಜಾಂಡೆ ಹಾಕಿಕೊಳ್ಳಿ"— ಎಂಬದಾಗಿ ಹೇಳಿ ಕಳುಹಿಸಿದ್ದರಿಂದ, ಅದೇ ಮೇರೆ ಆ ಮೇಜರ್‌ಡೋ ಸಾಹೇಬರು ತಮ ಮಂದಿ ತೆಗೆದುಕೊಂಡು ಬಂದು, ಕಣ್ಣೂರು ಕೋಟಿ ಸಮೀಪದಲ್ಲಿ ಇಳ ಕೊಂಡಲ್ಲಿ, ಆ ಬೀಬಿಯು ಕವಾಯಿ ಎಂಬಲ್ಲಿ ಇಳಕೊಂಡು ಇದ್ದ ಟೇಪೂಸುಲ್ತಾನರ ಕಡೆ ಸರದಾರನಿಗೆ ಬರೆದು ಕಳುಹಿಸಿದ ವಿವರ— "ಇಂಗ್ರೇಜಿ ಬಹದ್ದರರ ಪವುಜು ಬಂದು ಕೋಟಿ ಸಮೀಪದಲ್ಲಿ ಇಳಿದು ಇವೆ. ನಿಮ್ಮ ಪವುಜು ತೆಗೆದುಕೊಂಡು ರಾತ್ರಾರಾತ್ರಿಯೇ ಇಲ್ಲಿಗೆ ಬಂದು, ನಮ್ಮ ಕಡೆ ಮಾಪಿಳ್ಳೆಯುವರು ಸಹ ಕೂಡಿಕೊಂಡು, ಇಂಗ್ರೇಜಿಯುವರ ಪವುಜನ್ನು ಜಾಯುಮಾಡಿ"— ಎಂಬದಾಗಿ ಬರೆಸಿ ಕಳುಹಿಸಿದ್ದರಿಂದ, ಆ ಮೇರೆ ಆ ಟೇಪೂಸುಲ್ತಾನರ ಕಡೆ ಸರದಾರನು ಪವುಜು ತೆಗೆದುಕೊಂಡು ಬಂದು, ಮಾಪಿಳ್ಳೆಯುರನ್ನು ಕೂಡಿಕೊಂಡು, ರಾತ್ರಿ ಮೂರು ಜಾವದ ಮೇಲೆ ಇಂಗ್ರೇಜಿಯುವರ ಪವುಜಿನ ಮೇಲೆ ಬಿದ್ದು, ಕೆಲವು ಜನಕ್ಕೆ ಜಾಯುಜಕ್ಕಂ ಮಾಡಿದರು. ಅಷ್ಟರಲ್ಲಿ ಇಂಗ್ರೇಜಿಯುವರ ಪವುಜುಎಚ್ಚತ್ತು, ಈ ದಗಾಮಾಡು ವದಕ್ಕೆ ಬಂದಂತಾ ಟೇಪೂಸುಲ್ತಾನರ ಜನಕ್ಕೂ ಮಾಪಿಳ್ಳೆಯುರಿಗೂ ಚೆನ್ನಾಗಿ ಪೆಟ್ಟು ಹೊಡೆದಲ್ಲಿ, ಮುರಿದು ಹೋಗಿ ಕಣ್ಣೂರು ಕೋಟಿಗೆ ಹೊಕ್ಕರು. ಆ ಬಳಿಕ [ಅಲ್ಲಿಯು] † ಬೀಬಿಯು ನಮ್ಮ ಪವುಜಿಗೆ ಮೋಸ ಮಾಡ ಬೇಕೆಂಬದಾಗಿ ಕರೆಸಿದವಳೇ ಹೊರತು ಕೋಟಿ ಕೊಡುವದಕ್ಕೆ ಕರೆಸಿ ದವಳಲ್ಲ ಎಂದು ಆ ಡೋ ಸಾಹೇಬರವರು ತಿಳಿದು, ಆ ಬೆಳಿಗ್ಗೆ ತಮ್ಮ ಪವುಜು ಸಮೇತ ತಲಚೇರಿಗೆ ಹೋಗಿ, ಈ ವೃತ್ತಾಂತವೆಲ್ಲ ರಾಬರ್ಟ್ಸ ಟಿಲೇರೀ ಸಾಹೇಬರವರಿಗೆ ಬರೆದು ಕಳುಹಿಸಿದಲ್ಲಿ, ಅವರು ಈ ವಿವರ ವೆಲ್ಲಾ ಬೊಂಬಾಯಿ [ಗೌರ್‍ನರ್] = ಅವರ್ ಕರಂಬಿ ಸಾಹೇಬರಿಗೆ

---

† ಬ ಈ ಕಣ್ಣೂರು

= ಬ ಗೌರ್‍ನರ್ ಮೇಜರ್ ಜನರಲ್

ಬರೆದು ಕಳುಹಿಸಿದಲ್ಲಿ,— "ಒಳ್ಳೇದು, ಈ ಬಗ್ಗೆ ಬೊಂಬಾಯಿ ಫವುಜು ತೆಗೆದುಕೊಂಡು, ಕೆಲವು ದಿವಸದಲ್ಲಿ ಟೀಪೂಸುಲ್ತಾನರ ಮೇಲೆ ಜಗಳಕ್ಕೆ ಹೋಗುವ ಬಗ್ಗೆ ಆ ಕಡೆ ಬರುತ್ತೇವೆ. ಆವಾಗ್ಗೆ ಆ ಕಣ್ಣೂರು ಬೀಬಿಗೆ ತಕ್ಕ ಶಿಕ್ಷೆ ಮಾಡಿಸಬಹುದು. ಇದ ತಿಳಿದು ದಂಡಿಗೆ ಬೇಕಾದ ಸಾಮಾನು ಗಾಡಿ ಎತ್ತುಗಳು ಮುಂತಾಗಿ ಜಮಾಯಿಸಿಕೊಂಡು ಇರುವದು"— ಎಂಬದಾಗಿ ಜವಾಬು ಬರೆದು ಕಳುಹಿಸಿದ್ದರಿಂದ, ಆ ಟಿಲೇರಿ ಸಾಹೇಬರು [ಗಾಡಿ] * ಎಳೆಯುವ ಲಾಯಕಿನ ದೊಡ್ಡ ಎತ್ತುಗಳ (ನ್ನು) ತಲಾಸು ಮಾಡುತ್ತ ಇದ್ದರು.

ಆ ತರುವಾಯ ಕೊಡಗಿನ ದೊರೆಗಳು ವೀರರಾಜೇಂದ್ರ ಒಡೆಯರವರಿಗೆ ಕೆಲವು ಸಾಮಾನು ಬೇಕಾದ್ದರಿಂದ— "ತಲಚೇರಿ ಪೇಟೆಗೆ ಹೋಗಿ, ಕ್ರಯ ಮೂಲವಾಗಿ ಸಾಮಾನು ತೆಗೆದುಕೊಂಡು ಒಳ್ಳೆ ಊಚು ಕುದುರೆ ಸಿಕ್ಕದರೆ ಒಂದು ಕುದುರೆಯನ್ನು ಕ್ರಯಕ್ಕೆ ತೆಗೆದುಕೊಂಡು ಬಾ"— ಎಂಬುದಾಗಿ ತಮ್ಮ ಬಳಿಯಿದ್ದ ಮುತ್ತು ಭಟ್ಟನ ಕಯ್ಯ ಒಂದು ಯಾದಾಸ್ತು ಬರೆದು ತಲಚೇರಿಗೆ ಕೊಟ್ಟು ಕಳುಹಿಸಿದರು. ಅವನು ತಲಚೇರಿ ಪೇಟೆಗೆ [ಹೋಗಿ] † ವಿಚಾರಿಸುತ್ತ ಇದ್ದಲ್ಲಿ, ಈ ಸಮಾಚಾರ ಛೀಫ್ ರಾಬರ್ಟ್ಟ ಟಿಲೇರಿ ಸಾಹೇಬರು ಕೇಳಿ, ಈ ಮುತ್ತುಭಟ್ಟನ (ನ್ನು) ಕರೆ ಕಳುಹಿಸಿ, ಕೊಡಗು ಸಂಸ್ಥಾನದ ವೀರರಾಜೇಂದ್ರ ಒಡೆಯರಿಗೂ ಟೀಪೂಸುಲ್ತಾನರಿಗೂ ಆದ ಜಗಳದ ವೃತ್ತಾಂತ ಯಾವ ಮೇರೆ ಎಂಬದಾಗಿ ಕೇಳಿದಲ್ಲಿ, ಆ ಮುತ್ತುಭಟ್ಟನು ಸವಿಸ್ತಾರವಾಗಿ ಹೇಳಿದಲ್ಲಿ, ಅದನ್ನು ಕೇಳಿ, ಆ ಸರದಾರನು ಬಹಳ ಪಸಂದು ಪಟ್ಟು,— " ಈ ಮೇರೆ ಟೀಪೂಸುಲ್ತಾನರು ಕೊಡಗಿನ ದೊರೆಗಳಿ[ಗೂ] § ಕುಂಪಣಿ ಸರಕಾರಕ್ಕೂ ಶತ್ರುವಾಗಿ ಇದ್ದಾರೆ. ಆದ್ದರಿಂದ ಕೊಡಗಿನ ವೀರರಾಜರಿಗೂ ಇಂಗ್ರೇಜಿ ಬಹದ್ದರರ ಕುಂಪಣಿ ಸರಕಾರಕ್ಕೂ ಮಿತ್ರತ್ವ ವಾಂಛಲ್ಯವಿಟ್ಟು ನಡೆಯ-ಬೇಕೆಂಬ ಅಪೇಕ್ಷೆ ನಮಗೆ ಇದೆ. ಆದು ಕಾರಣ

---

* ಬ ದಂಡಿಗೆ ಬೇಕಾದ ಕೆಲವು ಸಾಮಾನ ವಿಚಾರಿಸಿ, ತರಿಸಿ, ಜಮಾಯಿಸುತ್ತ ಇದ್ದಲ್ಲಿ, ಮುಳೆಯಾಳದಲ್ಲಿ ಇರುವ ಎತ್ತುಗಳು ಗಿಡ್ಡರಾಶಿಯಾಗಿ ಗಾಡಿ ಯೆಳೆಯುವ ಲಾಯಕು ಅಲ್ಲವಾದುದರಿಂದ, ಗಾಡಿ

† ಬ ಹೋಗಿ ಆ ಯಾದಾಸ್ತು ಮೇರೆ ಸಾಮಾನು .

§ ಬ ಗೆ ಶತ್ರುವಾಗಿದ್ದಾರಷ್ಟೇ. ಅದೇ ಮೇರೆಗೆ ಅವರು ಇಂಗ್ರೇಜಿ

ದೊರೆಗಳಿಗೆ ಬೇಕಾದ ಸಾಮಾನು ಸರಂಜಾಮು ಕುದುರೆ ಸಹ ಅವರು ನಿನ್ನ ಕಯ್ಯಲ್ಲಿ ಯಾದಾಸ್ತು ಬರೆಸಿಕೊಟ್ಟಿರುವ ಮೇರೆ ನಾವು ತರಿಸಿಕೊಡುತ್ತೇವೆ. ನಮ್ಮಲ್ಲಿ ಫಿರಂಗಿ ಗಾಡಿ ಎಳೆಯುವ ಬಗ್ಗೆ ಮಲ್ಯಾಳ ಪ್ರಾಂತ್ಯದಲ್ಲಿ ದೊಡ್ಡ ಎತ್ತುಗಳು ಸಿಕ್ಕುವುದಿಲ್ಲ. ಅಲ್ಲಿ ದೊಡ್ಡದಾಗಿ ಇರುವಂತಾ ಎತ್ತುಗಳ ವಿಚಾರಿಸಿ, ಕುಂಪಣಿಸರಕಾರಕ್ಕೆ ಕಳುಹಿಸಿಕೊಟ್ಟರೆ ಉಪಕಾರವಾದೀತು"— ಎಂದು ಮುತ್ತುಭಟ್ಟನ ಸಂಗಡ [ಹೇಳಿ]* ಮಹಾರಾಜರಿಗೆ ದೋಸ್ತಿ ಕಾಗದವನ್ನು ಬರೆಸಿ ಮುತ್ತುಭಟ್ಟನ ಕೈಲಿ ಕೊಟ್ಟು, ತಲಚೇರಿಯಿಂದ ಕಲಿಸಂದ ೪೮೯೨ ನೇ ಸಾಧಾರಣ ಸಂವತ್ಸರದ ಚೈತ್ರಮಾಸದಲ್ಲಿ ಕಳುಹಿಸಿದ್ದರಿಂದ, ಆ ಕಾಗದವನ್ನು ತಂದು ಒಪ್ಪಿಸಿ, ಅವರು ಹೇಳಿದ ಬಾಯಿಮಾತು ಸಹ ವಿಸ್ತಾರವಾಗಿ ಶ್ರುತಪಡಿಸಿದಲ್ಲಿ, ಆ ಮಾತು ಕೇಳಿ, ರಾಜರಿಗೆ ಕುಂಪಣಿ ಇಂಗ್ರೇಜಿ ಬಹದ್ದರವರ ದೋಸ್ತಿ ಬೆಳೆಸಬೇಕೆಂಬ ಮೋಹ ಹುಟ್ಟಿ, "ಸೂರ್ಯಚಂದ್ರಾದಿಗಳು ಇರುವ ಪರಿಯಂತರಕ್ಕೂ ಕುಂಪಣಿ ಇಂಗ್ರೇಜಿ ಬಹದ್ದರವರ ಸರಕಾರಕ್ಕೂ ನಮ್ಮ ಸಂಸ್ಥಾನಕ್ಕೂ ಮಿತ್ರತ್ವ ಸ್ಥಿರವಾಗಿ ನಡೆದು ಬರಬೇಕೆಂಬುದಾಗಿ ಭಾಷಾಪತ್ರಿಕೆ ಎರಡು ಕಡೆಯಿಂದಲೂ ಬರೆದು ಎರಡು ಕಡೆಯಲ್ಲೂ ಮಡಗಬೇಕೆ"ಂಬದಾಗಿ ಬಾಯಿಮಾತಾಗಿಯೂ ಹೇಳಿ, ಅವರ ಕಾಗದಕ್ಕೆ ಜಬಾಬು ಸಹ ಬರೆದು, ಮುತ್ತುಭಟ್ಟನ ಕೈಲಿ ಕೊಟ್ಟು ಕಳುಹಿಸಿದಲ್ಲಿ, ಅವನು ರಾಬರ್ಟ್ಟು ಟಿಲೇರಿ ಸಾಹೇಬರ ಬಳಿಗೆ ಹೋಗಿ ರಾಜರು ಹೇಳಿಕಳುಹಿಸಿದಂಥ ಬಾಯಿಮಾತು ಯಾವತ್ತು ವಿವರವಾಗಿ ಆ ಸಾಹೇಬರಿಗೆ ತಿಳಿಸಿ, ಆ ಕಾಗದವನ್ನು ಅವರಿಗೆ ಕೊಟ್ಟಲ್ಲಿ, ಅದಕ್ಕೆ ಟಿಲೇರಿ ಸಾಹೇಬರು ಮುತ್ತುಭಟ್ಟನ ಸಂಗಡ— "ಈ ವಿವರ ಯಾವತ್ತೂ ಬೊಂಬಾಯಿ ಸಂಸ್ಥಾನದಲ್ಲಿರುವ ಗವುನರ್ ರಾಬರ್ಟ್ಟು ಅಬ್ರಕರಂಬಿ ಸಾಹೇಬರಿಗೆ ಬರೆದು ಕಳುಹಿಸಿ, ಇದಕ್ಕೆ ಜಬಾಬನ್ನೂ ದೊರೆಗಳಿಗೆ ಬೇಕಾದ ಕುದುರೆ ಸಹ ಅವಲ್ ಮೊಸಮಿನಲ್ಲಿ ಬೊಂಬಾಯಿಂದ

---

* ಬ ಬಾಯಿಮಾತಿನಿಂದ ಹೇಳಿ

ಮುತ್ತುಭಟ್ಟನಸಂಗಡ ಹೇಳಿದ್ದು— ಈ ಪ್ರಕಾರೆ ಅವರು ಬಾಯಿಮಾತಿನಿಂದ ಹೇಳಿ ಕಳುಹಿಸಿದ್ದರಿಂದಲೂ, ಕಾಗದ ಬರೆದು ಕಳುಹಿಸಿದ್ದರಿಂದಲೂ, ನಮ್ಮ ಮನಸ್ಸಿಗೆ ಸಮ್ಮತವಿಲ್ಲ. ನಮಗೂ ಕುಂಪಣಿ ಇಂಗ್ರೇಜಿ ಬಹಾದರ ಸರಕಾರಕ್ಕೂ ಸಾಕೋದ್ಧಾರವಾಗಿ ಮಿತ್ರತ್ವ ನಡೆದು ಬರಬೇಕೆಂಬ ಮೋಹ ನಮಗೆ ಬಹಳ ಇದೆ. ಅವರಿಗೂ ಈ ಮೇರೆದ್ದರೆ, ನಾವು ಅದರು ಕೂಡಿ ಬೇಟಿಯಾಗಿ

ತರಿಸಿ ಕಳುಹಿಸಬಹುದು. ಈಗ ನಮಗೆ ಅಗತ್ಯ ಬೇಕಾದ ಫಿರಂಗಿ ಗಾಡಿ ಎಳೆಯುವ ಎತ್ತುಗಳನ್ನು ಜಮಾಯಿಸಿದಲ್ಲಿ ತರಿಸಿಕೊಂಡೇವು"— ಎಂಬದಾಗಿ ಹೇಳಿ ಪ್ರತಿ ಜವಾಬು ಬರೆಸಿ ಮುತ್ತುಭಟ್ಟನ ಕೈಲಿ ಕಳುಹಿಸಿದ್ದರಿಂದ, ಅವನು ಬಂದು ಆ ಸರದಾರನು ಹೇಳಿದ ಮೇರೆ ಬಾಯಿ ಮಾತು ಯಾವತ್ತು ಶ್ರುತಪಡಿಸಿ, ಆ ಕಾಗದವನ್ನು ಕೊಟ್ಟಲ್ಲಿ, ವೀರರಾಜೇಂದ್ರ ಒಡೆಯರು ಆ ವಿವರ ಯಾವತ್ತು ತಿಳಿದು ಬಹಳ ಸಂತೋಷಪಟ್ಟು, ಗಾಡಿ [ಎತ್ತು] § ಗಳು ಕೊಡಗಿನ ಸೀಮೆಯಲ್ಲಿ ಸಿಕ್ಕದ್ದರಿಂದ ಟೇಪೂಸುಲ್ತಾನರ ಕಡೆ ಎತ್ತುಗಳು ಇದ್ದಂಥ ಸ್ಥಳವನ್ನು ಗೊತ್ತುಪಡಿಸಿ, ಪ್ರಯತ್ನ ಮಾಡಿ, ಅಲ್ಲಿಂದ ೮೦೦ ಎತ್ತು ಪರಿಯಂತರ ತರಿಸಿ, ಅದರಲ್ಲಿ ಒಳ್ಳೇ ಅನುವಾದಂಥ, ಗಾಡಿ ಎಳೆಯುವಂಥ [೫೦೦ ಎತ್ತುಗಳನ್ನು ಚುನಾಯಿಸಿ ತೆಗೆದುಕೊಂಡು] = ಉಳಿದ ಎತ್ತುಗಳನ್ನು ರೈತರಿಗೆ ಹಂಚಿಕೊಟ್ಟು, ಈ ವಿವರ ಟಿಲೇರಿ ಸಾಹೇಬರಿಗೆ ಬರೆದು ಕಳುಹಿಸಿದಲ್ಲಿ, ಅಲ್ಲಿಂದ ಸಿಪಾಯಿಗಳು ಬೇಗಾರಿ ಜನರ ಸಹ ಒಬ್ಬ ಇಂಜಿನೀರು ಸರದಾರನ ಸಂಗಡ ಕೂಡಿಸಿ ಕಳುಹಿಸಿದ್ದರಿಂದ, ಅವರು ಬಂದಲ್ಲಿ, ವೀರರಾಜೇಂದ್ರ ಒಡೆಯರವರು ಆ (ಯ್) ದು ಮಡಗಿಸಿ ಇರುವಂತಾ ಎತ್ತುಗಳನ್ನು ಅವರ ತಾಬೆಗೆ ಕೊಟ್ಟು ಕಳುಹಿಸಿದರು. ಆ ಬಳಿಕ ಟಿಲೇರಿ ಸಾಹೇಬರು ದೊರೆಗಳಿಗೆ ಬರೆಸಿ ಕಳುಹಿದ ಕಾಗದದಲ್ಲಿ— "ತಾವು ಹೇಳಿದ ಪ್ರಕಾರ ಭಾಷಾಪತ್ರಿಕೆ ಬರೆದು ಕೊಡತಕ್ಕದ್ದಕ್ಕೆ ಬೊಂಬಾಯಿಂದ ನಮಗೆ ಹುಕ್ಕುಂ ಬಂದು ಇದೆ. ಅದರಿಂದ ಇಲ್ಲಿಂದ ಒಂದು ಕುಂಪಣಿ ಸಿಪಾಯಿಗಳು, ನಿಶಾನಿ ಸಹ ಕಪ್ತೈನ್ ಬ್ರೌನ್ ಸಾಹೇಬ ಎಂಬ ಸರದಾರರನ್ನು ಕಳುಹಿಸಿ ಇದ್ದೇವೆ. ತಾವು ಇಲ್ಲಿಗೆ ಬಂದು ತಮ್ಮ ಮುಲಾಕತ್ತಿನ ಫಾಯಿದೆಯಿಂದ ಸಂತೋಷಪಡಿಸಬೇಕೆ"ಂಬದಾಗಿ ಬರೆದು ಕಳುಹಿಸಿ ಇದ್ದರು. ಅದೇ ಮೇರೆಗೆ ಆ ಕಪ್ತೈನ್ ಬ್ರೌನ್ ಸಾಹೇಬರು ಬಂದು, ಆ ಕಾಗದವನ್ನು ಕೊಟ್ಟು, ಕೆಲವು ವಿವರ ಬಾಯಿಮಾತಿನಿಂದಲೂ ಹೇಳಿದ್ದರಿಂದ, ವೀರರಾಜರು ಸರ್ವ ಬಗೆಯಲ್ಲೂ ಕುಂಪಣಿ ಇಂಗ್ರೇಜಿ ಬಹದ್ದರರ ಸರಕಾರ ನಂಬಿ, ಆ ಸರದಾರರ ಸಂಗಡ, ಇದೇ ಆಶ್ವೀಜ ಶುದ್ಧ ವಿಜಯದಶಮೀ ದಿವಸ ಕೊಡಗಿನಿಂದ ಹೊರಟು, ತಲಚೇರಿ ಕೋಟೆಗೆ

---

§ ಬ ಎಳೆಯುವಂಥ ಎತ್ತು

= ಬ ಎತ್ತು ಅಯ್ಯೂಕ್ತಿನತ್ತ್ಯದನ್ನು ವಿಂಗಡವಾಗಿ ಇಟ್ಟು

ಹೋಗಿ, ದೊಡ್ಡ ದೊಡ್ಡ ಸರದಾರರ ಯಾವತ್ತೂ ಕಂಡು, ಭೇಟಿ ಆಗಿ, ದೋಸ್ತಿ ಪ್ರಸ್ತಾಪವನ್ನು ಮಾಡಿ, ಭಾಷಾಪತ್ರಿಕೆಯನ್ನು ಪೂರ್ವೋತ್ತರವಾಗಿ ಮಾತನಾಡಿ, ಒಪ್ಪಿ, ಉಭಯ ಕಡೆಯಿಂದಲೂ † ಭಾಷಾಪತ್ರಿಕೆ ಬರೆಸಿದ ಕ್ರಮವೆಂತೆಂದರೆ—

"ಶ್ರೀ ಇಂಡಿಯ ಪ್ರಾಂತ್ಯಕ್ಕೆ ಬಹುಮಾನಪಟ್ಟ, ಇಂಗ್ರೇಜಿ ಕುಂಪಣಿ ಹೆಸರಿಗೆ ತಲಚೇರಿ ಕೋಟೆ ಮ್ಯೈಯೊರು ರಾಬರ್ಟ್ ಟಿಲೆರು, ಸೆಂಗುಂದಮಾರರು ಕೊಡಗಿನ ಹಾಲೇರಿ ವೀರರಾಜ ಅರಸುಗಳು, ತಮ್ಮ ಒಳಿಗೆ ಒಪ್ಪಿಗೆ ಆಗಿ, ಬರೆದುಕೊಟ್ಟ ನಂಬಿಗೆ ಕಾಗದದ ವಿವರಃ—

ಒಂದನೇ ಕಲಂಃ— ಸೂರ್ಯ ಚಂದ್ರ ಇರುವ ಪರ್ಯಂತರಕ್ಕೂ ಇಕ್ಕರ್ತರ ಕಡೆ ವಿಶ್ವಾಸಕ್ಕೂ ಹೆಚ್ಚುಕಡಮೆ ಬಾರದಂತೆ ನಡೆದು ಬರುವಂಥಾದ್ದಕ್ಕೆ, ಹೆಚ್ಚುಕಡಿಮೆ ಬರಲಿಕ್ಕಿಲ್ಲ

ಎರಡನೇ ಕಲಂಃ— ಟೀಪು ಸುಲ್ತಾನನಿಗೂ, ಅವನ ಕಡೆಯಿರುವ ಪಕ್ಷದವರು ಯಾವತ್ತು, ಎರಡು ಕಡೆಯವರು ಅವರು ನಮಗೆ ಶತ್ರುಯೆಂತ ಭಾವಿಸಿಕೊಂಡು ಬರಬೇಕು. ಇಂಗ್ರೇಜರಿಗೂ ಅವನಿಗೂ ನಡೆದು ಬರುವಂಥ ಲಡಾಯಿಯಲ್ಲು, ಅರಸುಗಳಿಗೆ ಸಮಯ ಸಿಕ್ಕಿದರೆ, ಶತ್ರುವಿಗೆ ತಮ್ಮಿಂದ ಆಗುವಷ್ಟು ನಾಶ ಮಾಡುವದಕ್ಕೆ ಹಾಜರಾಗಿರಬೇಕು. ಬೇರೆ ಕೊಡಗು ಮಲೆ ದಾರಿ ಇಂಗ್ರೇಜರ ಪಾಳಯ ಒಂದು ಸಮಯಕ್ಕೆ ಹೋಗುವಾಗ್ಗೆ ಸನ್ಮತವಿರಬೇಕು. ಯಾತರಿಂದ ಎಂದರೆ, ಟೀಪು ಸುಲ್ತಾನನ ಕಡೆಗೆ ಹೋಗುವ ಸಮಯ ಬಂದರೆ, ಆವಾಗ್ಗೆ ನಮ್ಮ ಪಾಳಯದವರಿಗೆ ರಾತೀಪು ಜೀನಸು, ನಿಮ್ಮ ಊರಲ್ಲಿ ಇರುವಂಥಾದ್ದು ಸಕಾಯ ಕ್ರಯಕ್ಕೆ ಕೊಡಿಸಿ ಸಹಾಯ ಮಾಡಬೇಕು. ಘಟ್ಟದ ಮೇಲೆ ಟೀಪು ಊರಲ್ಲು ನಮಗೂ ಆತಗೂ ಲಡಾಯಿ ಆಗುವಾಗ್ಗೆ, ರಾಜರು ತಮಗೆ ಕೂಡಿದಷ್ಟು ಬಲ ತೆಗೆದುಕೊಂಡು, ಇಂಗ್ರೇಜರ ಕಡೆಯಲ್ಲು ಕೂಡಿಯಿರ ಬೇಕು.

ಮೂರನೇ ಕಲಂಃ— ನಮ್ಮ ರಾಜ್ಯದಲ್ಲಿ ಆಗುವಂಥ ಸರಕು, ಕುಂಪಣಿಗೆ ಆಗುವಂಥಾ ಸರಕು ಮರ್ಯಾದೆಯ ಪ್ರಕಾರ ಸಕಾಯ ಕ್ರಯಕ್ಕೆ ಕುಂಪಣಿಗೆ ಕೊಡುವ ಬಗ್ಗೆ, ಒಪ್ಪಿಗೆ ಆಗಿ ಇದ್ದೇವೆ ಬೇರೆ ಟೋಪಿಕಾರ ಜಾತಿಗೆ ಯಾರಿಗೂ ವ್ಯಾಪಾರ ಮಾಡುವುದಕ್ಕೆ ಒಪ್ಪಿಗೆ ಇಲ್ಲ.

---

† ಈ ಕರಾರಿನ ವಿವರಗಳು ಆ- ಪ್ರತಿಯಲ್ಲಿ ಕಂಡುಬರುವದಿಲ್ಲ.

ನಾಲ್ಕನೇ ಕಲಂ:— ಕುಂಪಣಿಗೆ ಅನ್ಯೋನವಿಡಿದು ನಡೆದು ಬರು ವಂಥ ಅರಸುಗಳ ಪ್ರಕಾರಕ್ಕೆ, ಟೀಪು ಸುಲ್ತಾನನ ಒಂದು ಹುಕುಂ ನಿಮ್ಮ ಮೇಲೆ ನಡೆಯದಂತೆ, ಕುಂಪಣಿಯಿಂದ ಆಗುವಂಥ ಪ್ರಯತ್ನ ಮಾಡಿ, ನಿಮ್ಮನ್ನು ಇರಿಸಿಕೊಳ್ಳುತ್ತೇವೆ. ಟೀಪುಗೂ ನಮಗೂ ಒಂದು ವೇಳೆಗೆ ಒಳ್ಳಿತಾಗಿ ಹೋಗುತ್ತದೆಯಾದರೆ, ತಹಾನಾಮೆ ಬರೆದು ಇಡುವಾಗ್ಗೆ, ಅದರಲ್ಲು, ಕೊಡಗಿನ ರಾಜರು ಇಂಗ್ರೇಜ ಕುಂಪಣಿಗೆ ಅನ್ಯೋನ್ಯವಿಡಿದು ನಡೆದು ಬರುವಂಥಾದ್ದು ಅವರ ಮೇಲೆ ಆತು ಬಂದು ಜೋರಾವರಿಯು ನಡೆಸದಂತೆ ಅದರಲ್ಲಿ ಬರೆಸೇವು.

ಐದನೇ ಕಲಂ:— ರಾಜರಿಗೆ ಒಂದು ಸಮಯಕ್ಕೆ ಇಲ್ಲಿಗೆ ಬರಬೇಕಾದರೆ, ಅವರ ಕುಟುಂಬ ಮುಂತಾಗಿ, ಆ ಊರಲ್ಲಿರುವ ರೈತರ ಕುಟುಂಬ ಮುಂತಾಗಿ, ಘಟ್ಟದ ಕೆಳಗೆ ಬಂದಲ್ಲಿ, ಇಲ್ಲಿಂದ ಒಂದು ಗಾಡದಿ ಶಿಪಾಯಿಗಳ ಕಳುಹಿಸಿಕೊಟ್ಟು. ದಾರಿಮಾರ್ಗದಲ್ಲಿ ಒಂದು ಅಟಕ ಆಗದಂತೆ ತಂದು, ತಲಚೇರಿಯಲ್ಲು ಒಂದು ಮನೆ ಸಹ ಬಿಡಿಸಿ ಕೊಟ್ಟು, ರಾಜಸ್ಥಿತಿ ಸೌಖ್ಯವಾಗುವ ಪರ್ಯಂತರ ರಕ್ಷಣ್ಯ ಮಾಡಿ ನಿಲ್ಲಿಸಿಕೊಳ್ಳುತ್ತಾ ಇದೆ. ಪುನಃ ರಾಜಸ್ಥಿತಿ ಸೌಖ್ಯವಾಗುತ್ತಲೇ ನಿಮ್ಮ ಊರಿಗೆ ಸಂಗಡ ಮನುಷ್ಯರ ಕೂಡಿಸಿ, ಚೆನ್ನಾಗಿ ಕಳುಹಿಕೊಡುವಲ್ಲಿ ಅಂತರವಿಲ್ಲ.

ಈ ಕಾರ್ಯಕ್ಕೆ ಅನ್ಯೋನ್ಯ ನಡೆದು ಬರುವಲ್ಲಿ, ಎಂದಿಗೂ ಹೆಚ್ಚು ಕಡಮೆ ಬಾರದಂತೆ, ಇಕ್ಕರ್ತರಲ್ಲು ಅಂತರ ಬರಲಿಕ್ಕಿಲ್ಲ. ಈ ಕಾರ್ಯಕ್ಕೆ ಎರಡು ಕಡೆಯವರಿಗೂ ಸಾಕ್ಷಿ:— ಶ್ರೀ ದೇವರು, ಸೂರ್ಯ, ಚಂದ್ರ, ಭೂಮಿ ಸಾಕ್ಷಿ. ಸಾಧಾರಣ ಸಂವತ್ಸರದ ಆಶ್ವೀಜ ಬ. ೫ ರಲ್ಲು ತಲಚೇರಿಯಲ್ಲಿರುವಂಥ ವ್ಯೆಯೂರ ರಾಬರ್ಟ ಟೆಲೇರರು ಕುಂಪಣಿ ಹೆಸರಿಗೆ, ಬಂಗಾಳದ ಗೌರ್ನರ ಜನರಲರ ಹೆಸರಿಗೂ, ಮುಂಬಯಿ ಗಾರ್ನರರ ಹೆಸರಿಗೂ, ತಲಚೇರಿಯಲ್ಲು ಇರುವಂಥ ವ್ಯೆಯೂರ ಕೌಂಸಲದಾರರೂ, ಕೊಡಗಿನ ಹಾಲೇರಿ ವೀರರಾಜೇಂದ್ರ ರಾಜರೂ ಒಂದು ಮನಸಾಗಿ, ಈ ವರ್ಷ, ಈ ತಿಂಗಳು ದಿನದಲ್ಲು ಬರೆದು ಇಟ್ಟ ನಿಶ್ಚಯ ಕಾಗದಕ್ಕೆ ನಮ್ಮ ಹೆಸರಲ್ಲು ಗುರುತು ಹಾಕಿ, ಕುಂಪಣಿ ಮೊಹರು ಮಾಡಿ, ಎರಡು ಕಡೆಗೂ ಬರೆದು ಕೊಟ್ಟು ಇದ್ದೇವೆ. ಶ್ರೀ. ಶ್ರೀ. ಶ್ರೀ. ಶ್ರೀ."

ಈ ಮೇರೆ ಉಭಯ ಕಡೆಯಿಂದಲೂ ಎರಡು ಭಾಷಾ ಪತ್ರ ಬರೆಸಿ, ಅದಕ್ಕೆ ಉಭಯ ಕಡೆ ಅರಮನೆ ಮೊಹರ ದಸ್ಕತು ಮಾಡಿ,

ಆದರಲ್ಲು ಒಂದನ್ನು ತಲಚೇರಿಯಲ್ಲು ಮಡಗಿ, ಮತ್ತೊಂದು ವೀರರಾಜೇಂದ್ರ ಒಡೆಯರವರ ಕಯ್ಯ ಕೊಟ್ಟು, ಜನರಾಲ್ ಸಾಹೇಬರು ಕಳುಹಿದ ಕುದುರೆಯನ್ನು ಕೊಟ್ಟು, ಉಭಯ ಕಡೆಯಿಂದಲೂ ಉಡುಗರೆ ಉತ್ಸಾಹವನ್ನು ಮಾಡಿ ಪುನಃ ಮಹಾರಾಜರು ಹೊರಟು ಬರುವಾಗ್ಗೆ, ಅದೇ ಕಪ್ಟಿನ್ ಬ್ರೌನ್ ಸಾಹೇಬರನ್ನೂ ಒಂದು ಕುಂಪಣಿ ಜನರ(ನ್ನು) ಸಹ ರಾಜರ ಸಂಗಡ ಕೂಡಿಸಿಕೊಟ್ಟು ಕೊಡಗಿನ ರಾಜ್ಯಕ್ಕೆ ಕಳುಹಿಸಿಕೊಟ್ಟರು. ಅದೇ ಮೇರೆಗೆ ದೊರೆಗಳವರು ಕೆಪ್ಟಿನ್ ಬ್ರೌನ್ ಸಾಹೇಬರವರು ಸಹ ಬಂದು ಅರಮನೆ ಸೀಮೆಗೆ ತಲಪಿದ ಬಳಿಕ ಆ ಕಪ್ತನ್ ಸಾಹೇಬರು ತಿರುಗಿ ಹೋಗುವಾಗ್ಗೆ ರಾಜರವರ ಕ್ಷೇಮ ಸಮಾಚಾರಕ್ಕೆ ಕಾಗದವನ್ನು ಬರೆಸಿ ತೆಗೆದುಕೊಂಡು ಹೋಗಿ ತಲಚೇರಿ ಕೋಟೆ ಸರದಾರರು ಛೀಫ್ ರಾಬರ್ಟ್ಸು ಟಿಲೇರಿಸಾಹೇಬರಿಗೆ ಕೊಟ್ಟರು.

ಅಷ್ಟರಲ್ಲಿ ಮಡಿಕೇರಿ ಕೋಟೆಯಲ್ಲು ಇರುವ ಟೀಪೂ ಸುಲ್ತಾನರ ಕಡೆ ಮಂದಿಗೆ ರಸ್ತು (ವಗೈರೆ) § ಡೇರಿ ಹೋಗಿ, (ಮಾರ್ಗ) ± ಬಂದಾಗಿ ಹೋದ್ದರಿಂದ, ಅಲ್ಲಿ ಇದ್ದ ಜಾಫರ (ಕು) ಲ್ಲೀ ಬೇಗು ಕಿಲ್ಲೇದಾರನು ಈ ರಸ್ತು ತೀರಿಹೋದ ಪೂರ್ವೋತ್ತರವಾಗಿ ಅರ್ಜಿ ಬರೆದು, ಕಳ್ಳಮಾರ್ಗವಾಗಿ ಟೀಪೂ ಸುಲ್ತಾನರ ಬಳಿಗೆ ಕಳುಹಿಸಿದ್ದರಿಂದ, ಅವರು, ಖಾದರ್‌ಖಾನ್ (ಕೇಸರಿ) * ಸಂಗಡ ಭಾರಿ ಪವುಜನ್ನು ಕೊಡಿಸಿ, ಕೊಡಿಯಾಲದ ಪವುಜುದಾರ [ನತಡಕ] || ಮುಹಮ್ಮದ್ ಹುಸೇನಿ ಬಿಂತುರಿ ರಸ್ತಿನ ಸಾಮಾನು ಸರಂಜಾಮು ಸಹವಾಗಿ ಮಡಿಕೇರಿಗೆ ಕಳುಹಿಸಿದಲ್ಲಿ, ಅದೇ ಮೇರೆ ಖಾದರ್‌ಖಾನ್ [ಕೇಸರಿ] * ಭಾರೀ ಪವುಜು ಸಮೇತ ರಸ್ತು ತೆಗೆದುಕೊಂಡು, ಕೊಡಗಿನ ಸೀಮೆ [ಅರ್ದು] × ಮುಳ್ಳುಸೋಗೆ ಹೊಳೆ ಕಡ ದಾಟಿ, ಈಚೆಗೆ ತಡಿಯಲ್ಲು ಇಳಕೊಂಡಲ್ಲಿ, ಈ ಸಮಾಚಾರವನ್ನು ವೀರ ರಾಜೇಂದ್ರ ಒಡೆಯರವರು ಕೇಳಿ, ಕೊಡಗುಮಂದಿಯನ್ನು ತೆಗೆದುಕೊಂಡು, ಖಾಸಾ ತಾವೇ ಹೊರಟು ಹೋಗಿ, ಆ ರಸ್ತು ಬರುವ ಮಾರ್ಗ

---

§ ಮುಸ್ತೈದೆ

± ಬ ಪಥಮಾರ್ಗ

* ಕೇಸಗಿ

|| ಬ ನತಡಕಾನ್.

× ಬ ಅದರು

ದಲ್ಲಿ ಬೂದಿಚಾವಡಿ ಎಂಬ [ಮಾರ್ಗ] = ದಲ್ಲಿ ಒಡ್ಡು ತಳಿ ಕಟ್ಟಿ, ಲಡಾಯಕ್ಕೆ ಕಾದು ಇದ್ದರು. ಅಷ್ಟರಲ್ಲಿ ಆ ಖಾದರು ಖಾನನು ಪವುಜು ಸಮೇತ ರಸ್ತು ಸಾಗಿಸಿಕೊಂಡು ಮಾರಣೇ ದಿವಸ ಬೆಳಿಗ್ಗೆ ೨॥ ಗಳಿಗೆ ಹೊತ್ತಿನಲ್ಲಿ ಬೂದಿಚಾವಡಿಗೆ ಮುಟ್ಟಿದಲ್ಲಿ, ಜಗಳ ಮಾಡಿ ಆ ಒಡ್ಡಿಗೆ ಹಲ್ಲಾ ಹತ್ತುವದಕ್ಕೆ ಬಂದಲ್ಲಿ, ಕೊಡಗು ಜನಕ್ಕೂ ಆ ಪವುಜಿಗೂ ಹೇರಳ ಲಡಾಯವಾಗಿ, ಕೋವಿ ಗುಂಡಿನ ಲಡಾಯಿ ನಿಂತು ಕೈಬೆರಸಿ ಕತ್ತಿಯಿಂದ ೫ ಗಳಿಗೆ ಪರಿಯಂತರ ಲಡಾಯವಾಗಿ, ಟೀಪೂ ಸುಲ್ತಾನರ ಕಡೆ ೫೦೦ ಜನ ಮೃತವಾಗಿ ೨೦೦ ಜನಕ್ಕೆ ಜಕ್ಕಮಿಯಾಗಿ, ಕಡೆಗೆ ಪೆಟ್ಟು ತಡೆಯಲಾರದೆ ಓಡಿಹೋಗಿ, ಖಾದರ್‌ಖಾನ [ಕೇಸರಿ] ‖ ಯು ಕೆಲಮಂದಿ ತೆಗೆದುಕೊಂಡು ಪಚಾಡಿಯಲ್ಲು ನಿಂತು ಇದ್ದಲ್ಲಿಗೆ ಕೂಡಿದರು. ಆ ಖಾದರಖಾನನು ಈ ಗಾಬರಿಯಾಗಿ ಬಂದ ಮಂದಿಗೆ ಸಮದಾಯಿಸಿ, ಯಾವತ್ತೂ ದಂಡು ಒಟ್ಟುಗೂಡಿಕೊಂಡು, ಅಲ್ಲಿಗೆ ಸಮೀಪದಲ್ಲಿ ಇದ್ದ ಚಿಕ್ಕದು ಒಂದು ಗುಡ್ಡೆ ಹತ್ತಿ, ಅದರಲ್ಲು ದಂಡು ಇಳಕೊಂಡು, ದಂಡಿನ ಸುತ್ತ ರಸ್ತು ತುಂಬಿದಂತ (ಹ) ಗೋಣಿಗಳನ್ನು ಕೋಟೆ ಕಟ್ಟಿದ ಹಾಗೆ ನಿಟ್ಟು ವಟ್ಟಿ, ಅದರ ಆಶ್ರಯದ ಒಳಗೆ ಹೊಕ್ಕೊಂಡು, ಸಾಯಂಕಾಲ ಪರ್ಯಂತರ ಜಗಳ ಮಾಡಿದನು ಆ ಬಳಿಕ [ದಂಡನ್ನು] × ಪುನಃ ಹೋಗದಂತೆ ದಂಡಿನ ಸುತ್ತಲೂ ದೊರೆಗಳು ತಮ್ಮ ಕಡೆ ಕೊಡಗು ಮಂದಿಯನ್ನು ಮುತ್ತಿಗೆ ಹಾಕಿಸಿದಲ್ಲಿ, ಕೊಡಗು ಮಂದಿಗೆ ಗೊತ್ತುಗಾರರಾಗಿ ಇದ್ದವರು ರಾಜರ ಬಳಿಗೆ ಬಂದು,—"ನಮಗೆ ಅಪ್ಪಣೆ ಆದರೆ ಈ ರಾತ್ರೆ ಬೆಳಗಿನ ಜಾವದಲ್ಲಿ ಅವರ ದಂಡಿನ ಮೇಲೆ ಬಿದ್ದು ಒಂದೊಂದು ಕೋವಿ ಗುಂಡು ಇಟ್ಟು, ಆ ಮೇಲೆ ಕತ್ತಿಯಿಂದ ಕಡಿದು ಅವರ ದಂಡನ್ನು ಮುಳುಗಿಸುತ್ತೇವೆ. ಆ ದಂಡಿನಲ್ಲು ಇರುವಂತಾ ಸಾಮಾನು ಸರಂಜಾಮು ಏನು ಇದ್ದಾಗ್ಗೂ ಲಡಾಯ ಮಾಡುವ ಮಂದಿಗೆ ಮಾಫು ಕೊಡಿಸಬೇಕು."— ಎಂಬದಾಗಿ ಅರಿಕೆಮಾಡಿ ಅಪ್ಪಣೆ ಕೇಳಿದಲ್ಲಿ, ಆ ಮಾತಿಗೆ ರಾಜರು ಒಡಂಬಟ್ಟು ಅಪ್ಪಣೆ ಕೊಡಿಸಿದ ವಿವರಃ— "ಪ್ರಾಕು ನಾವು ಟೀಪು ಸುಲ್ತಾನರ ಇಲಾಖೆ ಪಿರಿಯಾಪಟ್ಟಣದಲ್ಲು ಇರುವಾಗ್ಗೆ, ಒಂದು ದಿನ ಪಿರಿಯಾಪಟ್ಟಣದ [ಪ್ರಾಂತ್ಯ] ± ಕ್ಕೆ ಹೋಗಿ ಬೇಟೆ ಆಡಿ

= ಬ ಜಾಗ

‖ ಬ ಕೇಸಗಿ

× ಬ ದಂಡಿನ ಜನ

± ಬ ಪಾರ್ಶ್ವಾಂಕ್ಕೆ

ಸಾಯಂಕಾಲಕ್ಕೆ ಪುನಃ ಹೋಗುವದಕ್ಕೆ ಸಂದರ್ಭ ಆಗದೆ ಉಳಕೊಂಡು ಇದ್ದಲ್ಲಿ, ಖಾದರಖಾನ [ಕೇಸರಿ] ಯು ನಮ್ಮ ಬಳಿಗೆ ಬಂದು, ನಮ್ಮನ್ನು ಕರಕೊಂಡು ಕುಶಾಲ್‌ನಗರಕ್ಕೆ ಹೋಗಿ, ಬೆಳಿಗ್ಗೆ ಸಾಯಂಕಾಲ ಎರಡು ಹೊತ್ತಿನ ಅಡಿಗೆಗೆ ಸೋಬಸ್ಕಾರವನ್ನು ಕೊಟ್ಟು ಇದ್ದಾನೆ. ಈ ಸಮಯದಲ್ಲಿ ನಾವು ಅವನ ಪ್ರಾಣ ಉಪಕಾರ ಮಾಡಬೇಕಾದ್ದರಿಂದ, ನೀವು ಹೇಳಿದ ಹಾಗೆ ಬೆಳಗಿನ ಜಾವದಲ್ಲಿ ಟೀಪೂ ಸುಲ್ತಾನರ ಪವುಜಿನ ಮೇಲೆ ಬಿದ್ದು ನಿಗ್ರಹಿಸಿ, ಆ ಖಾದರಖಾನ [ಕೇಸರಿ] † ಯೆಂಬ ಸರದಾರನನ್ನು ಪ್ರಾಣ ಬೆರಸಿ ನಮಗೆ ತಂದುಕೊಟ್ಟರೆ, ಆ ದಂಡಿನಲ್ಲಿ ಇದ್ದ ಸಾಮಾನು ಯಾವತ್ತೂ ನಿಮಗೆ ಮಾಫು ಕೊಡಿಸಬಹುದು."—ಎಂಬದಾಗಿ ಹೇಳಿದಲ್ಲಿ, ಆ ಗೊತ್ತುಗಾರರು ಹೇಳಿಕೊಂಡದ್ದು:-- "ನಾವು ಕತ್ತಲೆ ವೇಳೆಯಲ್ಲಿ ಹೋಗಿ ಅವರ ದಂಡಿನ ಮೇಲೆ ಬಿದ್ದು ಕೈಬೆರಸಿ ಕಡಿಯುವಾಗ್ಗೆ ಅವನ ಸರದಾರ ಖಾದರಖಾನ [ಕೇಸರಿ] † ಎಂತವ [ನು] ಎಂಬದಾಗಿ ನೆಪ್ಪು ಕಾಣತಕ್ಕದ್ದು ಹೇಗೆ? ಕಾಣದೆ ಮೋಸವಾಗಿ ಹೋದರೆ ಹೋಯಿತು. ಜೀವ ಸಹಿತ ಈ ಕಡೆ ಮುಂದಿಗೆ ಕೈಗೆ ಸಿಕ್ಕಿದರೆ ತಮಗೆ ತಂದು ಒಪ್ಪಿಸುತ್ತೇವೆ. "— ಎಂಬದಾಗಿ ಅರಿಕೆ ಮಾಡಿದಲ್ಲಿ, ಈ ಮಹಾರಾಜರು ಒಪ್ಪದೆ,— "ಹಾಗಾದರೆ ನಾವು ಮೂರಾವರ್ತಿ ಖಾದರಖಾನನ ಹೆಸರು ಹಿಡಿಸಿ ಕರೆಸುತ್ತೇವೆ. ಅವನ ಅದೃಷ್ಟ ಚೆನ್ನಾಗಿ ಇದ್ದು ಬಂದರೆ ಸರಿ. ಇಲ್ಲದಿದ್ದರೆ ನೀವು ಹೇಳಿದ ಮೇರೆ ನಾವು ಒಪ್ಪಿ ಇದ್ದೇವೆ. ಹಾಗೆ ಮಾಡಿ"— ಎಂಬದಾಗಿ ಅಪ್ಪಣೆ ಕೊಟ್ಟು, ಆ ಬಳಿಕ ಎರಡು ಜನ ಹತ್ತರ ಇದ್ದವರನ್ನು— "ಅವರ ದಂಡಿನ ಸಮೀಪಕ್ಕೆ ಹೋಗಿ, ಪ್ರಾಕು ದೊರೆಗಳು ಶಿಕಾರಿಗೆ ಬಂದಿದ್ದಾಗ್ಗೆ ಅಡಿಗೆ ಸೋಪಸ್ಕರ ಕೊಟ್ಟು ಉಪಕಾರ ಮಾಡಿ ಇದ್ದೀರಿ. ಆದ್ದರಿಂದ ನಿಮಗೆ ಪ್ರಾಣ ಉಪಕಾರ ಮಾಡಬೇಕೆಂಬದಾಗಿ ಮೋಹ ನಮ್ಮ ದೊರೆಗಳಿಗೆ ಹುಟ್ಟಿ ಇದೆ. ಈ ಸಮಯದಲ್ಲಿ ನೀವು ಶರಣಾಗತರಾಗಿ ದೊರೆಗಳ ಬಳಿಗೆ ಬಂದರೆ ಕ್ಷೇಮವಿದೆ. ಇಲ್ಲದಿದ್ದರೆ ಎರಡು ಗಳಿಗೆ ಒಳಗೆ ನಿಮ್ಮ ಪ್ರಾಣ ವ್ಯರ್ಥವಾಗುತ್ತದೆ."— ಎಂಬದಾಗಿ ಕರೆದು ಹೇಳುವಂತೆ ಅಪ್ಪಣೆ ಕೊಟ್ಟು ಕಳುಹಿಸಿದಲ್ಲಿ, ಆ ಜನ ಹೋಗಿ ಅದೇ ಮೇರೆ ಕರೆದು ಹೇಳಿ

† ಬ ಕೇಸಗಿ

ದಲ್ಲಿ, ಈ ಮಾತು ಕೇಳಿದಾಕ್ಷಣ ಖಾದರಖಾನ [ಕೇಿರಿ] = [ತಾಡು] || ಖಾನ, ಮುಹಮ್ಮದು ಹುಸೇನ ಬಿಂತೂರಿ, ಅಮುಲ್ದಾರ ರಜಬಲ್ಲಿ ಸಹ ಈ ನಾಲ್ವರೂ ತಮ್ಮ ದಂಡಿನಿಂದ ಹೊರಟು, ವೀರರಾಜೇಂದ್ರ ಒಡೆಯು ರವರಿಗೆ ಶರಣಾಗತರಾಗಿ ಬಂದು ಕಂಡಲ್ಲಿ, ಆ ಖಾದರಖಾನನಿಗೆ ನಮ್ಮ ದೊರೆಗಳು ಅಪ್ಪಣೆ ಕೊಟ್ಟದ್ದು— "ಒಂದು ದಿವಸ ನೀನು ನಮಗೆ ಉಪ ಕಾರ ಮಾಡಿ ಇದ್ದೀಯಷ್ಟೆ! ಅದರ ಬದಲಿಗೆ ನಿಮಗೂ ನಿಮ್ಮ ನಂಟ ರಿಷ್ಟರಿಗೂ ಮಾನ ಪ್ರಾಣ ಉಳಿಸಿ ಬಿಟ್ಟು ಕಳುಹುತ್ತ ಇದ್ದೇವೆ. ಉಳಿಕೆ ಟೀಪೂ ಸುಲ್ತಾನರ ಕಡೆ ಪವುಜನ್ನು ನಿಗ್ರಹಿಸಿ, ರಸ್ತು ಸಾಮಾನು ಯಾವತ್ತೂ ನಮ್ಮ ಮಂದಿಗೆ ಮಾಫು ಕೊಡಿಸುತ್ತೇವೆ."— ಎಂಬದಾಗಿ ಅಪ್ಪಣೆ ಕೊಟ್ಟಲ್ಲಿ, ಆ ಮಾತಿಗೆ ಖಾದರಖಾನನು ಅರಿಕೆ ಮಾಡಿಕೊಂಡದ್ದು- "ಈ ದಂಡು ರಸ್ತು ಸಹ ಅತಂತ್ರವಾದ ಮೇಲೆ ಟೀಪೂ ಸುಲ್ತಾನರ ಬಳಿಗೆ ಯಾವ ಮೇರೆ ಹೋಗಬೇಕು? ಇಲ್ಲಿಂದ ನನ್ನ ಪ್ರಾಣ ಉಳಿಸಿಕೊಂಡು ಹೋದಾಗ್ಲೂ ನನ್ನ ಕುಟುಂಬ ಮಕ್ಕಳ ಪ್ರಾಣ ಸಹಿತ ಉಳಿಸಲಿಕ್ಕಿಲ್ಲ. ಈ ಬಗ್ಗೆ ಪ್ರಾಣ ಉಳಿಸಬೇಕೆಂಬುದಾಗಿ ದಯವಿದ್ದರೆ, ದಂಡು ಸಾಮಾನು ಸರಂಜಾಮು ಸಮೇತ ಪ್ರಾಣ ಉಳಿಸುವ ಮಾರ್ಗದಿಂದ ಬಿಟ್ಟುಕೊಟ್ಟರೆ, ಈ ರಸ್ತನ್ನು ಮಡಿಕೇರಿ ಕೋಟೆಗೆ ಹಾಕಿ ಪುನಃ ಪವುಜು ಸಮೇತ ಪಟ್ಟ ಣಕ್ಕೆ ಹೋದೇವು. ಈ ಮಾನ ಪ್ರಾಣ ಉಳಿಸಿದ ಉಪಕಾರ ನನ್ನ ಜೀವ ಇರುವ ಪರಿಯಂತರ ಮರೆಯಲಿಕ್ಕೆ ಇಲ್ಲ"— ಎಂಬದಾಗಿ ಅರಿಕೆ ಮಾಡಿ ಕೊಂಡದ್ದರಿಂದ, ಆ ಮಾತನ್ನು ರಾಜರು ಚಿತ್ತಕ್ಕೆ ತಂದುಕೊಂಡು, ಕಾರೇ ಕಾರ ಕೊಂಗೇರ ಅಯ್ಯಣ್ಣಗೆ ಅಪ್ಪಣೆ ಕೊಟ್ಟ ವಿವರಃ—"ನೀನು ದಂಡಿನ ಸಂಗಡ ಮಡಿಕೇರಿ ಪರಿಯಂತರ ಮಾರ್ಗದ ಒಡ್ಡು ತಳಿಗಳಲ್ಲಿ ಇರುವ ಕಾವಲು ಮಂದಿ ಏನಾದರೂ ಅಡ್ಡಿ ಹರಕತ್ತು ಮಾಡದೆ ಬಿಡುವಂತೆ ತಾಕೀತು ಮಾಡಿಕೊಂಡು, ಹೋಗಿ, ಕಿಲ್ಲೆದಾರ ಜಾಫರಲ್ಲಿ ಬೇಗು ನಮ್ಮ ಸಂಗಡ ಜಗಳ ಮಾಡತಕ್ಕವನೋ? ಅದಲ್ಲ, ಸಲ್ಲಾಮಾಡಿ ಕೊಂಡು ಕೋಟೆ ಬಿಟ್ಟು ಈ ದಂಡಿನ ಸಂಗಡ ಹೋಗತಕ್ಕವನೋ? ಎಂಬ ದಾಗಿ ಅವನ ಸಂಗಡ ಕೇಳಿ, ಅಲ್ಲಿಂದ ನಮ್ಮ ಗಡೀ ಮುಳ್ಳುಸೋಗೇ

ಬ = ಕೆಸಗಿ

ಬ || ನಕ್ಷತ

ಹೊಳೆ ಕಡವಿನ ಆಚೆಗೆ ಈ ದಂಡನ್ನು ದಾಟಿಸಿಬಿಟ್ಟು, ಆ ವಿವರ ಅರಿಕೆ ಮಾಡು"—ಎಂಬದಾಗಿ ಅಪ್ಪಣೆ ಕೊಟ್ಟಲ್ಲಿ, ಆ ಅಯ್ಯಣ್ಣನು ಅದೇ ಮೇರೆ ಆ ದಂಡಿನ ಸಂಗಡ ಇದ್ದುಕೊಂಡು, ರಸ್ತಿನ ಸಾಮಾನನ್ನು ನಿಗಮಾನಿಯಿಂದ ಮಡಿಕೇರಿಗೆ ತಲಪಿಸಿ, ದೊರೆಗಳು ಅಪ್ಪಣೆಕೊಟ್ಟ ಇದ್ದ ವಿವರವನ್ನು ಆ ಜಾಫರಲ್ಲಿ ಬೇಗನ ಸಂಗಡ ಹೇಳಿದಲ್ಲಿ, ಆತನು ಹೇಳಿದ್ದು— "ಕೋಟಿಯಲ್ಲು ಇದ್ದ ರಸ್ತು ಯಾವತ್ತೂ [ಮುಗೀತು ಎಂದು] § ನಾಳೆ ಕೋಟಿಯನ್ನು ಒಪ್ಪಿಸಿ [ಕೊಡ] = ಬೇಕೆಂಬ ಯೋಚನೆಯೊಳಗೆ ಇದ್ದೆನು. ಅಷ್ಟರಲ್ಲಿ ದೊರೆಗಳು ಖಾದರಖಾನನ ಮೇಲೆ ದಯವಿಟ್ಟು ರಸ್ತಿನ ಸರಂಜಾಮು ತಾವೇ ಮಡಿಕೇರಿ ಕೋಟೆಗೆ ತಲಪಿಸಿ ಇದ್ದಾರೆ. ಈ ಮೇರೆ ರಸ್ತು ಇದ್ದಂತೆ ಕೋಟೆ ಒಪ್ಪಿಸಿ ಬಿಟ್ಟು ನಾವು ಟೀಪೂಸುಲ್ತಾನರ ಬಳಿಗೆ ಹೋದರೆ, ನಮ್ಮ ಕುಟುಂಬ ಮಕ್ಕಳ ಪ್ರಾಣ ಉಳಿಸಲಿಕ್ಕೆ ಇಲ್ಲ- ಆದ ಕಾರಣ ದೊರೆಗಳ ಅಪ್ಪಣೆ ಆದರೆ ಈ ರಸ್ತು ತೀರುವ ಪರಿಯಂತರ ಇರುತ್ತೇವೆ. ಆ ಬಳಿಕ ಕೋಟೆಯನ್ನು ಒಪ್ಪಿಸಿ, ಅಪ್ಪಣೆ ಕೇಳಿಕೊಂಡು, ನಮ್ಮ ಖಾವಂದರ ಬಳಿಗೆ ಹೋದೇವು ನಮ್ಮ [ಪ್ರಾಣ] ‖ ಉಳಿದೀತೆಂದು ಹೇಳಿಕೊಂಡ ಕಾರಣ, ಆ ಮಾತಿಗೆ ಕೊಂಗೇರ ಅಯ್ಯಣ್ಣನು [ಖಾದರ] * ಖಾನನ ಸಂಗಡ ಪುನಃ ಹೋಗಿ, ಅವರ ದಂಡನ್ನು ಸರಹ[ದ್ದು] ± ದಾಟಿಸಿ ಬಿಟ್ಟು, ತಾನು ಮಹಾರಾಜರ ಬಳಿಗೆ ಬಂದು [ಶ್ರುತ] [] ಪಡಿಸಿದನು. ಅತ್ತಲಾಗಿ ಟೀಪೂಸುಲ್ತಾನರು ಮಹಾ ಕೋಪದಿಂದ ತಮ್ಮ ಯಾವತ್ತೂ ಪವುಜು ತೆಗೆದುಕೊಂಡು ಬೆಟ್ಟ ಕೋಟೆಗೆ ಮೋರ್ಜಾ ಹಾಕಿ, ಲಡಾಯಿ ಮಾಡಿ, ಹಲ್ಲಾ ಹತ್ತಿ, ಆ ಕೋಟೆ ತೆಗೆದುಕೊಂಡು, ಅದರಲ್ಲಿ ಇದ್ದಂತಾ ಪಿರಂಗಿ [ಗಳು] × ಮುಂತಾದ ಸಾಮಾನು ಯಾವತ್ತೂ ಪಟ್ಟಣಕ್ಕೆ ಸಾಗಿಸಿ, ಆ ಕೋಟೆಯನ್ನು [ಅಗೆದು] † ನೆಲ

---

§ ಬ ಮುಗಿದು ಹೋಗಿಯಿತ್ತು. ಇಂದು

= ಬ ಹೋಗ

‖ ಬ ಅರ್ಧಮಾನ ಪ್ರಾಣ

* ಬ ಅಲ್ಲಿ ಇದ್ದ ಆ ಖಾದರ

± ಬ ದ್ದಿನ ಮುಳ್ಳುಸೋಗೆ ಕಡ

[] ಬ ಆ ವಿವರ ಯಾವತ್ತು ಶ್ರುತ

× ಬ ಗಳು ಗುಂಡುಗಳು

† ಬ ಹುಡಿಗುಟ್ಟಿ ಅಗೆದು

ಸಮ ಮಾಡಿ, ಅದಕ್ಕೆ ಸೇರಿದ ಸೀಮೆಯನ್ನು ಲೂಟಾಯಿಸಿ, ಹೇರಳ ಹೆಣ್ಣು ಗಂಡು ಸೆರೆ ಹಿಡಿದು, ಮನೆಗಳಿಗೆ ಬೆಂಕಿಹಾಕಿ, ಪವುಜು ಸಮೇತ ಪಟ್ಟಣ [ಕ್ಕೆ] || ಹೋದರು.

ಆ ಬಳಿಕ ಕೆಲವು ದಿವಸ ಕಳೆದ ಮೇಲೆ, ಬೊಂಬಾಯಿ ಗೌನರ್ ರಾಬರ್ಟ್ಸ್ ಅಬ್ರಾಕರಂಬಿ ಸಾಹೇಬ ಬಹದ್ದರವರು ಪೌಜುಸಮೇತ [ತಲ] = ಚೇರಿಯಲ್ಲು ಇಳಕೊಂಡು, ಕಣ್ಣೂರುಬೀಬಿ ಮಾಡಿದಂಥಾ ಮೋಸದ ವಿವರ [ವನ್ನು ಕೇಳಿ, ಆ] * ಜನರ ಸ್ಥಾನವನ್ನು ತೆಗೆದುಕೊಂಡು ಸ್ಥಾನ ಭ್ರಷ್ಟತ್ವ ಮಾಡಿ ಹಿಡಿದು ಬೊಂಬಾಯಿಗೆ ಕಳುಹಿಸಬೇಕೆಂದು ನಿಶ್ಚಯಿಸಿ, ತಮ್ಮ ಪವುಜು ತೆಗೆದುಕೊಂಡು ಹೋಗಿ, ಕಣ್ಣೂರು ಬಳಿಯಲ್ಲು ಇಳಿದು, ಆ ಜನರಲ್ ಸಾಹೇಬರೂ ರಾಜರೂ ಮಿಲಾಕತ್ತು ಆಗಬೇಕೆಂಬ ಅಪೇಕ್ಷೆಯಿಂದ [ಒಬ್ಬ] † ಸರದಾರ ಒಂದು ಕುಂಪಣಿ ಸಿಪಾಯಿಗಳ ಸಹ ಕಳುಹಿಸಿ [ಕೊಟ್ಟ ಮೇರೆ,] ± ರಾಜರವರು ಕೊಡಗಿನಿಂದ ಹೊರಟು ತಲಚೇರಿಗೆ ಹೋಗಿ ಸೇರಿದರು. ಅಲ್ಲಿಗೆ ಮುಟ್ಟುವದಕ್ಕೆ ಒಂದು ದಿವಸ ಮುಂಚಿತವಾಗಿ ಇಂಗ್ರೇಜಿಯವರ ಪವುಜು ಕಣ್ಣೂರು ಕೋಟೆಯಲ್ಲು ಲಡಾಯಿ ಮಾಡುವಾಗ್ಗೆ, ಟೀಪೂ ಸುಲ್ತಾನರ ಕಡೆ ಆರು ಸಾವಿರ ಜನ, ಕಣ್ಣೂರು ಬೀಬಿ ಕಡೆ ನಾಲ್ಕು ಸಾವಿರ ಜನ ಮಾಪಿಳ್ಳೆಯರು ಸಹ ಪೆಟ್ಟು ತಡೆಯಲಾರದೆ, ಸಲ್ಲಾ ಮಾಡುತ್ತೇವೆಂದು ರಾಜ § (ವಟ್ಟಣ) ನಡೆಸಿ (ದಲ್ಲಿ) = "ಕಣ್ಣೂರು ಕೋಟೆಯಲ್ಲಿ ಇರುವ ಮಾಪಿಳೆಯರು ಬೀಬಿಯು ಸಹ ಇಂಗ್ರೇಜಿ ಬಹದ್ದರ ಸರಕಾರದ ಫೌಜಿಗೆ ದಗಾ ಮಾಡಿ ಇದ್ದಾರೆ. ಅವರು ಈ ಸ್ಥಳದಲ್ಲಿ

|| ಬ ದ ಕಡೆಗೆ

= ಬ ಮುಂಬಾಯಿಂದ ಹೊರಟು ಬಂದು ತಲ

* ಬ ಮೇಲೆ ಸದರೀ ಬರೆದು ಇರುವಂಥಾದ್ದು ಕೇಳಿ ಇಂಥ ಮೋಸ ಮಾಡಿದ

† ಬ ಕರಕೊಂಡು ಬರುವ ಬಗ್ಗೆ ಒಬ್ಬ

± ಬ ದಲ್ಲಿ, ಆ ಸರದಾರನು ಬಂದು, "ಜನರಲ್ ಸಾಹೇಬರು ತಮ್ಮ ಭೆಟ್ಟಿ ಆಗಬೇಕು ಎಂಬುದಾಗಿ ಬಹಳ ಅಪೇಕ್ಷೆಯಿಂದ ಇದ್ದಾರೆ,, ಎಂತ ಹೇಳಿದಲ್ಲಿ,

§ ಬ ವಟ

= ಬ ದಲ್ಲಿ, ಜನರಲ್ ಸಾಹೇಬರು ಹೇಳಿದ್ದು:— ಟೀಪು ಸುಲ್ತಾನರ ಕಡೆ ಜನರು ಅವರ ಸಂಪಾದಿಸಿದಂಥ ಒಡವೆ ಸಹ ಬಿಟ್ಟುಕೊಡುತ್ತೇವೆ; ಹೋಗಲಿ, ಆ

ಇರುವದಕ್ಕೆ ಯೋಗ್ಯರಲ್ಲ. ಅವರ ಸಂಗಡ ನಾವು ಸಲ್ಲಾ ಮಾಡಲಿಕ್ಕೆ ಇಲ್ಲ. ಟೀಪೂಸುಲ್ತಾನರ ಕಡೆಯವರು ಸಂಪಾದಿಸಿದಂತಾ ಒಡವೆ ಆ ಜನರು ಸಹ ಬಿಟ್ಟುಕೊಡುತ್ತೇವೆ. ಈ ಬೀಬಿಯೂ ಮಾಪಿಳ್ಳೆಯರೂ ಸಹ ಬೊಂಬಾಯಿಗೆ ಹಿಡಿದು ಕಳುಹಿಸಿಕೊಡುತ್ತೇವೆ"— ಎಂದು ಜನರಲ್ ಸಾಹೇಬರು ಹೇಳಿದ್ದರಿಂದ, ಆ ಬೀಬಿಯೂ ಆ ಮಾಪಿಳ್ಳೆಯರು ಸಹ ಯೋಚಿಸಿದ್ದು:— "ಟೀಪೂ ಸುಲ್ತಾನರ ಕಡೆ ಜನರು ಸಲ್ಲಾ ಮಾಡಿಕೊಂಡು, ಕೋಟೆ ಇಳಿದು ಪಟ್ಟಣಕ್ಕೆ ಹೋಗುತ್ತಾರೆ. ನಮ್ಮ ಮಾಪಿಳ್ಳೆಯರಿಗೆ ಜೀವಿಸುವುದಕ್ಕೆ ಬಿಡರು. ಮಾಪಿಳ್ಳೆಯರು ಯಾವತ್ತನ್ನು ಇಂಗ್ರೇಜಿಯವರು ಕೊಂದು ಹಾಕಿಯಾರು. ಮಲ್ಯಾಳದಲ್ಲಿ ಇರುವಂಥ ಅರಸುಗಳು ನಾಯಮಾರರು ಮುಂತಾಗಿ ಶತ್ರುಗಳು ಆಗಿ ಇದ್ದಾರೆ. ಕೊಡಗಿನ ದೊರೆಗಳು ಈಗ ತಲಚೇರಿಗೆ ಬಂದು ಇದ್ದಾರೆ. ಪ್ರಾಕು ಅವರ ಹಿರಿಯವರ ದಿವಸದಲ್ಲಿ ಅವರ ಕಡೆ ದಳವಾಯಿಗೆ ನಾವು ಉಪಕಾರ ಮಾಡಿ ಇದ್ದೇವೆ. ಈ ವೇಳೆಯಲ್ಲಿ ನಾವು ಹೇಳಿಕೊಂಡರೆ ನಮ್ಮ(ನ್ನು) ಉಳಿಸಿಕೊಳ್ಳುವದಕ್ಕೆ ಅವರಿಂದ ಆಗುವಷ್ಟು ಉಪಕಾರ ಮಾಡಿಯಾರು"— ಎಂದು ಯೋಚಿಸಿ, ಆ ಬೀಬಿಯು ತನ್ನ ಮಗನನ್ನು ರಾತ್ರೆ ವೇಳೆ ಕಳ್ಳಮಾರ್ಗದಲ್ಲಿ ದೋಣಿ ಹತ್ತಿಸಿ ಕಾರೇಕಾರ ಕುಂಞಾಪಕ್ಕಿ ಎಂಬವನ ಕೂಡಲಿಟ್ಟು, ಕಳುಹಿಸಿಕೊಟ್ಟು "ಇಷ್ಟು ದಿವಸ ನಮ್ಮ ಮಗನಾಗಿ ಇದ್ದ(ನು). ಈಗ ತಮ್ಮ ಮಡಲಿಗೆ ಹಾಕಿದೇನೆ. ತಾವು ಆರೈಕೆಮಾಡಿ [ಕೊಂಡು ಕೀರ್ತಿ ಸಂಪಾದಿಸಿಕೊಳ್ಳಬೇಕೆ"ಂದು] + ಕೊಡಗಿನ ರಾಜರ ಬಳಿಗೆ ಹೇಳಿ ಕಳುಹಿಸಿಕೊಟ್ಟ ಪ್ರಯುಕ್ತ §[ರಾಜರು ಸಮ್ಮತಿಪಟ್ಟು, ಪ್ರತ್ಯುಪ

\+ ಬ ಕೊಂಡರೆ ಕೀರ್ತಿ ತಮ್ಮದು ಇದೆ' ಎಂಬುದಾಗಿ ಆ ಕುಂಞಾಪಕ್ಕಿ ಸಂಗಡ ಬಾಯಿಮಾತಿನಿಂದ ಹೇಳಿ,

§ ಬ ಅವನು ಅದೇ ಮೇರೆ ಆ ಬೀಬೀ ಮಗನನ್ನು ಕರೆದುಕೊಂಡು ತಲಚೇರಿಗೆ ಬಂದು, ಮೂಸೆ ಬೇಹಾರಿಯನ್ನು ಕೂಡಿಕೊಂಡು, ವೀರರಾಜೇಂದ್ರ ಒಡೆಯರವರು ಇಳಿದು ಇದ್ದ ಹಯಾಜನ ಮನೆಗೆ ಬಂದು, ಆ ಬೀಬಿ ಹೇಳಿದ ವಿವರ ಯಾವತ್ತು ಹೇಳಿಕೊಂಡಲ್ಲಿ, ಪ್ರಾಗು ನಮ್ಮ ಹಿರಿಯವರ ಕಾಲದಲ್ಲಿ ದಳವಾಯಿಗೆ ಇವರು ಉಪಕಾರ ಮಾಡಿ ಯಿದ್ದಾರೆ ಯೆಂಬದನ್ನು ಗ್ರಹಿಸಿ, ಅದಕ್ಕೆ ಪ್ರತಿ ಉಪಕಾರ ಮಾಡಬೇಕೆಂಬದಾಗಿ ಆ ಬೆಳಿಗ್ಗೆಯೇ ಬೀಬೀ ಮಗನನ್ನು ಕರಕೊಂಡು ಹೋಗಿ, ಈ ಬೀಬೀ ವೃತ್ತಾಂತ ಯಾವತ್ತು ಚೀಫ್ ರಾಬರ್ಟ ಟೆಲೇರು ಸಾಹೇಬರವರ ಸಂಗಡ ಹೇಳಿದ್ದಲ್ಲಿ, ಅವರು ಈ ಮಾತ(ನ್ನು) ಕೇಳಿ—" ಕಣ್ಣಾನೂರ

ಕಾರ ಮಾಡಬೇಕೆಂದು ಯೋಚಿಸಿ, ಬೀಬಿಮಗ(ನ)ನ್ನು ಕರಕೊಂಡು ಛೀಫ್ ರಾಬರ್ಟ್ಸು ಟಿಲೇರಿ ಸಾಹೇಬರನ್ನೂ ಕರಕೊಂಡು, ಮೇಜರ್ ಜನರಲ್ ರಾಬರ್ಟ್ಸು ಅಬರಕರಂಬಿ ಸಾಹೇಬರವರ ಭೇಟಿ ಮಾಡಿ, ರಾಜರು] ಬೀಬಿ ಮಗನ ಕೈಹಿಡಿದು ಜನರಲ್ ಸಾಹೇಬರವರ ಕೈಲಿ ಕೊಟ್ಟು,—"ನಮ್ಮ ಮೇಲೆ ಮೆಹರ್ಬಾನಿಗಿ ದೃಷ್ಟಿ ಮಡಗಿ, ಈ ಮಗುವಿನ ಮಾನ ಪ್ರಾಣವುಳಿಸಿ ರಕ್ಷಣ್ಯ ಮಾಡಬೇಕು"— ಎಂಬದಾಗಿ ಜಾಹೀರು ಮಾಡಿದಲ್ಲಿ, ಜನರಲ್ ಸಾಹೇಬರು ತಿಳಿಯದೆ, ರಾಜರ ಮಾತಿನ ಮೇಲೆ ಆದೀತು ಯೆಂತ ಒಪ್ಪಿಕೊಂಡು ಆ ಬಳಿಕ—"ಈ ಮಗು ಯಾರದು?"—ಎಂಬದಾಗಿ ರಾಬರ್ಟ್ಸು ಟಿಲೇರಿಸಾಹೇಬರನ್ನು ಕೇಳಿದಲ್ಲಿ, "ಇವನು ಕಣ್ಣೂರು ಬೀಬಿ ಮಗ. ರಾತ್ರೆ ವೇಳೆಯಲ್ಲಿ ಕಾಣದ ಹಾಗೆ ದೋಣಿ ಹತ್ತಿಸಿ ಮಹಾರಾಜರ ಬಳಿಗೆ ಕಳುಹಿಸಿ ಇದ್ದಾಳೆ"— ಎಂದು ಹೇಳಿದಲ್ಲಿ, ಜನರಲ್ ಸಾಹೇಬರು *

(೭೩ ನೇ ಪುಟದ ಟೀಪು ಮುಂದೆ ಸಾಗಿದ್ದು)

ಬೀಬಿಯು ಇಂಗ್ರೇಜಿಯವರಿಗೆ ನಂಬಿಸಿ ದಗಾ ಮಾಡಿಯಿದ್ದಾರೆ. ಆದದರಿಂದ ಅವಳ ಸಂಗಡ ನಾವು ಸಲ್ಲಾ ಮಾಡಲಿಕ್ಕೆ ಇಲ್ಲ. ಅವಳ ವಾತಾಗಿ ನಾವು ಜನರಲ್ ಸಾಹೇಬರವರಿಗೆ ಹೇಳುವದಕ್ಕೂ ಶಕ್ಯವಿಲ್ಲ.—" ಎಂಬದಾಗಿ ಹೇಳಿದರು. ಅ ಮಾತಿಗೆ ಮಹಾರಾಜರವರು ಹೇಳಿದ್ದು:—"ಹಾಗಾದರೆ ನಾವು ಈ ಬೀಬಿ ಮಗನನ್ನು ಕರಕೊಂಡು ಜನರಲ್ ಸಾಹೇಬರವರ ಭೇಟಿ ಆಗುವ ಬಗ್ಗೆ ಹೋಗುತ್ತೇವೆ. ನಮ್ಮ ಸಂಗಡ ನೀವು ಬರಬೇಕು"— ಎಂಬದಾಗಿ ಹೇಳಿದಲ್ಲಿ, ಆ ಮಾತಿಗೆ ಅ ಸರದಾರರು ಒಪ್ಪಿಕೊಂಡು, ಆದೇ ವೇರೆ ರಾಜರವರು ಆ ಸರದಾರರು ಸಹ, ಬೀಬಿ ಮಗನನ್ನು ಕರಕೊಂಡು ತಲಚೇರಿಯಿಂದ ಹೊರಟು, ಪತ್ತೇಮಾರಿ ಮೇಲೆ ಸವಾರಿ ಆಗಿ, ಇಂಗ್ರೇಜ ಬಹಾದ್ದರ ಲಷ್ಕರಿನ ಸಮೀಪ ಇಳಿದು, ಮೇಜರ್ ಜನರಾಲ್ ರಾಬರ್ಟ್ ಅಬರ್‌ಕರಂಬಿ ಸಾಹೇಬ ಬಾಹದ್ದರವರ ಭೆಟ್ಟಿ ಅಗಿ, ವೀರರಾಜೇಂದ್ರ ಒಡೆಯರವರು, ಆ

* ಬ ಮನಸ್ಸಿನಲ್ಲಿ ಬಹಳ ದ್ವೇಷಪಟ್ಟು— "ಕಣ್ಣೂರವರು ಕುಂಪನಿ ಸರಕಾರದ ಸಾಹೇಬ ಜನರಿಗೆ ಮೋಸಮಾಡಿ ಇದ್ದಾರೆ. ಅದಕ್ಕೆ ತಕ್ಕ ಶಿಕ್ಷೆ ಮೊಕರೂರು ಆಗಿಯಿದೆ. ಇಂಥಾ ದುಷ್ಟ ಜನರ ಮೇಲೆ ಮೆಹರ್ಬಾನಗಿ ಮಾಡಬಾರದು" ಎಂಬದಾಗಿ ಹೇಳಿದ್ದಲ್ಲಿ, "ಇದು ಒಂದಾವರ್ತಿಗೆ ನಮ್ಮ ಮೇಲಣ ಮಿತ್ರವಾತ್ಸಲ್ಯದಿಂದ ಈ ಮಗುವಿನ ಮೇಲೆ ದಯವಿಟ್ಟು, ಈ ಮಗುವನ್ನು ಕಣ್ಣೂರ ಸಂಸ್ಥಾನದಲ್ಲಿ ನಿಲ್ಲಿಸಬೇಕು. ಈ ಉಪಕಾರ ನಮ್ಮ ಮೇಲೆ ಮಾಡಿದ ಹಾಗೆ ಆದೀತು"— ಎಂಬದಾಗಿ ವೀರರಾಜೇಂದ್ರ ಒಡೆಯರವರು ಬಹಳ ಬಗೆಯಿಂದ ಹೇಳಿಕೊಂಡದರಿಂದ, ಜನರಲ್ ಸಾಹೇಬರವರು ಒಡಂಬಟ್ಟು

ಕೇಳಿ ಬಹಳ ಯೋಚನೆ ಮಾಡಿ,—"ಒಳ್ಳೇದು, ಎಂದು ರಾಜರಿಗೆ ಭರವಸೆ ಕೊಟ್ಟು ಮೇಲೆ ಪುನಃ ತಕರಾರು ಮಾಡಬಾರದು ಎಂದು] ಈ ಕಣ್ಣೂರು ಬೀಬಿ ತನ್ನ ಮಗನನ್ನ ನಿಮ್ಮ ಕೈಲಿ ಕೊಟ್ಟು ಇದ್ದಾಳೆ. ನೀವು ನಮ್ಮ ಕೈಲಿ ತಂದು ಕೊಟ್ಟರಿ. ಪುನಃ ನಿಮ್ಮ ಕೈಲಿ ನಾವು ಕೊಡುತ್ತೇವೆ. † [ರಾಬರ್ಟು ಟಲೇರಿ ಸಾಹೇಬರ(ನ್ನು) ಕರೆದುಕೊಂಡು ಕೊಣ್ಣೂರಿಗೆ ಹೋಗಿ, "ಇದುವರೆಗೆ ಕುಂಪಣಿ ಸರಕಾರದ ಮೇಲೆ ಜಗಳಮಾಡಿ ದಗ ಮಾಡಿದಂತಾದ್ದನ್ನು ಜನರಲ್ ಸಾಹೇಬರು ಮಾಫು ಮಾಡಿ ಇದ್ದಾರೆ. ಇನ್ನು ಮುಂದೆ ಈ ಮೇರೆ ನೀಚ ಬುದ್ಧಿ ಮಾಡದೆ ಯೋಗ್ಯರಾಗಿ ಇರಬೇಕೆಂ"ದು ಬೀಬಿಗೆ ಹೇಳಿ, ಅವಳ ಮಗುವ (ನ್ನು) ಅವಳಿಗೆ ಕೊಟ್ಟು ಬರುವದು"— ಎಂದು ಹೇಳಿ ರಾಜರಿಗೆ ಹುಕ್ಕುಂ ಕೊಡಿಸಿದ್ದರಿಂದ, ರಾಜರು ಬಂದು ಬೀಬಿಗೆ ಬುದ್ಧಿ ಹೇಳಿ, ಯಥಾ ಪ್ರಕಾರ ಇಟ್ಟು, ಕವಲ್ ಮಾಡಿಕೊಂಡು ಬಂದರು] ಆ ಬಳಿಕ ಕಣ್ಣೂರು ಕೋಟೀಲಿ ಇದ್ದ ಟೀಪೂಸುಲ್ತಾನರ ಕಡೆ ಜನಗಳ ಬಿಟ್ಟು ಕಳುಹಿಸಿಕೊಟ್ಟರು.

ಆ ಮೇಲೆ—"ಇನ್ನು ಮುಂದೆ ತಮಗೂ ನಮಗೂ ದೊಡ್ಡ ಶತ್ರುವಾದ ಟೀಪೂ ಸುಲ್ತಾನರ * [ಮೇಲೆ ಲಡಾಯಿ ಮಾಡಬೇಕೆಂದು] ಇಂಗ್ರೇಜಿ

---

† ಬ ತಾವು ಅದೇ ಮೇರೆಗೆ ಕಣ್ಣೂರ ಕೋಟೆ ಒಳಗೆ ಹೋಗಿ, ಈ ಮಗುವನ್ನು ಬೀಬಿ ಕೈಗೆ ಕೊಟ್ಟು, ಸಲ್ಲಾಮಾಡಿ, ಈ ವರೀ ಪರ್ಯಂತರಕ್ಕೆ ನೀನು ಮಾಡಿದಂಥಾ ದ್ರೋಹವನ್ನು ಇಂಗ್ರೇಜಿ ಕಂಪನಿ ಸರಕಾರದಿಂದ ಮಾಫು ಮಾಡಿಸಿ ಇದ್ದಾರೆ. ಇನ್ನು ಮುಂದೆ ಇಂಥಾ ಅನ್ಯಾಯ ಮಾಡಿದ್ದುಂಟಾದರೆ ಮಾಫು ಆಗಲಿಕ್ಕಿಲ್ಲ. ತಕ್ಕ ಶಿಕ್ಷೆ ಆದೀತು ಯೆಂತ ಹೇಳಬೇಕು'' ಎಂಬದಾಗಿ ಹೇಳಿ, ಆ ಬಳಿಕ ಆ ಜನರಲ್ ಸಾಹೇಬರವರು ಮಹಾರಾಜರವರ ಸಂಗಡ ರಾಬರ್ಟ್ ಟಲೆಸು ಸಾಹೇಬರನ್ನು ಮೆಸ್ತರ ತೇಂಡಿಹಾರು ಸಾಹೇಬರನ್ನು ಸಾಮುವೆಲ್ ಉಲುಸೇನ್ ಸಾಹೇಬರನ್ನು ಮುಂತಾದ ಸರದಾರರ ಕೂಡಲಿಟ್ಟು ಕಣ್ಣೂರ ಕೋಟೆಗೆ ಕಳುಹಿದರಿಂದ, ಅದೇ ಮೇರೆ ಮಹಾರಾಜರವರು ಆ ಸರದಾರರು ಇಂಗ್ರೇಜಿ ಝೂಂಡೆ ಸಹ ಆ ಕಣ್ಣೂರ ಕೋಟೆ ಒಳಗೆ ಹೋಗಿ, ಕುಂಪನಿ ಸರಕಾರದ ಝೂಂಡೆಯನ್ನು ಕೋಟೆಯ ಮೇಲೆ ನಿಲ್ಲಿಸಿ, ಜನರಲ್‌ಸಾಹೇಬರವರು ಹೇಳಿದ ಮೇರೆ ಬೀಬಿ ಮಗನನ್ನು ಬೀಬಿಗೆ ಕೊಟ್ಟು, ಯಾವತ್ತು ವಿವರವನ್ನು ಹೇಳಿ, ಚನ್ನಾಗಿ ಸಮಾಧಾಯಿಸಿ, ಆ ಬಳಿಕ ತಿರುಗಿ ಬಂದು, ಅಲ್ಲಿನ ವೃತ್ತಾಂತ ಯಾವತ್ತು ಜನರಲ್ ಸಾಹೇಬರವರ ಸಂಗಡ ಹೇಳಿದಲ್ಲಿ, ಆ ಮಾತ(ನ್ನು) ಕೇಳಿ ಜನರಲು ಸಾಹೇಬರವರು ಬಹಳ ಸಂತೋಷಪಟ್ಟು 'ನೀವು ಮಾಡಿದ ಕೆಲಸವೆಲ್ಲ ಒಳ್ಳೆಯದೇ ಸರಿ' ಎಂಬದಾಗಿ ಹೇಳಿ.

* ಬ ನಿಗ್ರಹಿಸುವ ಬಗ್ಗೆ ತಯಾರಾಗ ಬೇಕು. ಈಗ

ಲಸ್ಕರ್ ಶ್ರೀರಂಗಣ ಪಟ್ಟಣಕ್ಕೆ ಹೋಗುವಂತಾ ಗಟ್ಟದ ಮಾರ್ಗ × [ಕ್ಕೆ
ಹೇರಾಳ ದಂಡು ಬಿಟ್ಟು ಇಪ್ಪ ಗಟ್ಟದ ಸರಹದ್ದು] ಯಾವತ್ತಾ ಟೀಪೂ
ಸುಲ್ತಾನ ¶ [ರಿಗೆ ಸೇರಿ ಯಿದೆ.] ಆದ್ದರಿಂದ ಇಂಗ್ರೇಜಿ ದಂಡು ಕೊಡ
ಗಿನ ಸೀಮೆಗಾಗಿ ಸಾಗಿ ಹೋಗತಕ್ಕ ಬಗ್ಗೆ ಯಾವ ಕಡೆ ಸರಾಗವೆಂದು
ನೋಡತಕ್ಕ ಬಗ್ಗೆ ಒಬ್ಬ ಸರದಾರನ(ನ್ನು) ತಮ್ಮ ಬಳಿಗೆ ಸ್ವಲ್ಪ ದಿವ
ಸದಲ್ಲಿ ಕಳುಹಿಸುತ್ತೇವೆ. ಅವನು ಪಸಂದು ಮಾಡಿದ ಮಾರ್ಗವನ್ನು
ತಾವು ಸಮ್ಮತಿಪಟ್ಟು, ದಂಡು ಸಾಗಿ ಬರುವ ಹಾಗೆ ದುರುಸ್ತು ಮಾಡಿ
ಸಬೇಕು"—ಎಂಬುದಾಗಿ ವೀರರಾಜೇಂದ್ರ ಒಡೆಯರ ಸಂಗಡ ಹೇಳಿದಲ್ಲಿ,
ಆ ಮಾತಿಗೆ ಒಪ್ಪಿಕೊಂಡು, ಕೊಡಗಿನ ರಾಜ್ಯಕ್ಕೆ ಬಂದರು. ಇದೇ
ಸಮಯದಲ್ಲಿ ಕರ್ನಲ್ ಹಾಟ್ಲೆ ಸಾಹೇಬರವರು ಪವುಜು ಸಮೇತ ಕಲ್ಲೀ
ಕೋಟೆಗೆ ಬಂದು, ಅಲ್ಲಿ ಇದ್ದಂತಾ ಟೀಪೂ ಸುಲ್ತಾನರ ಪವುಜು ಯಾವ
ತ್ತನ್ನೂ ನಿಗ್ರಹಿಸಿ, ಆ ಕೋಟೆಯನ್ನು ತೆಗೆದುಕೊಂಡು, ಅಲ್ಲಿಂದ ಕಣ್ಣೂ
ರಿಗೆ ಬಂದು ಆ ಜನರಲ್ ಸಾಹೇಬರವರ ದಂಡಿಗೆ ಕೂಡಿದರು.

ಆ ಬಳಿಕ ಕೆಲವು ದಿವಸದಲ್ಲಿ ಮಾರ್ಗಗಳ(ನ್ನು) ನೋಡುವ ಬಗ್ಗೆ
ಕಾಪ್ತೆನ್ ರಸಲ್ ಸಾಹೇಬರವರು ಬಂದು ದೊರೆಗಳ ಭೇಟಿಯಾಗಿ,—"
ಇಂಗ್ರೇಜ್ ಬಾಹದ್ದರ ಸರಕಾರದ ಪವುಜು ಬರತಕ್ಕ ಬಗ್ಗೆ ಹೆಗ್ಗಳದ
ಗಟ್ಟದ ಮಾರ್ಗವನ್ನು ದುರಸ್ತು ಮಾಡಿಸಿಕೊಡಬೇಕು. ಅದೇ ಮಾರ್ಗ
ವಾಗಿ ದಂಡು ಬಂದ ಮೇಲೆ ದಂಡಿಗೆ ಬೇಕಾದ ಸರಂಜಾಮು ತಮ್ಮ
ಮುಖಾಂತರ ಕೊಡಿಸಿಕೊಟ್ಟು ಸಹಾಯ ಮಾಡಬೇಕು"—ಎಂಬದಾಗಿ
ಹೇಳಿದಲ್ಲಿ, ವೀರರಾಜೇಂದ್ರ ಒಡೆಯರವರು ಆ ಮಾತಿಗೆ ಒಪ್ಪಿ ಒಡಂ
ಬಟ್ಟು, ಕಾಪ್ತಿನ್ ರಸಲ್ ಸಾಹೇಬರನ್ನು ಮೂರು ದಿವಸ ಪರಿಯಂತರ
ತಮ್ಮ ಬಳಿಯಲ್ಲಿ ಮಡಗಿಕೊಂಡು, ಇಂಗ್ರೇಜಿ ಬಹದ್ದರ ಪವುಜು
ಸಮೇತ ಜನರಲ್ ಸಾಹೇಬರನ್ನು ಕರೆದುಕೊಂಡು ಬರುವ ಬಗ್ಗೆ
ಆ ಕಾಪ್ತನ್ ಸಾಹೇಬರನ್ನು ಪುನಃ ಲಷ್ಕರಿಗೆ ಕಳುಹಿಸಿಕೊಟ್ಟು,
ಮಹಾರಾಜರವರು—"ಲಷ್ಕರಿಗೆ ಬೇಕಾದ ಸಮಾನು ಜಮಾಯಿಸುವ
ಬಗ್ಗೆ ಕೊಡಗಿನ ಸೀಮೆ ಒಳಗೆ ಟೀಪೂ ಸುಲ್ತಾನರು ನುಗ್ಗಿ ಲೂಟೈಸಿ
ಹೈರಾನು ಮಾಡಿ ಇದ್ದಾರೆ. ಇಂತಹ ಹೈರಾನು ಸೀಮೆಯಲ್ಲಿ ಯಾವ

× ಬ. ಪ್ರತಿಯಲ್ಲಿ ಈ ಶಬ್ದಗಳಿಲ್ಲ.

‖ ಬ. ರ ತಾಲೂಕಿನ ಒಳಗೆ ಇದೆ. ಆ ಗಟ್ಟಗಳಲ್ಲಿ ಹೇರಳ ಮಂದಿಯಿಟ್ಟು ಬಂದೋ
ಬಸ್ತು ಮಾಡಿ ಇದ್ದಾರೆ.

ಮೇರೆ ರಾತೀಪಿನ ಸರಂಜಾಮು ಸಿಕ್ಕೀತು? ಎರಡನೆಯದು,—ಅರಮನೆ = [ಜಕ್ಕೆರಿ] ಇರುವಂತಾದ್ದು ಕಂಡು ಇದೆ. ಯಾವತ್ತೂ ಒಡವೆ ವಸ್ತು ಹಣ ಕಾಸು ಮುಂತಾಗಿ ಟೀಪೂ ಸುಲ್ತಾನರ ಲೂಟಿಗೆ ಸಿಕ್ಕಿ ಹೋಯಿತು. ಮೂರನೆಯದು —ತಮ್ಮ ಸೀಮೆ ಹೈರಾನು ಆದಾಗ್ಯೂ ಸ್ನೇಹಿತರ ಸೀಮೆಯಿಂದ ತರಿಸಿಕೊಟ್ಟೇವು ಎಂದರೆ, ಕೊಡಗಿನ ಸೀಮೆ ಸುತ್ತ ಇರುವ ಸೀಮೆ ಯಾವತ್ತೂ ಟೀಪೂ ಸುಲ್ತಾನರದು ಹೊರತು ಒಬ್ಬ ದೋಸ್ತರದೂ ಕಾಣುವುದಿಲ್ಲ. ಆ ಕಡೆಯಿಂದ ಈ ಸೀಮೆಗೆ ಈ ಕಡೆಯಿಂದ ಆ ಸೀಮೆಗೆ ಒಬ್ಬರೂ ಹೋಗಿ ಬರುವುದಕ್ಕಿಲ್ಲ. ಈ ಮೂರು ವಿಧದಿಂದ ವಿಚಾರಿಸಿ ನೋಡಿದಾಗ್ಯೂ ಮಾರ್ಗ ತೋರಲಿಲ್ಲ. ಕಡೆಗೆ ಈಗ ಇಂಗ್ರೇಜಿ ಕುಂಪಣಿ ಸರಕಾರವೂ ನಮ್ಮ ಸರ್ಕಾರವೂ ಸ್ನೇಹ ಮಿತ್ರತ್ವದಿಂದ ಸೂರ್ಯಚಂದ್ರರು ಇರುವ ಪರಿಯಂತರ ನಡೆದು ಬರುವ ಬಗ್ಗೆ ಹೊಸ ನೂತನವಾಗಿ ಆಣೆ ಭಾಷೆಯಿಂದ ಕರಾರು ಆಗಿಯಿದೆ. ಇದಲ್ಲದೆ, ಇಂಗ್ರೇಜ ಸರ್ಕಾರದ ಜಯಪ್ರದದ ಲಷ್ಕರು ದೊಡ್ಡದು ಷಮಾನ್ ಟೀಪೂಸುಲ್ತಾನರ ಸಂಗಡ ಲಡಾಯಿ ಮಾಡುವ ಬಗ್ಗೆ ಇದೇ ಕೊಡಗಿನ ಸೀಮೆ ಮಾರ್ಗವಾಗಿ ಬರುತ್ತ ಇವೆ. ಇಂತ ಸಮಯದಲ್ಲಿ ರಾತೀಪು ಮುಂತಾದ ಸರಂಜಾಮು ನಮ್ಮಿಂದ ಆಗುವಷ್ಟು ಸಹಾಯ ಮಾಡದಿದ್ದರೆ ಸ್ನೇಹಕ್ಕೆ ವಿಹಿತವಾಗಿ ಕಾಣದು.”— ಎಂತ ಗ್ರಹಿಸಿ, ಕೆಲವು ಬೇಹಿನ ಜನರನ್ನು ಟೀಪೂಸುಲ್ತಾನರ ಸೀಮೆ ಒಳಗೆ ಕಳುಹಿಸಿ, ಗಾಡಿ ನಾಗಿಸುವಂತ ಎತ್ತುಗಳು, ಸಾಮಾನು, ಸರಂಜಾಮು ಮುಂತಾಗಿ ಇರುವಂತ ಸ್ಥಳ ಗೊತ್ತುಪತ್ತಿಸಿ, ಆ ಜಾಗಕ್ಕೆ ಲಡಾಯಿ ಮಾಡುವಂತ ಜನರನ್ನು ಆಯುಧವಾಣಿ ಸಮೇತ ಕಳುಹಿಸಿ, ದುಸಮಾನರ ಕಡೆ ಜನರ ಸಂಗಡ ಯುದ್ಧಮುಖದಲ್ಲಿ ಪ್ರಾಣ ವೆಚ್ಚಮಾಡಿಸಿ, ಕೆಲವು ಸಾಮಾನು, ೧೫೦೦ ಪರಿಯಂತರ ಎತ್ತುಗಳು ಸಹ ಸಂಪಾದಿಸಿ ತರಿಸಿ, ಈ ವಿವರವನ್ನು ತಲಚೇರಿ ರಾಬರ್ಟು ಟಲೇರಿ ಸಾಹೇಬರವರಿಗೆ ಕಾಗದ ಬರೆದು ಕಳುಹಿಸಿದಲ್ಲಿ, “ಆ ಸರಂಜಾಮು ಯಾವತ್ತೂ ದಂಡು ಇಲ್ಲಿಂದ ಕೊಡಗಿಗೆ ಬಂದ ಮೇಲೆ ಕೊಡಿಸಬೇಕು. ಈಗಲೇ ಲಷ್ಕರು ಕೂಚಾಗಿ ಬರುತ್ತದೆ. ಗಾಡಿ ಎಳೆಯುವ ಬಗ್ಗೆ ಎತ್ತುಗಳು ಅಗತ್ಯ ಬೇಕಾಗಿ ಇರುವದರಿಂದ ಆ ಎತ್ತುಗಳ(ನ್ನು) ತರುವ ಬಗ್ಗೆ ಕೆಲವು ಜನರನ್ನು ಕಳುಹಿಸಿ ಇದ್ದೇವೆ. ಅವರ ತಾಬೆಯಲ್ಲಿ ಕೊಟ್ಟು ಕಳುಹಿಸಬೇಕು”—ಎಂಬು

= ಬ ಜಕೀರ

ದಾಗಿ ಜವಾಬು ಬರೆಸಿ ಕಳುಹಿಸಿದ್ದರಿಂದ, ಅದೇ ಮೇರೆ ಮಹಾರಾಜರು ಒಳ್ಳೇ ಗಟ್ಟಿ ಭದ್ರವಾದ ಸಾವಿರದನೂರಹನ್ನೊಂದು ಎತ್ತು ಆದು, ಆ ಮನುಷ್ಯರ ವಶಕ್ಕೆ ಕೊಟ್ಟು ತಲಚೇರಿ ಇಂಗ್ರೇಜಿ ಕುಂಪನಿ ಸರಕಾರಕ್ಕೆ ಕಳುಹಿಸಿಕೊಟ್ಟರು. ಉಳಿಕೆ ರಾತೀಪಿನ ಸರಂಜಾಮು ಲಷ್ಕರಿಗೆ ತೆಗೆದು ಕೊಡತಕ್ಕ ಬಗ್ಗೆ ಪ್ರಯತ್ನಪಟ್ಟು ಜಮಾಯಿಸುತ್ತ ಇದ್ದರು.

ಅಷ್ಟರಲ್ಲಿ ಮಡಿಕೇರಿ ಕೋಟೆಯಲ್ಲಿ ಇದ್ದ ಮಂದಿಗೆ ರಸ್ತು ತೀರಿ ಹೋಗಿ ಲಾಚಾರರಾಗಿ—" ತಮ್ಮ ತಮ್ಮ ಒಡವೆ ಸಹಿತ ಪ್ರಾಣದಿಂದ ಬಿಟ್ಟುಕೊಟ್ಟರೆ ಹೋದೇವು"— ಎಂಬದಾಗಿ × [ಜಾಫರಲ್ಲಿ] ಬೇಗು ಕಿಲ್ಲೇದಾರನ ಸಂಗಡ ಹೇಳಿದ್ದರಿಂದ, ಆ ಕಿಲ್ಲೇದಾರನು ನಾಲ್ಕು ಜನವನ್ನೂ ಒಂದು ಬಿಳೀ ಬಾವಟ ಸಹ ಸಲ್ಲಾ ಮಾಡುವ ಬಗ್ಗೆ ನಾಲ್ಕುನಾಡು ಅರಮನೆಗೆ ದೊರೆಗಳ ಬಳಿಗೆ ಕಳುಹಿಸಿದಲ್ಲಿ ಈ ವಿವರವನ್ನು ಕೇಳಿ ರಾಜರು ಅಲ್ಲಿಂದ ಹೊರಟು ಬಂದು ಮಡಿಕೇರಿ ಹಳೇ ಕೋಟೆಯಲ್ಲು ಇಳಕೊಂಡು ಆ ಕಿಲ್ಲೇದಾರನನ್ನು ತಮ್ಮ ಬಳಿಗೆ ಕರೆಕಳುಹಿಸಿ— "ಕೋಟೆ ಒಳಗೆ ಇರುವಂತಾದ್ದು ಟೀಪೂಸುಲ್ತಾನರ ಸರಕಾರದ ಸಾಮಾನು ಯಾವತ್ತೂ ವಂಚಿಸದೆ ನಮ್ಮ ಸರಕಾರಕ್ಕೆ ಒಪ್ಪಿಸಿ, ನೀನು ನಿನ್ನ ಮಂದಿ ಸಹ ನಿಮ್ಮ ನಿಮ್ಮ ಮನೆವಾರ್ತೆ ಒಡವೆ ಏನು ಇದ್ದಾಗ್ಯೂ ತೆಗೆದುಕೊಂಡು ಹೋಗಿ"—ಎಂದು ಅಪ್ಪಣೆ ಕೊಟ್ಟಲ್ಲಿ ಆ ಕಿಲ್ಲೇದಾರನು ಸಂತೋಷಪಟ್ಟು ಒಪ್ಪಿಕೊಂಡು, ಐನೂರು ಜನ ಕೊಡಗರನ್ನು ಕರೆದುಕೊಂಡುಹೋಗಿ ಆ ಕೋಟೆ ಒಳಗೆ ಇದ್ದ ತನ್ನ ಠಾಣ್ಯದ ಮಂದಿಯನ್ನು ಹೊರಗೆ ಕಳುಹಿಸಿ, ಅವರ ಬದಲಿಗೆ ಆ ಕೊಡಗು ಮಂದಿಯನ್ನು ನಿಲ್ಲಿಸಿ * [ಈ ದೊರೆಗಳ] ಜಾಂಡೆ ಕೋಟೆ ಮೇಲೆ ನಿಲ್ಲಿಸಿ, ಆ ಕೋಟೆಯ ಬಾಗಿಲು ಬೀಗ ಮುದ್ರೆಯನ್ನು ಕಜಾನೆ, ಪಿರಂಗಿ, ಮದ್ದುಗುಂಡು ಮುಂತಾದ ಟೀಪೂಸುಲ್ತಾನರ ಸಾಮಾನು ಇದ್ದುದು ಯಾವತ್ತೂ ದೊರೆಗಳಿಗೆ ಒಪ್ಪಿಸಿದನು. ಆ ಮಾರಣೇ ದಿವಸ ಬೆಳಿಗ್ಗೆ ರಾಜರ ಖಾಸಾ ಸವಾರಿಯು ಆ ಕೋಟೆಗೆ ಹೋಗುವಾಗ್ಗೆ, ಮಾರ್ಗದಲ್ಲಿ, ಟೀಪೂ ಸುಲ್ತಾನರ ಕಡೆ ಠಾಣ್ಯದ ಮಂದಿ ಯಾವತ್ತೂ ಬಹಳ ದೈನ್ಯೋಕ್ತಿಯಿಂದ—" ನಮಗೆ ಮೂರುತಿಂಗಳಿಂದ ಟೀಪೂಸುಲ್ತಾನರ

× ಬ. ಜಾಫರ್‌ಕುಲೀ

* ಬ. ವೀರರಾಜೇಂದ್ರ ಒಡೆಯರವರ ಕಡೆ

ಸರಕಾರದಿಂದ ಸಂಬಳ ಸಿಕ್ಕಲಿಲ್ಲ. = [ನಮ್ಮ] ಖರ್ಚಿಗೆ ಕೊಟ್ಟು ರಕ್ಷಣ್ಯಮಾಡಬೇಕು"— ಎಂಬದಾಗಿ ಅರಿಕೆ ಮಾಡಿಕೊಂಡದ್ದರಿಂದ, " ನಿಮ್ಮ ಕಿಲ್ಲೇದಾರನನ್ನು ಕಳುಹಿಸಿದರೆ ನಿಮ್ಮ ಖರ್ಚಿನ ಬಗ್ಗೆ ಹಣ ಕಳುಹಿಸಬಹುದು"— ಎಂಬದಾಗಿ ಅಪ್ಪಣೆಕೊಟ್ಟು, ಕೊಡಗಿನ ಸಂಸ್ಥಾನದ ಹುಕ್ಮುಮತ್ತಿನ ಜಾಗವಾದ ಆ ಕೋಟೆ ಒಳಗೆ ಹೋಗಿ ಆ ಕಿಲ್ಲೇದಾರನ ಸಂಗಡ—" ನಿನ್ನ ಕಡೆ ಮಂದಿಗೆ ಖರ್ಚಿಗೆ ಇಲ್ಲದೆ ಕಷ್ಟಪಡುತ್ತಾರೆ. ಆದ್ದರಿಂದ ಒಂದು ಸಾವಿರ ವರಹವನ್ನು ಇನಾಮು ಆಗಿ ಕೊಡಿಸುತ್ತೇವೆ. ಅದನ್ನು ಹಂಚಿಕೊಡು; ಇದಲ್ಲದೆ ನಿಮ್ಮ ಸಂಗಡ ವೈಗಾವಲಿಗೆ ಕೊಡಗಿನ ಸರಹದ್ದು ಮುಳ್ಳುನೋಗೆ ಪರಿಯಂತರ ಕೆಲವು ಮಂದಿಯನ್ನು ಕೊಡುತ್ತೇವೆ"— ಎಂಬದಾಗಿ ಅಪ್ಪಣೆ ಕೊಟ್ಟು, ಅದೇ ಮೇರೆ ಒಂದು ಸಾವಿರ ವರಹವನ್ನು ಆ ಕಿಲ್ಲೇದಾರನ ಕೈಯು ಕೊಟ್ಟಲ್ಲಿ, ಅವನು ಆ ಜನಕ್ಕೆ ಹಂಚಿಕೊಟ್ಟು ರಾಜರ ಸನ್ನಿಧಾನದಿಂದ ಅಪ್ಪಣೆ ತೆಗೆದುಕೊಂಡು, ವೈಗಾವಲಿನ ಮಂದಿ ಸಹ ಕೂಡಿಕೊಂಡು, ಪಟ್ಟಣಕ್ಕೆ ಹೋದನು. ಆ ಬಳಿಕ ಮಹಾರಾಜರು ಆ ಕೋಟೆ ಬಂದೋಬಸ್ತು ಮಾಡಿಸಿಕೊಂಡು ನಾಲ್ಕುನಾಡು ಅರಮನೆಯಲ್ಲು ಇರುತ್ತಿದ್ದರು.

ಇತ್ತಲಾಗಿ ಮೇಜರ್ ಜನರಲ್ ರಾಬರ್ಟ್ಸ ಅಬ್ರಕರಂಬಿ ಸಾಹೇಬ ಬಹದೂರವರು ಪವುಜು ಸಮೇತ ಬಂದು, ಹೆಗ್ಗಳದ ಗಟ್ಟದ ಮೈದಾನದಲ್ಲಿ ಇಳಕೊಂಡು—" ನಾವು ನಮ್ಮ ದಂಡು ಸಮೇತ ನಿಮ್ಮ ಕೊಡಗಿನ ಸೀಮೆಗೆ ಬಂದು ಇಳಿದು ಇದ್ದೇವೆ. ತಮ್ಮ ಭೇಟಿ ಆಗಬೇಕೆಂಬ ಅಪೇಕ್ಷೆ ಇದೆ"— ಎಂದು ಕಾಗದ ಬರೆದು ಕಳುಹಿಸಿದ್ದರಿಂದ, ಮಹಾರಾಜರು ಅರಮನೆಯಿಂದ ಹೊರಟು ಆ ದಂಡಿಗೆ ಹೋಗಿ ಆ ಜನರಲ್ ಸಾಹೇಬರ ಮುಲಾಕತ್ ಆಗಿ, ಅತಿ ಸಂತೋಷಪಟ್ಟು, ದಂಡಿಗೆ ಬೇಕಾದ ಸಾಮಾನು ತಮ್ಮಲ್ಲಿ ಕೂಡಿಸಿ ಇಟ್ಟಂತಾದ್ದನ್ನು ಕೊಡಿಸಿ, ಮತ್ತು ಸಾಮಾನು ಸರಂಜಾಮು ಟೀಪೂ ಸುಲ್ತಾನರ ಸೀಮೆಯಿಂದ ತರಿಸಿ ದಂಡಿಗೆ ಕೊಡಿಸುತ್ತ ಇದ್ದರು. ಹೀಗೆ ಇರುವಾಗ್ಗೆ, ಮದರಾಶಿನಿಂದ ಜನರಲ್ ಮೇಂಡುಸ್ ಸಾಹೇಬರವರು ಪವುಜು ಸಮೇತ ಶ್ರೀರಂಗಪಟ್ಟಣದ ಕೋಟೆ ತೆಗೆದುಕೊಳ್ಳಬೇಕೆಂಬದಾಗಿ ಹೊರಟು, ದಿಂಡುಕಲ್ಲು

= ಬ ನಮ್ಮ ಕುಟುಂಬ ಮಕ್ಕಳು ಯಾವತ್ತು ಖರ್ಚಿಗೆ ಇಲ್ಲದೆ, ಹೈರಾಣು ಆಗುತ್ತದೆ. ತಮ್ಮ ಸನ್ನಿಧಾನದಿಂದ

ಮಾರ್ಗವಾಗಿ ಬಂದು, ಕೊಯಮುತ್ತೂರಲ್ಲು ಇಳಕೊಂಡರು. ಈ ಸಮಾಚಾರ ಟೀಪೂಸುಲ್ತಾನರು ಕೇಳಿ ತಮ್ಮ ದಂಡು ತೆಗೆದುಕೊಂಡು, ಪಟ್ಟಣದಿಂದ ಹೊರಟು ಸತ್ಯಮಂಗಲಕ್ಕೆ ಬಂದು, ಮೇಂಡಸ್ ಸಾಹೇಬರ ಸಂಗಡ ಲಡಾಯಾದಲ್ಲಿ, ಅದೇ ಲಡಾಯದಲ್ಲಿ ಟೀಪೂಸುಲ್ತಾನರ ಭಾವಮೈದನನಾದ ಬುರಾನುದ್ದೀನರು ಬಿದ್ದುಹೋದರು. ಕಡೆಗೆ ಟೀಪೂಸುಲ್ತಾನರ ದಂಡು ಇಂಗ್ರೇಜಿ ಬಾಹದರವರ ಪವುಜಿನ ಸಂಗಡ ಮುಖಸಂಧಿಸಿ ಜಗಳ ಮಾಡಲಾರದೆ ಮುಂದೆ ಗಿಡ ಗುಡ್ಡೆ ಆಶ್ರಯಃ ಹಿಡಿದು = [ಇಂತಾ] ಅಯೋಗ್ಯದ ಹರಕತ್ತು ಮಾಡುವದಕ್ಕೆ ಪ್ರಾರಂಭಿಸಿದರು.

ಅಷ್ಟರಲ್ಲಿ ಬಂಗಾಳದ ಲಾರ್ಡ್ ಕಾರ್ನವಾಲಿಸ್ ಸಾಹೇಬ ಬಹದ್ದರವರು ಭಾರಿ ಪವುಜು ಸಮೇತ ಮದರಾಸಿನ ಕಡೆಗೆ ಬಂದು ಇಳಿದರು. [ಈಗ ಬರು] ± ವಂತ ದಂಡಿನ ಸಮಾಚಾರ ಟೀಪೂಸುಲ್ತಾನರು ಕೇಳಿ, ಕೃಷ್ಣಗಿರಿ ಗಟ್ಟ ಇಳಿದು, ಆರ್ಕಾಟು ಸೀಮೆಗೆ ಹೋದರು. ಅವರ ಬೆನ್ನು ಹಿಂದೆ ಜನರಲ್ ಮೇಂಡಸ್ ಸಾಹೇಬರು ಪವುಜು ಸಮೇತ ಇದೇ ಗಟ್ಟ ಇಳಿದು, ಬಂಗಾಳದ ಲಾರ್ಡ್ ಕಾರ್ನವಾಲಿಸ್ ಸಾಹೇಬರ ಪವುಜಿನ ಸಂಗಡ ಕೂಡಿ, ಒಟ್ಟಾಗಿ ಗಟ್ಟ ಹತ್ತಿ ಬಂದು, ಬೆಂಗಳೂರು ಮೊಕ್ಕಾಮಿನಲ್ಲಿ ಇಳಕೊಂಡರು. ಟೀಪೂಸುಲ್ತಾನರು ತಮ್ಮ ಪವುಜು ಸಮೇತ ಬಂದು ಅದೇ ಬೆಂಗಳೂರಲ್ಲಿ ಒಂದು ಕಡೆ ಇಳಕೊಂಡರು. ಆ ಬಳಿಕ ಇಂಗ್ರೇಜಿ ಬಹದ್ದರವರ ಪವುಜು ಮೂರ್ಚೆ ಹಾಕಿ ಫಿರಂಗಿ ಏರಿಸಿ, ಆ ಬೆಂಗಳೂರು ಕೋಟೆಯನ್ನು ಪಿರಂಗಿ ಗುಂಡಿನಿಂದ ಕೆಡವಿ, ಏಳು ದಿವಸದಲ್ಲಿ ಹಲ್ಲಾ ಹತ್ತಿ. ಆ ಕೋಟೆಯನ್ನು ತಮ್ಮ ಕೈವಶಮಾಡಿಕೊಂಡರು. ಟೀಪೂಸುಲ್ತಾನರು ಎಲ್ಲಾ ಬಗೆಯಲ್ಲೂ ಲಾಚಾರಿಯಾಗಿ, ಮತ್ತು ಬೊಂಬಾಯಿ ಲಷ್ಕರ್ ಕೊಡಗಿನ ಮಾರ್ಗವಾಗಿ ಬರುವದ(ನ್ನು) ಕೇಳಿ, ತಮ್ಮ ಪವುಜು ತೆಗೆದುಕೊಂಡು ಇಂಗ್ರೇಜಿ ಪವುಜು ಬರುವದಕ್ಕಿಂತ ಮುಂದಾಗಿ ಶ್ರೀರಂಗಪಟ್ಟಣಕ್ಕೆ ಬಂದು, ಪಿರಿಯಾಪಟ್ಟಣಕ್ಕೆ ತಮ್ಮ ಕಡೆ ಒಬ್ಬ ಸರದಾರನ (ನ್ನು) ಕೆಲವು ಪವುಜು ಸಹ ಕಳುಹಿಸಿ, ಅದರ ಒಳಗೆ ಇರುವಂಥ ಜನವನ್ನು ಹೊರಡಿಸಿ,

---

= ಬ ಇಂಗ್ರೇಜಿ ಬಹದ್ದೂರವರ ಫವುಜಿಗೆ ರಸದು ಬರುವಂಥಾ ಮಾರ್ಗಗಳ ಕಟ್ಟಿ ಇಂತಾ

± ಬ ಈ ಗಾಬರಿ ಆಗು

ಆ ಕೋಟೆ ಪಾಯಗಳಲ್ಲು ಸುರಂಗ ತೆಗೆಸುತ್ತ ಇದ್ದರು. ಟೀಪೂ ಸುಲ್ತಾನರು ಪಟ್ಟಣದ ಕೋಟೆ ಮುಂದೆ ಎರಡು ಹೊಳೆ ಮಧ್ಯೆ ಬತ್ತೇರಿಗಳ (ನ್ನು) ತಯಾರು ಮಾಡಿಸಿ, ಆ ಬತ್ತೇರಿಗಳ ಒಳಗೆ ತಮ್ಮ ಪವುಜನ್ನು ನಿಲ್ಲಿಸಿಕೊಂಡು ಇದ್ದರು. ಅಷ್ಟರಲ್ಲಿ ಲಾರ್ಡ್ ಕಾರನ್‌ವಾಲಿಸ್ ಸಾಹೇಬರವರು, ಜನರಲ್ ಮೇಂಡಸ್ ಸಾಹೇಬರವರು ಸಹ ಪವುಜು ಸಮೇತ ಪಟ್ಟಣಕ್ಕೆ ತಲಪಿದರು. ಕೊಡಗಿನ ಕಡೆಯಿಂದ ಗವರ್ನರ್ ಮೇಜರ್ ಜನರಲ್ ರಾಬರ್ಟ್ ಅಬ್ರಕರಂಬಿ ಸಾಹೇಬರವರು, ಕೊಡಗಿನ ರಾಜರು ಸಹ ಕೂಡಿ, ಬೊಂಬಾಯಿ ಪವುಜು ಸಮೇತ ಕೂಚಾಗಿ ಮುತ್ತೂರು ಗ್ರಾಮದ ಸಮೀಪಕ್ಕೆ ತಲಪಿದರು. ಅಷ್ಟರಲ್ಲಿ, ಪಿರಿಯಾಪಟ್ಟಣದ ಕೋಟೆಯಲ್ಲಿ ಸುರಂಗ ತೆಗೆಸುತ್ತ ಇದ್ದ ಟೀಪೂ ಸುಲ್ತಾನರ ಕಡೆಯು ಜನರು, ಇಂಗ್ರೇಜಿಯವರ ಲಷ್ಕರು ಇಲ್ಲಿಗೆ ಬಂದರೆ ಪಿರಿಯಾಪಟ್ಟಣದ ಕೋಟೆಯನ್ನು ತೆಗೆದುಕೊಂಡಾರೆಂದು ತಿಳಿದು ಶೀಘ್ರದಿಂದ ಸುರಂಗಗಳ ಒಳಗೆ ಮದ್ದು ತುಂಬಿ, ಬೆಂಕಿಹಾಕಿ, ಕೋಟೆಯನ್ನು ಕೆಡವಿ ಬಿಟ್ಟು, ಆ ಸರದಾರನು ತನ್ನ ಮುಂದಿ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಹೋದನು. ಆ ಬಳಿಕ ಜನರಲ್ ರಾಬರ್ಟ್ ಅಬ್ರಕರಂಬಿ ಸಾಹೇಬರವರು ಎರಡು ಪಟಾಲಂ ಪಿರಿಯಾಪಟ್ಟಣದ ಕೋಟೆಯೊಳಗೆ ಇಟ್ಟು, ಉಳಿಕೆ ಪವುಜು ಸಮೇತ ಪಿರಿಯಾಪಟ್ಟಣದ ಹಳೇ ಕೋಟೆ ಸಮೀಪದಲ್ಲು ಇಳಕೊಂಡರು.

ಟೀಪೂಸುಲ್ತಾನರು ತಮ್ಮ ಮುಂದಿ ತೆಗೆದುಕೊಂಡು ಹೋಗಿ ಇಂಗ್ರೇಜಿ ಬಹದ್ದರರ ಪವುಜಿನ ಸಂಗಡ ಕರೀಘಟ್ಟದ ಬಳಿಯು ಲಡಾಯು ಮಾಡಿದಲ್ಲಿ, ಇಂಗ್ರೇಜಿಯವರ ಪವುಜು ಟೀಪೂಸುಲ್ತಾನರ ಪವುಜಿನ ಮೇಲೆ ಬಲಾಢ್ಯರಾಗಿ ಟೀಪೂಸುಲ್ತಾನರ ಪವುಜನ್ನು ನಿಗ್ರಹಿಸಿದರು. ಕಡೆಗೆ ಟೀಪೂಸುಲ್ತಾನರ ಪವುಜು ಓಡಿ ಹೋಗಿ ಕಾವೇರೀ ಎರಡು ಹೊಳೆ ಮಧ್ಯದಲ್ಲಿ ಕೋಟೆ ಬತ್ತೇರಿ ಒಳಗೆ ಬಂದು, ಕೋಟೆಯ ಆಶ್ರಯದ ಒಳಗೆ ಇಳಕೊಂಡರು. ಆ ಬಳಿಕ ಇಂಗ್ರೇಜಿಯವರ ಪವುಜು ಒಂದು ರಾತ್ರೆ ಕರೀಗಟ್ಟದ ಬಳಿಯು ಇಳಿದು ಇದ್ದು, ಅಲ್ಲಿಂದ ಹೊರಟು ಹಿರೋಡೆ ಬೆಟ್ಟದ ಸಮೀಪದಲ್ಲು ಕೊಡಗಿನ ಕಡೆಯಿಂದ ಕುಮ್ಮಕ್ಕಾಗಿ ಪಿರಿಯಾಪಟ್ಟಣಕ್ಕೆ ಬಂದು ಇರುವ ಬೊಂಬಾಯಿ ಪವುಜಿನ ದಾರಿ ನೋಡುತ್ತ ಮೂರು ದಿವಸ ಅಲ್ಲಿ ಮೊಕ್ಕಾಂ ಮಾಡಿದರು.

ಆ ಬಳಿಕ ಮಳೆಗಾಲ ಸಮೀಪವಾದ್ದರಿಂದ ಲಾರ್ಡ್ ಕಾರನ್‌ವಾಲಿಸ್ ಸಾಹೇಬರವರ ಪವುಜು ಅಲ್ಲಿಂದ ಹೊರಟು ಬೆಂಗಳೂರಿಗೆ ಹೋದರು. ಮೇಜರ್ ಜನರಲ್ ರೋಬರ್ಟ್ ಅಬರಕರಂಬಿ ಸಾಹೇಬರವರು ಕೊಡಗಿನ ರಾಜರು ಸಹ ಸಂಗಡ ಇರುವ ಪವುಜು ಸಮೇತ ಸಿರಿಯಾಪಟ್ಟಣದಿಂದ ಹೊರಟು ಬಂದು ಹೆಗ್ಗಳದ ಗಟ್ಟದ ಬಳಿಯಲ್ಲು ಇಳಕೊಂಡು, ಆ ಬಳಿಕ ಆ ಜನರಲ್ ಸಾಹೇಬರು ದೊರೆಗಳ ಸಂಗಡ ಹೇಳಿದ್ದು:— "ನಾವು ಇಲ್ಲಿಂದ ತಲಚೇರಿಗೆ ಹೋಗಿ ಇಂಗ್ರೇಜಿ ಬಹದ್ದರವರ ಸರಕಾರದ ಪವುಜು ಯಾವತ್ತು ಅಲ್ಲಿ ಮಡಗಿ ಬೊಂಬಾಯಿಗೆ ಹೋಗುತ್ತೇವೆ. ಆ ಬಳಿಕ ಅವಲ್ ಮೋಸಮ್ಮಿಗೆ ಪುನಶ್ಚ ಬೊಂಬಾಯಿಂದ ಈ ಕಡೆಗೆ ಬರುತ್ತೇವೆ. ಈಗ ಕೆಲವು ಜಂಗಿ ಸಾಮಾನು, ಪಿರಂಗಿ, ಗುಂಡು, ಮದ್ದು ತಮ್ಮ ತಾಬೆಗೆ ಕೊಡುತ್ತೇವೆ. ಆರು ತಿಂಗಳು ಪರಿಯಂತರ ತಾವು ನಾಲ್ಕು ಕಡೆಯಿಂದ ರಸ್ತಿನ ಸಾಮಾನು ಮುಂತಾಗಿ ಹೇರಾಳವಾಗಿ ಪ್ರಯತ್ನದಿಂದ ತರಿಸಿ ಜಮಾಯಿಸಬೇಕು. [ಇದಲ್ಲದೆ ಕೆಲವು ಕೈತವರ್ತಕರು ರಸ್ತಿನ ಸಾಮಾನು ವಗೈರೆ ಟೀಪೂಸುಲ್ತಾನರ ದಂಡಿಗೆ ಸಾಗಿಸುತ್ತಾರೆ. ಅವರಿಗೆ ತಾವು ತಕರಾರಿಸಿಂದ ಈ ಕಡೆಗೆ ತಿರುಗಿಸಿಕೊಂಡು, ಅವರು ಟೀಪೂಸುಲ್ತಾನರ ದಂಡಿನಲ್ಲಿ ದಿನಸು ಮಾರುವ ಕ್ರಯಕ್ಕಿಂತಲು ಹೆಚ್ಚು ಕ್ರಯ ಕೊಡಿಸಿ ರಸ್ತಿನ ಸಾಮಾನು ಜಮಾಯಿಸಬೇಕು.] = ಈ ಬಗ್ಗೆ ಬೇಕಾದಷ್ಟು ದ್ರವ್ಯ ಕುಂಪಣಿ ಸರಕಾರದಿಂದ ಕೊಡಿಸುತ್ತೇವೆ."— ಎಂಬದಾಗಿ ಹೇಳಿದಲ್ಲಿ, ಆ ಮಾತಿಗೆ ರಾಜರು ಹೇಳಿದ್ದು:— "ಈಗ ರಸ್ತಿನ ಸಾಮಾನದ ಕ್ರಯಕ್ಕೆ ತಾವು ಹಣ ಕೊಡ ಕೆಲಸವಿಲ್ಲ. ತಾವು ಹೇಳಿದ ಪ್ರಕಾರ ಟೀಪೂಸುಲ್ತಾನರ ದಂಡಿಗೆ ರಸ್ತು ಸಾಮಾನು ತಲುಪಿಸುವಂತಾ ಕೈತವರ್ತಕರನ್ನು ಈ ಕಡೆಗೆ ಮಾಡಿಕೊಂಡು, ಕ್ರಯಮೂಲವಾಗಿ ಸಿಕ್ಕಿದಷ್ಟು ಸಾಮಾನಿಗೆ ಕ್ರಯವನ್ನು ನಮ್ಮ ಕಯ್ಯಿಂದ ಕೊಟ್ಟು, ಆ ಸಾಮಾನು ಜಮಾಯಿಸುತ್ತೇವೆ. ಸಾಮಾನದ ಕ್ರಯಕ್ಕೆ ನಮ್ಮಲ್ಲಿರುವ ಹಣ ಸಾಲದೆ ಹೋದರೆ, ತಮಗೆ ಕಾಗದ ಬರೆದು ಕಳುಹಿಸಿ, ಸಾಮಾನದ ಕ್ರಯದ ಬಗ್ಗೆ ಹಣ ತರಿಸಿಕೊಂಡು, ಸಾಮಾನು ರಸ್ತು ಜಮಾಯಿಸಿ ಮಡಗುವೆವು.'— ಎಂತ ಹೇಳಿದರು. ಆ ಬಳಿಕ ಆ ಜನರಲ್ ಸಾಹೇಬರವರು ಕೆಲವು ಪಿರಂಗಿ, ಮದ್ದು, ಗುಂಡು, ದವಸ

= ಆವರಣ ಚಿಹ್ನಗಳೊಳಗಣ ಅಂಶವು ಬ. ಪ್ರತಿಯಲ್ಲಿ ಇಲ್ಲ.

ಧಾನ್ಯ ಮುಂತಾದ ಸಾಮಾನವನ್ನು ಜೋಪಾನದಲ್ಲು ಇರಿಸತಕ್ಕ ಬಗ್ಗೆ ವೀರರಾಜೇಂದ್ರ ಒಡೆಯರವರ ವಶಕ್ಕೆ ಕೊಟ್ಟು, ಆ ಜನರಲ್ ಸಾಹೇಬರವರು ಪವುಜು ಸಮೇತ ಕಲಿಸಂದ ೪೮೯೩ ನೇ ವಿರೋಧಿಕೃತು ಸಂವತ್ಸರದ ಜ್ಯೇಷ್ಠಮಾಸದಲ್ಲು ಗಟ್ಟಯಿಳಿದು ತಲಚೇರಿಗೆ ಹೋಗಿ, ಪವುಜು ಯಾವತ್ತೂ ಅಲ್ಲಿ ಬಿಟ್ಟು, ತಾವು ಬೊಂಬಾಯಿಗೆ ಹೋದರು. ರಾಜರು ಆ ಬಗ್ಗೆ ಅನಾಮತ್ತು ಸಾಮಾನು ಯಾವತ್ತೂ ಜೋಪಾನದಲ್ಲಿ ಮಡಗಿಸಿ, ನಾಲ್ಕುನಾಡು ಅರಮನೆಗೆ ಬಂದು; ತಮ್ಮ ಕೊಡಗಿನ ಸೀಮೆಯಲ್ಲು ಸಿಕ್ಕುವಂತಾ ಕೆಲವು ಸಾಮಾನವನ್ನು ಕ್ರಯ ಕೊಟ್ಟು ತರಿಸಿ ಜಮಾಯಿಸುತ್ತ, ಇದಲ್ಲದೆ ಟೀಪೂಸುಲ್ತಾನರ ದಂಡಿಗೆ ರಸ್ತು ತಲಪಿಸುತ್ತಾ ಇದ್ದಂತಾ ರೈತರಿಗೆಲ್ಲ ಭರವಸೆ ಕೊಟ್ಟು ತಮ್ಮ ಕಡೆಗೆ ತಿರುಗಿಸಿಕೊಂಡು, ಅವರು ಹೇಳಿದ ಮೇರೆ ಕ್ರಯ ಕೊಡಿಸಿ, ಆ ಬಗ್ಗೆ ಸಾಮಾನು ಸರಂಜಾಮು ಅವರಿಂದ ತರಿಸಿ ಜಮಾಯಿಸುತ್ತ, ಈ ಕಡೆ ಸಿಕ್ಕದಂತಾ ಸಾಮಾನವನ್ನು ಟೀಪೂಸುಲ್ತಾನರ ಸೀಮೆಗೆ ಕೊಡಗು ಮಂದಿಯನ್ನು ಕಳುಹಿಸಿ ಯುದ್ಧಮುಖದಲ್ಲಿ ಪ್ರಾಣಪ್ರಯತ್ನದಲ್ಲಿ ತರಿಸುತ್ತ, ಮಳೆಗಾಲ ಆರು ತಿಂಗಳ ಪರಿಯಂತರ ಈ ಮೂರು ವಿಧದಿಂದ ಸಾಮಾನು ತರಿಸುವ ಬಗ್ಗೆ ಪ್ರಯತ್ನಪಟ್ಟು ಜಮಾಯಿಸುತ್ತ ಇದ್ದರು.

ಆಬಳಿಕ ಮಾರ್ಗಶಿರ ಮಾಸದಲ್ಲಿ ಮೇಜರ್ ಜನರಲ್ ರಾಬರ್ಟ್ ಅಬ್ರಕರಂಬಿ ಸಾಹೇಬರವರು ಜಂಗಿ ಸಾಮಾನು ಸರಂಜಾಮು ವಗೈರೆ ಸಾಗಿಸಿಕೊಂಡು ಬೊಂಬಾಯಿಂದ ತಲಚೇರಿಗೆ ಬಂದು, ಅಲ್ಲಿದ್ದ ಲಷ್ಕರ್ ಸಮೇತ ಬಂದು, ಪ್ರಾಕು ಇಳಿದು ಇದ್ದಂಥ ಹೆಗ್ಗಳದ ಗಟ್ಟದ ಮೇಲೆ ಇಳಕೊಂಡು, ಆ ವಿವರವನ್ನು ವೀರರಾಜೇಂದ್ರ ಒಡೆಯರ ಬಳಿಗೆ ಬರೆಸಿ ಕಳುಹಿಸಿದಲ್ಲಿ, ರಾಜರು ಹೋಗಿ ಆ ಜನರಲ್ ಸಾಹೇಬರ(ನ್ನು) ಕಂಡು ಭೇಟಿಯಾಗಿ, ಸಂತೋಷಪಟ್ಟು, ಮೊದಲು ಅನಾಮತ್ತಾಗಿ ದೊರೆಗಳ ವಶದಲ್ಲಿ ಇಟ್ಟು ಇದ್ದಂತಾ ಜಂಗಿ ಸಾಮಾನು, ಪಿರಂಗಿ ಮುಂತಾದ್ದನ್ನು ಪುನಃ ಅವರಿಗೆ ಕೊಟ್ಟಲ್ಲಿ, ಅವರುಃ—“ಎರಡು ತಿಂಗಳ ತನಕ ಮೊಕ್ಕಾಂ ಮಾಡುತ್ತ ಇದ್ದೇವೆ. ಲಷ್ಕರಿನ ಖರ್ಚಿನ ಬಗ್ಗೆ ತಮ್ಮ ಕಡೆಯಿಂದ ಐದು ಲಕ್ಷ ಡಂಗಾಳಿ ಅಕ್ಕಿ ಕೊಡಿಸಬೇಕು”— ಎಂಬದಾಗಿ ಹೇಳಿದಲ್ಲಿ “ಏನು ಬಗೆಯಿಂದಾದರೂ ನಾಲ್ಕು ಕಡೆಯಿಂದ ತರಿಸಿಕೊಡುತ್ತೇವೆ”— ಎಂಬದಾಗಿ

ಮಹಾರಾಜರು ಹೇಳಿ, ಅದೇ ಮೇರೆ [ನಾನಾ ಕಡೆ]* ಯಿಂದ ಆಡು ಕುರಿ ಮುಂತಾದ ರಾತೀಪಿನ ಸಾಮಾನು ಹೇರಳವಾಗಿ ತರಿಸಿ ಆ ಲಷ್ಕರಿಗೆ ಕೊಡಿಸುತ್ತ, ೫ ಲಕ್ಷ ಡಂಗಾಳಿ ಅಕ್ಕಿಯನ್ನು ಅವರಿಗೆ ಬೇಕಾದ ಹೊತ್ತಿಗೆ ಕೊಡಿಸುವ ಬಗ್ಗೆ ಆಳಿಸಿ ಜೋಪಾನದಲ್ಲು ಮಾಡಗಿಸಿ ಈ ಮೇರೆ ಇರುವಲ್ಲಿ, ಟೀಪುಸುಲ್ತಾನರು ಖಾದರಖಾನ ಕೇಸ [ರಿ] × ಸಂಗಡ ಹೇಳಿದ್ದು:—"ನಿನ್ನ ಮೇಲೆ ಕೊಡಗಿನ ರಾಜರ ಬಹಾಳ ಮೆಹರ್ಬಾನಿ ಇದೆ. ಮೊದಲು ನೀನು ಅವರ ಕೈಗೆ ಸಿಕ್ಕಿದಾಗ್ಗೆ ಪ್ರಾಣವುಳಿಸಿ ನಿನ್ನನ್ನು ಈ ಕಡೆಗೆ ಬಿಟ್ಟು ಕಳುಹಿಸಿ ಇದ್ದರು. ಈಗ ನಿನ್ನ ಮುಖಾಂತರದಿಂದ ಅವರ ಸ್ನೇಹ ಮಾಡಗಬೇಕು. ಈ ಬಗ್ಗೆ ನಿನಗೆ ಹಿತಭಾರಿಯಾಗಿರುವಂತಾ ಮನುಷ್ಯನನ್ನು ಕರಕೊಂಡು ಬಾ" ಎಂದು ಹೇಳಿದಲ್ಲಿ, ಆ ಖಾದರ್ ಖಾನನು ತನಗೆ ಆಪ್ತರಾದಂತಾ ಜನರ(ನ್ನು) ಟೀಪೂ ಸುಲ್ತಾನರ ಬಳಿಗೆ ಕರಕೊಂಡು ಹೋಗಿ ಒಪ್ಪಿಸಿದಲ್ಲಿ, ಆ ಟೀಪೂಸುಲ್ತಾನರು ತಮ್ಮ ಕಡೆಯಿಂದ ಒಂದು ಕಾಗದ, ಮೀರಸಾದಕರವರದು ಒಂದು ಕಾಗದ, ಪೂರ್ಣಯ್ಯನವರ ಕಡೆಯಿಂದ ಒಂದು ಕಾಗದ ಸಹ ದೋಸ್ತಿ ಮಾಡಗುವ ಬಗ್ಗೆ ನಂಬಿಗೆ ಭಾಷೆ ಹಾಕಿ ಬರೆಸಿ ಆ ಕಾಗದ ಖಾದರಖಾನನ ಕಡೆ ಬಲೆ ಅದ್ಮಿ ಹರಿಕಾರ ಡಲಾಯತ ಸಹ ಆಯಿದು ಜನರ ಸಂಗಡ ವೀರರಾಜೇಂದ್ರ ಒಡೆಯರ ಬಳಿಗೆ ಕಳುಹಿಸಿದ್ದರಿಂದ, ಆ ಜನವು ಕೊಡಗಿನ ಸೀಮೆ ಸರಹದ್ದಿಗೆ ಬಂದಲ್ಲಿ, ಅಲ್ಲಿ ಇದ್ದ ಪಾರಾಡವರು ಆ ಕಾಗದಗಳ ಸಮೇತ ಆ ಜನರನ್ನು ರಾಜರ ಬಳಿಗೆ ಕರತಂದಲ್ಲಿ, ಆ ಖಾದರಖಾನನ ಕಡೆ [ಬಲೆ] = ಅದ್ಮಿಯು ತಾನು ತಂದಂಥ ಕಾಗದಗಳನ್ನು ಒಪ್ಪಿಸಿ,:—" ಮಹಾರಾಜರು ನಮ್ಮ ಸ್ನೇಹದಿಂದ ಮುಖ ತಿರುಗಿಸಿ ಇಂಗ್ರೇಜಿಯವರ ಸಂಗಡ ಕೂಡಿ ಇದ್ದೀರಿ ನಾವು ಸಮೀಪದಲ್ಲಿ ಇರುವಂತಾವರು. ನಮ್ಮನ್ನು ದೂರಮಾಡಿ, ದೂರ ದೇಶದವರ ಸಂಗಡ ದೋಸ್ತಿ ಇಟ್ಟು ಇದ್ದೀರಿ ಕಷ್ಟ ಕಾಲಕ್ಕೆ ಸಮೀಪದವರು ಹೊರತು ದೂರದೇಶದವರ ಸ್ನೇಹ ಕೆಲಸಕ್ಕೆ ಬಾರದು. ಹೇಗೆಂದರೆ, ಪ್ರಾಕು ಸಂವತ್ಸರದಲ್ಲಿ ಇಂಗ್ರೇಜಿಯವರು ತಮ್ಮನ್ನು ಕರೆದುಕೊಂಡು

---

* ಬ ನಾಲ್ಕು ಕಡೆ ಸೀಮೆ

× ಬ ಗಿ

= ಬ ಮರ್ದ

ದಂಡುಸಮೇತ ಪಿರಿಯಾಪಟ್ಟಣಕ್ಕೆ ಬಂದು ಇದ್ದು ಪುನಃ ಹೋಗುವಾಗ್ಗೆ ತಮ್ಮನ್ನು ಕೊಡಗಿನಲ್ಲಿ ಬಿಟ್ಟು ದಂಡು ಸಮೇತ ಅವರು ಗಟ್ಟಯಿಳಿದು ಹೋದರು. ಆ ಸಮಯದಲ್ಲಿ ನಾವು ದಂಡು ತೆಗೆದುಕೊಂಡು ಕೊಡಗಿನ ಸೀಮೆ ನುಗ್ಗಿ ಲೂಟಿ ಮಾಡಿ ಇದ್ದರೆ, ಇಂಗ್ರೇಜಿಯವರ ಸಹಾಯ ಯಾವ ಮೇರೆಗೆ ಆಗುತ್ತಿತ್ತು? ಈಗ ಬಿದ್ದಿರುವ ನ್ಯಾಯ ತೀರಿದ ಬಳಿಕ ಅದೇ ಮೇರೆ ಇಂಗ್ರೇಜಿಯವರು ತಮ್ಮನ್ನು ತಮ್ಮ ಸೀಮೆಯಲ್ಲಿ ಬಿಟ್ಟು, ಅವರು ಅವರ ಸೀಮೆಗೆ ಹೋಗುತ್ತಾರೆ. ಇಷ್ಟು ಸಮೀಪದಲ್ಲಿ ಇದ್ದು ನಮ್ಮ ಸಂಗಡ ವಿರುದ್ಧ ಮಾಡಿಕೊಂಡು ತಾವು ನಿರ್ವಾಹವಮಾಡತಕ್ಕದ್ದು ಹೇಗೆ? ಇಂದಿನ ವರೆಗೆ ತಮ್ಮನಮ್ಮೊಳಗೆ ಇದ್ದಂತಾ ಶತ್ರುತ್ವವನ್ನು ಮರೆತು ಬಿಟ್ಟು, ಇನ್ನು ಮುಂದೆ ನಮಗೆ ಬಂದಂತಾ ಕಷ್ಟವೇ ತಮ್ಮದು ಎಂಬದಾಗಿ ಭಾವಿಸಿ, ಉಭಯ ಕಡೆಯಿಂದಲೂ ಭೇದ ಕಾಣದೆ ಏಕೀಕರವಾಗಿ ಸ್ನೇಹ ಸಾರೋದ್ಧಾರವಾಗಿ ನಡೆದು ಬರುವ ಬಗ್ಗೆ ತಾವು ಕೇಳಿದ ನಂಬಿಗೆ ಭಾಷೆ ನಾವು ಬರೆದುಕೊಡುತ್ತ ಇದ್ದೇವೆ. ಅದೇ ಮೇರೆ ನಾವು ಕೇಳಿದ ಹಾಗೆ ತಾವು ಮಾಡಿಕೊಡಬೇಕು ಆ ಬಳಿಕ ಬೊಂಬಾಯಿಂದ ಬಂದು ಹೆಗ್ಗಳದ ಗಟ್ಟದ ಮೇಲೆ ಇಳಿದು ಇರುವ ಇಂಗ್ರೇಜಿಯವರ ಪವುಜನ್ನು ಘಾತ ಮಾಡುವ ಬಗ್ಗೆ ಒಪ್ಪಿಗೆ ಆದರೆ, ಮೀರ ಕಮುರ್ದ್ದೀನನನ್ನು ಭಾರಿ ಪವುಜು ಸಮೇತ ತಮ್ಮ ಬಳಿಗೆ ಕಳುಹಿಸಿಕೊಡುತ್ತ ಇದ್ದೇವೆ. ಆ ಬಳಿಕ ಗಟ್ಟದ ಮಾರ್ಗ, ಚಿಲ್ಲರೆ ಮಾರ್ಗಗಳ(ನ್ನು) ಯಾವತ್ತೂ ಬಂದು ಮಾಡಿ, ಇಂಗ್ರೇಜಿಯವರ ಪವುಜಿನ ಮೇಲೆ ಬಿದ್ದು ಮುಳುಗಿಸಿದರೆ, ತಮ್ಮ ಸೀಮೆ ಸರಹದ್ದಿನ ಸಮೀಪದ ಹೆಗ್ಗಡದೇವನಕೋಟೆ, ಪಿರಿಯಾಪಟ್ಟಣ, ಬೆಟ್ಟದಪುರ, ಕೊಣನೂರು, ಅರಕಲಗೂಡು ಮುಂತಾದ ತಾಲೂಕುಗಳನ್ನು ಕೊಡುತ್ತ ಇದ್ದೇವೆ—" ಎಂಬದಾಗಿ ಬಾಯಿಮಾತಿನಿಂದ ಹೇಳಿದನು. ಕಾಗದದಲ್ಲೂ ಇದೇ ವಿವರವಾಗಿ ಬರೆದು ಇತ್ತು. ಈ ವಿವರವನ್ನು ಮಹಾರಾಜರು ತಿಳಕೊಂಡು, ಹೆಗ್ಗಳಕ್ಕೆ ಹೋಗಿ ಆ ಕಾಗದವನ್ನು ಜನರಲ್ ಸಾಹೇಬರ ಕಯ್ಯಲ್ಲಿ ಕೊಟ್ಟು ಬಾಯಿಮಾತಿನಿಂದ ಕೇಳಿದ ವಿವರವನ್ನು ಹೇಳಿದಲ್ಲಿ,—" ಟೀಪೂಸುಲ್ತಾನರ ಮಾತಿನ ಮೇಲೆ ತಾವು ನಮಗೆ ದಗಾ ಮಾಡಲಿಕ್ಕೆ ಇಲ್ಲ. ತಮಗೆ ನಮಗೆ ಭೇದವಿಲ್ಲ ಎಂದು ನಾವು ಬಹಳ ನಂಬಿಕೊಂಡು ಇಲ್ಲಿಗೆ ಬಂದು ಇದ್ದೇವೆ. ತಮ್ಮ ನಮ್ಮ

ಕಷ್ಟ ಸುಖ ಒಂದೇ ಸರಿ—" ಎಂಬುದಾಗಿ ಜನರಲ್‌ಸಾಹೇಬರವರು ಹೇಳಿದರು. ಆ ಬಳಿಕ ಆ ಜನರಲ್‌ಸಾಹೇಬರ ಸಂಗಡ [ಮತಲಾಪು] † ಮಾಡಿ ಟೀಪೂಸುಲ್ತಾನರಿಗೆ ಜವಾಬು ಬರೆದ ವಿವರಃ—"ಪ್ರಾಕು ತಾವು ಇಂಥಾ ನಂಬಿಕೆ ಭಾಷೆಯಿಂದ ನಮ್ಮ ಸೀಮೆ ಒಡನೆ ಸರ್ವಸ್ವವನ್ನೂ ಅಪಹರಿಸಿಕೊಂಡು ಕರಾಬುಮಾಡಿ ಇದ್ದೀರಿ. ಮಹಾದೇವನು ನಮಗೆ ಕೊಟ್ಟು ಇರುವಂತಾ ಒಂದು ನಾಲಿಗೆಯನ್ನು ಇಂಗ್ರೇಜಿಯವರ ಸರ್ಕಾರದ ಸ್ನೇಹ ಮಾಡುವಾಗ್ಗೆ ಅವರಿಗೆ ಕೊಟ್ಟು ಇದ್ದೇವೆ. ಈಗ ನಿಮಗೆ ಕೊಡುವ ಬಗ್ಗೆ ನಿಮ್ಮಂತೆ ಎರಡು ನಾಲಿಗೆ ನಮಗೆ ಇಲ್ಲ"—ಎಂಬದಾಗಿ ಬರೆಸಿ, ಆ ಜನರಲ್‌ಸಾಹೇಬರವರಿಗೆ ತೋರಿಸಿ, ಆ ಕಾಗದಗಳ (ನ್ನು) [ತಮ್ಮ] || ಮನುಷ್ಯರ ಕಯ್ಯಲ್ಲಿ ಕೊಟ್ಟು ಕಳುಹಿಸಿ ಬಿಟ್ಟರು.

ಆಬಳಿಕ ಮಾಘಮಾಸದಲ್ಲಿ ಜನರಲ್ ಸಾಹೇಬರು ಹೆಚ್ಚಿಗೆ ಇರುವ ಸಿರಂಗಿಗಳು, ಮದ್ದು, ಗುಂಡು ಮುಂತಾನ ಹೆಗ್ಗಳದಲ್ಲು ಇಟ್ಟು, ಆದರ ಕಬರುದಾರಿ ಬಗ್ಗೆ ಒಂದು ಪಟಾಲಂ ಕರ್ನಲ್ [ಪೀತಿ] § ಸಾಹೇಬರ ಸಹ ಮಡಗಿ, ಇವಲ್ಲದೇ—"ಮತ್ತು ಬೇಕಾದಂತಾ ಸಾಮಾನನ್ನು ದೊರೆಗಳು ಕೊಟ್ಟಾರು. ಅದನ್ನು ತೆಗೆದುಕೊಂಡು ರಸೀತಿ ಬರೆಕೊಟ್ಟು ಇನ್ನೂ ಕಲಚೇರಿ ಕಡೆಯಿಂದ ಬರುವಂತಾ ಸಾಮಾನನ್ನು ಬರಮಾಡಿಕೊಂಡು, ಜೋನಾನದಲ್ಲು ಮಡಗಿಕೊಂಡು ಇರಬೇಕು. ಲಷ್ಕರಿನ ಸಂಗಡ ಸಾಗಿಸಿಕೊಂಡು ಹೋಗುವ ರಸ್ತು ಸಾಮಾನು ನಾಲದೆ ಹೋದರೆ ಸಾಮಾನು ಕಳುಹಿಸುವಂತೆ ನಿಮಗೆ ತಿಳಿಸೇವು"— ಎಂದು ಆ ಕರ್ನಲ್ ಸಾಹೇಬರಿಗೆ ತಾಕೀತಿ ಮಾಡಿಸಿ ಆ ಜನರಲ್ ಸಾಹೇಬ ಬಹದ್ದರವರು ಪವುಜು ಸಮೇತ ಬೇಕಾದ ರಸ್ತು ಸಾಮಾನು ಸಾಗಿಸಿಕೊಂಡು ಅಲ್ಲಿಂದ ಹೊರಟು ಬಂದು ಸಿದ್ದಾಪುರದಲ್ಲು ಇಳಕೊಂಡು ಇದ್ದರು. ಅಷ್ಟರಲ್ಲಿ ಬಂಗಾಳದ ಜನರಲ್ ಲಾರ್ಡ್‌ಕಾರ್ನವಾಲಿಸ್ ಸಾಹೇಬ ಬಹದ್ದರವರು ಮದರಾಶಿನ ಜನರಲ್ ಮೇಂಡುಸ್ ಸಾಹೇಬ ಬಹದ್ದರವರು ಭಾರಿ ಪವುಜು ಸಮೇತ, ನಿಜಾಮಲ್ಲಿ ಖಾನರ ಫವುಜು,

---

† ಬ ಮುಸಲತ್ತು

|| ಬ ತಂದ

§ ಬ ಪಿಂಚ್

ಪೇಷ್ವೇರ ಫವುಜು ಸಹಿತವಾಗಿ, ಬೆಂಗಳೂರಿಂದ ಕೂಚಾಗಿ ಶ್ರೀರಂಗ ಪಟ್ಟಣದ ಬಳಿಯಲ್ಲಿ ಬಂದು ಇಳಕೊಂಡರು.

ಆ ಬಳಿಕ ಮೇಜರ್ ಜನರಲ್ ರಾಬರ್ಟ್ಸ ಅಬ್ರಕರಂಬಿ ಸಾಹೇಬ ಬಹದ್ದರವರು ವೀರರಾಜೇಂದ್ರ ಒಡೆಯರ ಸಂಗಡ ಹೇಳಿದ ವಿವರಃ—"ಜನರಲ್ ಲಾರ್ಡ್ಸ ಕಾರ್ನವಾಲಿಸ್ ಸಾಹೇಬ ಬಹದ್ದರವರು, ಜನರಲ್ ಮೇಂಡ್ಸ್ ಸಾಹೇಬ ಬಹದ್ದರವರು ಇಂಗ್ರೇಜಿ ಬಹದ್ದರ ಸರಕಾರದ ಫವುಜು ಸಮೇತ ಹೊರಟು ಬಂದು ಶ್ರೀರಂಗಪಟ್ಟಣದ ಸಮೀಪದಲ್ಲಿ ಇಳಿದು ಇದ್ದಾರೆ. ಅದೇ ಪ್ರಕಾರ ನವಾಬ ನಿಜಾಮುಲ್ಲಿಖಾನರ ಫವುಜು ಪೇಷ್ವೆಯವರ ಫವುಜು ಸಹ ಪಟ್ಟಣದ ಸಮೀಪಕ್ಕೆ ಬಂದರು. ನಾವು ಫವುಜು ಸಮೇತ ಪಟ್ಟಣಕ್ಕೆ ಕೂಚಾಗಿ ಹೋಗುತ್ತೇವೆ. ರಾತೀಪಿನ ಸಾಮಾನು ಅಕ್ಕಿ ಮುಂತಾಗಿ ಕೂಡಿಸಬೇಕೆಂಬುದಾಗಿ ಮೊದಲು ತಮ್ಮ ಸಂಗಡ ಹೇಳಿ ಇದ್ದವಲ್ಲಾ? ಅದನ್ನು ಕೊಡಿಸಬೇಕು"—ಎಂಬದಾಗಿ ಹೇಳಿದಲ್ಲಿ, "ಮೊದಲು ಹೇಳಿದ ಮೇರೆ(ಗೆ) ಐದು ಲಕ್ಷ ಡಂಗಾಳಿ ಅಕ್ಕಿಯನ್ನು ಕೂಡಿಗೆ ಮಾಡಿಸಿ, ಕಿಗ್ಗಟ್ಟುನಾಡು ಮೋತೀಖಾನೆಯಲ್ಲಿ ಜೋಮಾನದಿಂದ ಮಡಗಿ, ಅವಕ್ಕೆ ಒಬ್ಬರನ್ನು ತೈನಾತಿ ಮಾಡಿ ಇಂಗ್ರೇಜಿ ಬಹದ್ದರವರ ದಂಡಿನಿಂದ ಯಾರಾದರೂ ಒಬ್ಬರು ಬಂದು ಅಕ್ಕಿ ಕೇಳಿದರೆ ಅಳೆದು ಕೊಡುವಂತೆ ತಾಕೀತಿ ಮಾಡಿ ಇದ್ದೇವೆ. ಎತ್ತು ಆಳು ಕಳುಹಿಸಿ ಕರಿಸಿಕೊಳ್ಳಬೇಕು"— ಎಂಬದಾಗಿ ಹೇಳಿದಲ್ಲಿ, ಆ ಜನರಲ್ ಸಾಹೇಬ ಬಹದ್ದರವರು ಒಪ್ಪಿ, ಹೇರಿಕೊಂಡು ಬರುವ ಬಣ್ಣಜಯಾಜನ ಕಡೆ ವೆಂಕಟನಾಯಕನ ಸಂಗಡ ಎತ್ತು ಆಳನ್ನು ಕೊಟ್ಟು, ಇದಕ್ಕೊಬ್ಬ ಒಬ್ಬ ಕೇಪ್ತನರನ್ನು ಗೊತ್ತುಮಾಡಿ ಕಳುಹಿಸಿಕೊಟ್ಟಲ್ಲಿ, ಮೋತೀಖಾನೆ ತೈನಾತಿಯಲ್ಲಿ ಇದ್ದ ಕಿಗ್ಗಟ್ಟುನಾಡು ಅಮಲ [ಕೇಟ್ಪೋಳಿ] = ಅಚ್ಚುವಣ್ಣನು ಆ ಅಕ್ಕಿಯನ್ನು ಅಳೆಸಿ ಆ ಕೇಪ್ತನ್ ಸಾಹೇಬರ ವಶಕ್ಕೆ ಕೊಟ್ಟಲ್ಲಿ, ಆ ಎತ್ತುಗಳೆಲ್ಲ ತುಂಬುವಾಗ್ಗೆ—'ಐದು ಲಕ್ಷ ಡಂಗಾಳಿ ಅಕ್ಕಿಯಿಂದ ಅರೆವಾಸಿ ಅಕ್ಕಿ ತುಂಬಿ ಆಯಿತು. ಉಳಿಕೆ ಅಕ್ಕಿ ಸಾಗಿಸಿಕೊಂಡು ಹೋಗುವ ಬಗ್ಗೆ ಎರಡನೇ ಸರ್ತಿ ಬರುತ್ತೇವೆ'—ಎಂಬದಾಗಿ ಹೇಳಿ, ಆ ಕೇಪ್ತನ್‌ಸಾಹೇಬರವರು ಆ ಅಕ್ಕಿಯನ್ನು ಸಾಗಿಸಿಕೊಂಡು ಶಿದ್ದಾಪುರದಲ್ಲಿ ಇಳಿದು ಇದ್ದ ದಂಡಿಗೆ ಕೂಡಿದಲ್ಲಿ, ಬಂಗಾಳದ ಜನರಲ್ ಲಾರ್ಡ್ಸ ಕಾರ್ನವಾಲಿಸ್

= ಬ ಳಟುವಳಿ

ಸಾಹೇಬ ಬಹದ್ದರವರು ಮದರಾಶಿನ ಜನರಲ್ ಮೆಡೋಸ್ ಸಾಹೇಬ ಬಹದ್ದರವರು ಫವುಜು ಸಹ ಕೂಡಿ, ಶ್ರೀರಂಗಪಟ್ಟಣ ಸಮಿಾಪದಲ್ಲು ಇಳಿದು ಇದ್ದಾರೆ. ತಾವು ಬೊಂಬಾಯಿ ಫವುಜು ಸಮೇತ ಬಂದು ಹಾಜರಾಗಬೇಕೆಂತ ದೊಡ್ಡ ದಂಡಿನಿಂದ ಒಬ್ಬರು ಸಾಹೇಬರು ಬರೆದು ಗುಪ್ಪಿನಿಂದ ಕಳುಹಿಸಿದ್ದರಿಂದ, ಅದನ್ನು ಜನರಲ್ ರಾಬರ್ಟ್ ಆಬರಕರಂಬಿ ಸಾಹೇಬರು ನೋಡಿಕೊಂಡು ಆ ಕ್ಷಣವೇ ಬೊಂಬಾಯಿ ದಂಡು ಯಾವತ್ತನ್ನೂ ತೆಗೆದುಕೊಂಡು ಹೊರಟು ಗುಂಡಿಪಟ್ಟಣ ಎಂಬಲ್ಲಿ ಇಳಕೊಂಡರು ಅದೇ ರಾತ್ರಿ ಲಾರ್ಡ್ ಕಾರ್ನವಾಲಿಸ್ ಸಾಹೇಬ ಬಹದ್ದರವರು ಇಂಗ್ರೇಜಿ ಎರಡು ರಿಜಮಿಾಟನ್ನು ಕಗ್ಗೊಲೆ ಒಗ್ಗೆ ಕಳುಹಿಸಿದಲ್ಲಿ, ಆ ಯೆರಡು ರಿಜಮಿಾಟು ನಾಲ್ಕು ಉಕ್ಕಡದ ಒಳಗೆ ಕಿರಂಗೋರಿಂದ ಚಂದಗಾಲು ಪರಿಯಂತರ, ಪಾಲಹಳ್ಳಿಯಿಂದ ಗಂಜಾಮು ಪರಿಯಂತರ ಟೀಪೂ ಸುಲ್ತಾನರ ಪವುಜಿನ ಮೇಲೆ ಬಿದ್ದು ಹೊಡೆದಲ್ಲಿ, ಅವರ ಪವುಜು ಯಾವತ್ತೂ ಮುರಿದು, ರಾತ್ರಿಕಾಲದಲ್ಲಿ ಟೀಪೂ ಸುಲ್ತಾನರ ದಂಡಿನ ಜನರು ತಮ್ಮವರು ಪರವರು ಎಂಬದಾಗಿ ಕಾಣದೆ ತಮ್ಮ ತಮ್ಮ ಒಳಗೆ ಕಡಿದಾಡುತ್ತ, ಈ ನೇರೆ ಬಗೆ ಬಗೆ ಲಡಾಯಿ (ನ್ನು) ತಮ್ಮೊಳಗೆ ಮಾಡಿ, ವ್ಯತವಾಗಿ ಇಂಗ್ರೇಜಿಯವರು ಗಂಜಾಮಿನಲ್ಲಿ ಮುಂತಾಗಿ ಇದ್ದ ಬತ್ತೇರಿಗಳ (ನ್ನು) ತೆಗೆದುಕೊಂಡರು ಉಳಿಕೆ ಟೀಪೂ ಸುಲ್ತಾನರ ದಂಡಿನ ಮಂದಿ [ಛಲಿದು] * ಎರಡು ಮೂರು ದಿವಸದ ಮೇಲೆ ಜಮ ಆಗಿ, ಕೋಟೆ ಆಶ್ರಯ ಹಿಡಿದು ಇಳಕೊಂಡರು. ಅದೇ ದಿವಸ ಶ್ಯಾಕು ಟೀಪೂ ಸುಲ್ತಾನರು ಮೋಸದಿಂದ ಹಿಡಿದುಕೊಂಡು ಹೋಗಿ [ಜೆಲ್ಲಿ] = ಮಾಡಿ [ಕೈದಿನಲ್ಲು] † ಇಟ್ಟುಕೊಂಡು ಇದ್ದಂತಾ ಕೊಡಗರಲ್ಲಿ ೫೦೦೦ ಪರಿಯಂತರ ಕೊಡಗರು ಅದೇ ಸಮಯ ಒಳ್ಳೇದು ಎಂದು ತಿಳಕೊಂಡು, ಕುಟುಂಬ ಮಕ್ಕಳು ಸಮೇತವಾಗಿ ೧೨,೦೦೦ ಜನ ಅವರ ಪೂರ್ವದ ಸ್ಥಳವಾದ ಕೊಡಗಿಗೆ ಬಂದರು.

---

* ಬ ಚಲ್ಲವರಿದು

= ಬ ಚೇಲೆಯರ

† ಬ ಚಾಕರಿಯಲ್ಲು

ಆ ಮೂರನೆ ದಿವಸ ಲಾರ್ಡ ಕಾರ್ನ ವಾಲಿಸ್ ಸಾಹೇಬರವರು ಜನರಲ್ ಮೆಂಡೂಸ್ ಸಾಹೇಬರು ಸಹ ಲಾಲಬಾಗಿನಿಂದ ದರ್ಯಾದೌಲತ್ ಬಾಗ್ ಪರಿಯಂತರ ತಮ್ಮ ದಂಡನ್ನು ಇಳಿಸಿ, ಮೋರ್ಚೆ ಹಾಕುವ ಬಗ್ಗೆ ಪ್ರಾರಂಭ ಮಾಡಿದರು. ಅದೇ ಮೇರೆ ಶಿರಂಗೂರು ಕಡೆಯಿಂದಲೂ ಮೋರ್ಚಾ ಹಾಕಿಸುತ್ತ ಇದ್ದರು. ಅವಾಗ್ಗೆ ಮೇಜರ್ ಜನರಲ್ ರಾಬರ್ಟ್ಸ ಅಬ್ರಕರಂಬಿಸಾಹೇಬರು ಕೊಡಗಿನ ರಾಜರ ಸಂಗಡ ಹೇಳಿದ ವಿವರಃ- "ನಾವು ಫವುಜು ಸಮೇತ ೨೦ ದಿವಸದ ಕರ್ಚಿಗೆ ಬೇಕಾದ ರಾಕೀಬು ಸಾಮಾನು ತೆಗೆದುಕೊಂಡು ಪಟ್ಟಣಕ್ಕೆ ಹೋಗುತ್ತೇವೆ. ಇದು ಮುಗಿದ ಮೇಲೆ ೩೦,೦೦೦ ಸಾವಿರ ಪರಿಯಂತರ ಎತ್ತು ಫವುಜು ಸಹ ಕೂಡಿಸಿ ತಮ್ಮ ಬಳಿಗೆ ಕಳುಹಿಸುತ್ತೇವೆ. ಆದುದರಿಂದ ತಾವು ತಮ್ಮ ಅರಮನೆಗೆ ಹೋಗಿ ಈಗ ಜಮಾಯಿಸಿರುವ ಸಾಮಾನು ಅಲ್ಲದೆ ನಾಲ್ಕು ಕಡೆಯಿಂದ ಸಾಮಾನು ಸರಂಜಾಮು ಲಷ್ಕರಿನ ಕರ್ಚಿನ ಬಗ್ಗೆ ಕ್ರಯಮೂಲಕವಾಗಿ ಜಮಾಯಿಸಿ, ಅದು ಯಾವತ್ತನ್ನೂ ಕರ್ನಲ್ ಪಿಂಚ್ ಸಾಹೇಬರ ವಶಕ್ಕೆ ಕೊಟ್ಟು, ಅದಕ್ಕೆ ರಶೀತಿತೆಗೆದುಕೊಳ್ಳುವುದು. ಇದಲ್ಲದೆ ಟೀಪೂ ಸುಲ್ತಾನರ ದಂಡಿಗೆ ರಸ್ತು ಸಾಗುವಂತಾ ನಾಲ್ಕು ಕಡೆ ಮಾರ್ಗಗಳನ್ನು ಇಂಗ್ರೇಜಿಯವರ ಲಷ್ಕರಿನವರು ಪೇಶ್ವೆಯವರ ಲಷ್ಕರಿನವರು ಸಹ ಬಂದುಮಾಡಿ ಇದ್ದಾರೆ. ಇದಲ್ಲದೆ ನಗರದ ಸೀಮೆಯಿಂದ [ವಸ್ತಾರೆ] ‡ ಗಟ್ಟಹತ್ತಿ ರಸ್ತಿನ ಸಾಮಾನು ಟೀಪುಸುಲ್ತಾನರ ದಂಡಿಗೆ ಸಾಗಿಹೋಗುತ್ತ ಇದೆ. ತಮ್ಮ ಕಡೆ ಮಂದಿ ಕಳುಹಿಸಿ ಯುದ್ಧ ಮುಖದಿಂದ ಆ ರಸ್ತನ್ನು ತಮ್ಮ ವಶ ಮಾಡಿಕೊಂಡು, ಕರ್ನಲ್ ಪಿಚ್ ಸಾಹೇಬರವರಿಗೆ ಕೊಡಿಸಬೇಕು"— ಎಂಬದಾಗಿ ಹೇಳಿ, ತಮ್ಮ ಬೊಂಬಾಯಿ ಫವುಜು ಸಮೇತ ಕೂಚ್ ಮಾಡಿ, ಸುಲ್ತಾನಪೇಟೆ ಬಳಿ ಇಳಕೊಂಡರು.

ಮಹಾರಾಜರು ಪುನಃ ಕೊಡಗಿಗೆ ಬಂದು, ಸೀಮೆ ಪಾರುಪತ್ಯಗಾರರ(ನ್ನು) ಯಾವತ್ತೂ ಕರೆಸಿಃ— "ಈಗ ಪಟ್ಟಣದಿಂದ ಕುಟುಂಬ ಮಕ್ಕಳು ಸಹವಾಗಿ ಬಂದಿರುವ ಕೊಡಗು ಜನಕ್ಕೆ ಎರಡು ತಿಂಗಳಿಗೆ ಊಟಕ್ಕೆ ಬೇಕಾದ ಸಾಮಾನು ಅರಮನೆ ತರದಿಂದ ಕೊಟ್ಟು, [illegible]ಕು ಅವರು ಇದ್ದಂತಾ ಆಯಾ ನಾಡುಗಳಲ್ಲಿ ಮನೆ ಕಟ್ಟಿಸಿಕೊಟ್ಟು ಇಳಿಸಿ,

‡ ಬ.— ಅಸ್ತಾರೆ.

ಆರೈಕೆ ಮಾಡುತ್ತ ಇರಿ. ಈಗ ನಗರದ ಸೀಮೆಯಿಂದ ರಸ್ತಿನ ಸಾಮಾನು ವಸ್ತಾರಿ ಮಾರ್ಗವಾಗಿ ಟೀಪುಸುಲ್ತಾನರ ದಂಡಿಗೆ ಸಾಗಿಹೋಗುತ್ತ ಇದೆ. ನಾವು ಕೊಡಗು ಮಂದಿಯನ್ನು ತೆಗೆದುಕೊಂಡು ಅಲ್ಲಿಗೆ ಹೋಗಿ ಆ ಗಟ್ಟದ ಮಾರ್ಗ ಕಟ್ಟಿ ರಸ್ತಿನ ಸಾಮಾನು ತೆಗೆದುಕೊಂಡು ಮತ್ತು ಟೀಪುಸುಲ್ತಾನರ ಸೀಮೆ ಹೊಕ್ಕು ಹೇರಳ ದನಕರು ಸಾಮಾನು ಸಹ ತೆಗೆದುಕೊಂಡು ಅಲ್ಲಿಂದ ಕೆಲವು ದಿವಸದಲ್ಲಿ ಕೊಡಗಿಗೆ ಬರುತ್ತ ಇದ್ದೇವೆ. ಆದರಲ್ಲಿ ದನ ಕರ ಯಾವತ್ತು ಈಗ ಹೊಸದಾಗಿ ಬಂದಿರುವ ರೈತರಿಗೆ ಕೊಡಿಸಿ, ರಸ್ತಿನ ಸಾಮಾನು ಇಂಗ್ರೇಜಿ ಬಹದ್ದರವರ ಸರಕಾರಕ್ಕೆ ಕೊಡಬಹುದು."— ಎಂಬದಾಗಿ ಆ ಪಾರುಪತ್ಯಗಾರರಿಗೆ ತಾಕೀತಿ ಮಾಡಿ, ಅದೇ ಮೇರೆ ದೊರೆಗಳು ಹೇರಳ ಕೊಡಗುಮಂದಿ ತೆಗೆದುಕೊಂಡು ಹೊರಟು † [ಹೊಸದಾಗಿ ಕಟ್ಟಿಕೊಂಡು ಇರುವ] ಐಗೂರು ಸೀಮೆ ತಾಲೂಕಿನ ಅರ[ಕೇರಿ] § ಎಂಬ ಗ್ರಾಮಕ್ಕೆ ಹೋಗಿ ಇಳಕೊಂಡು ಅಲ್ಲಿಂದ ಐದು ಸಾವಿರ ಜನ ಕೊಡಗರನ್ನು ಆ ರಸ್ತು ತೆಗೆದುಕೊಂಡು ಬರುವ ಬಗ್ಗೆ ವಸ್ತಾರಿ ಗಟ್ಟಕ್ಕೆ ಕಳುಹಿಸಿದಲ್ಲಿ, ಆ ಕೊಡಗರು ಅದೇ ಅಪ್ಪಣೆ ಮೇರೆ ವಸ್ತಾರಿ ಗಟ್ಟದ ಮಾರ್ಗವನ್ನು ಕಟ್ಟಿ ರಸ್ತು ಬರುವಂತಾ ದಾರಿನೋಡುತ್ತ ಇದ್ದಲ್ಲಿ, ಆ ಬಗೆ ರಸ್ತು ಬಂದು ಗಟ್ಟಕ್ಕೆ ತಲುಪಿದಲ್ಲಿ, ಆ ಕೊಡಗುಮಂದಿಯು ನಾಲ್ಕು ಕಡೆಯಿಂದ ಮುತ್ತಿ ಆ ರಸ್ತಿನ ಎತ್ತುಗಳನ್ನು ಅದರ ಸಂಗಡ ಇದ್ದ ಲಂಬಾಣಿಗರನ್ನು ಸಹ ಹಿಡಿದುಕೊಂಡು ಬರುವಾಗ್ಗೆ, ವಸ್ತಾರಿ ಸೀಮೆಯನ್ನೂ ಲೂಟಿಮಾಡಿ, ಸಾಮಾನು, ದನಕರು ಮುಂತಾಗಿ ಹಿಡಿದುಕೊಂಡು, ಯಾವತ್ತು ರಸ್ತಿನ ಸಾಮಾನು ಎತ್ತುಗಳು ದನಕರು ಮುಂತಾಗಿ ದೊರೆಗಳ ಬಳಿಗೆ ಕಳುಹಿಸಿಬಿಟ್ಟು, ಆ ಕೊಡಗು ಮಂದಿಯು ಆ ಕಡೆ ಸೀಮೆಯಲ್ಲಿ ಲೂಟಿ ಮಾಡಿಕೊಂಡು ಅಲ್ಲಿಯೇ ಇರುತ್ತಿದ್ದಲ್ಲಿ, ಮಹಾರಾಜರವರು ಇಂಗ್ರೇಜಿ ಬಹದ್ದರವರ ಲಷ್ಕರಿಗೆ ಬೇಕಾದ ಸಾಮಾನನ್ನು ಆರಿಸಿ ಕರ್ನಲ್ ಪಿಚ್ ಸಾಹೇಬರವರ ಬಳಿಗೆ ಸಾಗಿಸುತ್ತ, ಉಳಿಕೆ ಸಾಮಾನು, ದನ ಕರ, ಕಬ್ಬಿಣ, ಬಟ್ಟೆಬರೆ, ದವಸಧಾನ್ಯ ಮುಂತಾಗಿ ನಾಡುಗಳ ಪಾರುಪತ್ಯಗಾರರ ವಶಕ್ಕೆ ಕೊಟ್ಟು, ಹೊಸದಾಗಿ ಬಂದಂತಾ

---

† ಈ ಮಾತುಗಳು ಬ. ಪ್ರತಿಯಲ್ಲಿ ಇಲ್ಲ.

§ ಬ— ಕೆರೆ.

ರೈತರಿಗೆ ಅವರವರ ತರವರಿತು ಆ ಯಾವತ್ತು ಸಾಮಾನು, ದನಕರು ಮುಂತಾದ್ದನ್ನು ಹಂಚಿಕೊಡಿಸುತ್ತ ಇದ್ದರು.

ಅತ್ತಲಾಗಿ ಟೀಪೂ ಸುಲ್ತಾನರು ತಮ್ಮ ಕೆಲವು ಫವುಜನ್ನು ಸುಲ್ತಾನ ಪೇಟೆಯಲ್ಲು ಇಳಿದು ಇದ್ದ ಬೊಂಬಾಯಿ ಪವುಜಿನ ಸಂಗಡ ಜಗಳ ಮಾಡತಕ್ಕ ಬಗ್ಗೆ ಕಳುಹಿಸಿದಲ್ಲಿ ಆ ಸುಲ್ತಾನರ ಕಡೆ ಮಂದಿಯು ಇಂಗ್ರೇಜಿ ಬಹದ್ದರವರ ಪವುಜಿನ ಸಂಗಡ ಜಗಳ ಮಾಡಿದಲ್ಲಿ, ಅವರ ಪವುಜಿಗೆ ಬಹಳ ಪೆಟ್ಟಾಗಿ ಹೇರಳ ಜನರು ಮೃತವಾಗಿ ಜಕಮಿ ಆಗಿ, ಕಡೆಗೆ ಇದುರಿಗೆ ನಿಲ್ಲಲಾರದೆ ಚಲ್ಲಾಪಿಲ್ಲಿ ಆದ್ದರಿಂದ, ಟೀಪೂ ಸುಲ್ತಾನರು ಎಲ್ಲಾ ಬಗೆಯಿಂದಲೂ ಆಜಾರಾಗಿ, ಗುಲಾಮಲ್ಲಿಖಾನನನ್ನು ನವಾಬ್ ಲಾರ್ಡ್ಡ ಕಾರನ್‌ವಾಲಿಸ್ ಸಾಹೇಬ ಬಹದ್ದರವರ ಬಳಿಗೆ ಸಲ್ಲಾ ಮಾಡುವ ಬಗ್ಗೆ ಹೇಳಿಕಳುಹಿಸಿದಲ್ಲಿ, ಆ ನವಾಬ್ ಲಾರ್ಡ್ಡ ಕಾರನ್‌ವಾಲಿಸ್ ಸಾಹೇಬರವರು ಹೇಳಿದ್ದು:— "ಟೀಪೂ ಸುಲ್ತಾನರು ಮಾಡಬಾರದಂತಾ ಕೆಲವು ತುಂಟತನ ಮಾಡಿದ್ದರಿಂದ, ಅವರ ಪಟ್ಟಣವನ್ನು ತೆಗೆದುಕೊಳ್ಳಬೇಕೆಂಬದಾಗಿ ಹೇರಳ ದ್ರವ್ಯ ವೆಚ್ಚಮಾಡಿ ಬಂದು ಇದ್ದೇವೆ. ಆದ್ದರಿಂದ ಈ ಮೂರು ಸಂಸ್ಥಾನದವರಿಗೆ ಮೂರು ಕೋಟಿ ರೂಪಾಯಿಯನ್ನು ಕೊಟ್ಟು ಮೊಕರರೂರು ಮಾಡಿ ಇರುವ ಮೇರೆ ಕೆಲವು ಸೀಮೆಯನ್ನು ಬಿಟ್ಟುಕೊಟ್ಟರೆ, ನಾವು ಕಟ್ಟಿಕೊಂಡು ಇರುವಂತಾ ಬೆಂಗಳೂರು ಮುಂತಾದ ಅವರ ಸೀಮೆಯನ್ನು ಬಿಟ್ಟುಕೊಟ್ಟು, ನಮ್ಮ ವಿಲಾಯತಿಗಳಿಗೆ ಹೋಗುತ್ತೇವೆ." ಎಂಬದಾಗಿ ಹೇಳಿದಲ್ಲಿ, ಈ ಮಾತು ಕೇಳಿ ಗುಲಾಮಲ್ಲೀಖಾನನು ಪುನಃ ಬಂದು ಉಭಯ ಕಡೆಯಿಂದ ನಡೆದ ಸಲ್ಲಾದ ಮಾತುಗಳ ಟೀಪೂ ಸುಲ್ತಾನರಿಗೆ ಜಾಹೀರು ಮಾಡಿದಲ್ಲಿ, ಅವರು ಒಡಂಬಟ್ಟು, ಆ ಬಳಿಕ ಮೂರು ಸಂಸ್ಥಾನದವರೂ ಒಪ್ಪಿ ಕುಷಿಯಿಂದ ನಂಬಿಗೆ ಭಾಷೆಯಿಂದ ನಿಶ್ಚಯಿಸಿದ ಮೇರೆ ಕರಾರುನಾಮೆಗಳನ್ನು ಮೊಕರರೂರು ಮಾಡಿ ಮೂರು ಸಂಸ್ಥಾನದಲ್ಲು ಮಡಗಿದರು. ಟೀಪೂ ಸುಲ್ತಾನರು ಮೂರು ಸಂಸ್ಥಾನದವರಿಗೂ ಕೊಡತಕ್ಕ ಸೀಮೆಗಳನ್ನು ವಿಂಗಡಿಸಿ ಬಿಟ್ಟು ಕೊಟ್ಟು, ಕೆಲವು ದ್ರವ್ಯವನ್ನು ನಗದು ಕೊಟ್ಟು, ಉಳಿಕೆ ದ್ರವ್ಯದ ಬದಲಿಗೆ ತಮ್ಮ ಇಬ್ಬರು ಮಕ್ಕಳನ್ನು ನವಾಬ್ ಮಾಲಿ ಉಲ್ ಅಲಕಾಬ್ ಲಾರ್ಡ್ಡ ಕಾರ್ನವಾಲಿಸ್ ಸಾಹೇಬ್ ಬಹದ್ದರವರ ವಶಕ್ಕೆ ಕೊಟ್ಟರು. ಆ ಬಳಿಕ

ಬಂಗಾಳದ ಇಂಗ್ರೇಜಿ ಬಹದ್ದೂರರವರ ಫವುಜಿನವರು ಮುಂತಾಗಿ ಬತ್ತೇರಿಗಳ ಮೋರ್ಚೆ ಮೇಲೆ ಏರಿಸಿ ಇದ್ದ ಫಿರಂಗಿಗಳನ್ನು ಇಳಿಸಿದರು. † [ಅಲ್ಲಲ್ಲಿ ಮೋರ್ಚೆಗಳಲ್ಲಿ ಮಡಗಿ ಇದ್ದ ಫವುಜನ್ನು ಜಮಾ ಮಾಡಿದರು.] ಆ ಸಮಯದಲ್ಲಿ ಮೇಜರ್ ಜನರಲ್ ರಾಬರ್ಟ್ಸ ಅಬ್ರಕರಂಬಿ ಸಾಹೇಬ ಬಹದ್ದರವರು ಕರ್ನಲ್ ಜಿಮೂಸ್ ಹಾಟ್ಲೆ ಸಾಹೇಬ ಬಹದ್ದರವರು ಸಹ ಇವರಿಬ್ಬರು ಬೊಂಬಾಯಿ ಸರದಾರರು ನವಾಬ್ ಗೌರ್ನರ್ ಲಾರ್ಡ್ಡು ಕಾರ್ನವಾಲಿಸ್ ಸಾಹೇಬ ಬಹದ್ದರವರ ಬಳಿಗೆ ಹೋಗಿ ಅಲ್ಲಿ ಮೂರು ದಿವಸ ಮೊಕ್ಕಾಂ ಮಾಡಿದಲ್ಲಿ, ಆ ಲಾರ್ಡ್ಡು ಕಾರ್ನವಾಲಿಸ್ ಸಾಹೇಬ ಬಹದ್ದರವರ ಸಂಗಡ ಜನರಲ್ ರಾಬರ್ಟ್ಸ ಅಬ್ರಕರಂಬಿ ಸಾಹೇಬ ಬಹದ್ದರವರು ಹೇಳಿದ ವಿವರಃ- "ಟೇಪ್ರ ಸುಲ್ತಾನರ ಸರಕಾರಕ್ಕು ಇಂಗ್ರೇಜಿ ಬಹದ್ದರವರ ಸರಕಾರಕ್ಕೂ ಸಂಗಡ ಕೂಡಿ ಇರುವ ಸರಕಾರಗಳಿಗೂ ನಂಬಿಕೆ ಭಾಷೆಯಿಂದ ಸಲ್ಲಾ ಮೊಕರರೂರು ಆಗಿ, ಟೇಪು ಸುಲ್ತಾನರ ಕೈಯಿಂದ ಕೆಲವು ದ್ರವ್ಯವನ್ನು ತೆಗೆದುಕೊಂಡು, ಬಾಕಿ ಬರತಕ್ಕ ದ್ರವ್ಯಕ್ಕೆ ಅವರ ಮಕ್ಕಳನ್ನು ತೆಗೆದುಕೊಂಡು, ಬಾಕಿ ದ್ರವ್ಯ ಸಂದ ಬಳಿಕ ಅವರ ಮಕ್ಕಳನ್ನು ಕಳುಹಿಸಿಕೊಡುತ್ತೇವೆ. ಎಂತ ಹೇಳಿ, ಕೆಲವು ಸೀಮೆಯನ್ನು ತೆಗೆದುಕೊಂಡು ತಾವು ಬಂಗಾಳಕ್ಕೆ ಹೋಗುತ್ತೀರಿ. ನಾವು ನಮ್ಮ ದಂಡು ಸಮೇತ ಬೊಂಬಾಯಿಗೆ ಕೊಡಗಿನ ಮಾರ್ಗವಾಗಿ ಹೋಗುತ್ತೇವೆ. ಆವಾಗ್ಗೆ, ಮೊದಲು ಟೇಪು ಸುಲ್ತಾನರ ಮೇಲೆ ಜಗಳಕ್ಕೆ ಪ್ರಾರಂಭವಾಗುವಾಗ್ಗೆ, ನಮ್ಮನ್ನು ತಲಚೆರಿಗೆ ಕರಿಸಿ, ಕೊಡಗಿನ ಸಂಸ್ಥಾನಕ್ಕೂ ಇಂಗ್ರೇಜಿ ಬಹದ್ದರವರ ಸರಕಾರಕ್ಕೂ ಸೂರ್ಯಚಂದ್ರ ಇರುವ ಪರಿಯಂತರ ತಮ್ಮ ಒಳಗೆ ಸ್ನೇಹ ಸಾರೋದ್ಧಾರವಾಗಿ ನಡೆದು ಬರಬೇಕು. ಇದಲ್ಲದೆ ಟೇಪು ಸುಲ್ತಾನರು ಇಂಗ್ರೇಜಿ ಬಹದ್ದರವರ ಸರಕಾರಕ್ಕೂ ಕೊಡಗಿನ ಸಂಸ್ಥಾನಕ್ಕೂ ದೊಡ್ಡ ಶತ್ರುವಾಗಿ ಇದ್ದಾರೆ. ಟೇಪು ಸುಲ್ತಾನರ ಸಂಗಡ ಲಡಾಯಕ್ಕೆ ಇಂಗ್ರೇಜಿ ಬಹದ್ದರವರ ಫವುಜು ಹೋಗುವಾಗ್ಗೆ ಕೊಡಗಿನ ಸೀಮೆಯೊಳಗೆ ಮಾರ್ಗ ಕೊಡಬೇಕು. ಲಷ್ಕರಿಗೆ ಬೇಕಾದಂತಾ ಸಾಮಾನು ಸರಂಜಾಮು ತಮ್ಮ ಕಡೆಯಿಂದ ಕೊಡಿಸಿ ಕೊಡಬೇಕು. ಟೇಪು ಸುಲ್ತಾನರ ಸ್ನೇಹ ಮಡಗ

---

† ಈ ಅಂಶವು ಬ ಪ್ರತಿಯಲ್ಲಿ ಇಲ್ಲ.

ಬಾರದು. ಮತ್ತು ಉಭಯ ಕಡೆಯಿಂದಲೂ ಆ ಸುಲ್ತಾನರ ಮೇಲೆ ಜಗಳ ಮಾಡುವುದಕ್ಕೆ ವರ್ತಿಸಬೇಕು ಒಂದು ಸಮಯದಲ್ಲಿ ಇಂಗ್ರೇಜಿಯವರ ಸರಕಾರಕ್ಕೂ ಟೀಪು ಸುಲ್ತಾನರ ಸರಕಾರಕ್ಕೂ ಸಲ್ಲಾ ಆದರೆ ಮೊದಲು ಕೊಡಗಿನ ಸಂಸ್ಥಾನಕ್ಕೆ ಸಲ್ಲಾ ಮಾಡಿ ಆ ಬಳಿಕ ಇಂಗ್ರೇಜಿಯವರ ಸರಕಾರಕ್ಕೆ ಸಲ್ಲಾ ಮಾಡಿಯೇವು ಎಂಬದಾಗಿ ಈ ಮೇರೆ ಉಭಯ ಕಡೆಯಿಂದ ಕರಾರುನಾಮೆ ಮೊಕರೂರು ಆಗಿ ಇದೆ. ಅದನ್ನು ನಂಬಿ, ನಾವು ನಿಮ್ಮ ಬೊಂಬಾಯಿ ದಂಡು ಹೋಗುವ ಬಗ್ಗೆ ನಮ್ಮ ಸೀಮೆಯಲ್ಲು ಮಾರ್ಗ ಕೊಟ್ಟು, ದಂಡಿಗೆ ಬೇಕಾದ ಸಾಮಾನು ಸರಂಜಾಮು ಪ್ರಾಣಪ್ರಯತ್ನಮಾಡಿ ತರಿಸಿಕೊಟ್ಟು, ಇಂಗ್ರೇಜಿ ಸರಕಾರಕ್ಕೆ ಜಯವಾಗಲಿ ಎಂಬದಾಗಿ ಹಾರೈಸಿಕೊಂಡು ಇದ್ದೆವು. ಅದೇ ಮೇರೆ ಇಂಗ್ರೇಜಿ ಸರಕಾರದ ಲಷ್ಕರು ಶ್ರೀರಂಗಪಟ್ಟಣಕ್ಕೆ ಹೋಗಿ ಟೀಪು ಸುಲ್ತಾನರ ಸಂಗಡ ಲಡಾಯಿ ಮಾಡಿದಲ್ಲಿ ಅವರು ಲಾಚಾರಾಗಿ ನಮ್ಮ ಸಂಗಡ ಸಲ್ಲಾ ಮಾಡಿದ್ದರಿಂದ ಹೇರಾಳ ದ್ರವ್ಯ ಕೆಲವು ಸೀಮೆ ಸಹ ತೆಗೆದುಕೊಂಡು, ಈ ಮೇರೆ ಟೀಪು ಸುಲ್ತಾನರ ಸಂಗಡ ಸ್ನೇಹ ಬೆಳೆಸಿಕೊಂಡು ತಾವು ಹೋಗುತ್ತೀರಿ. ನಾವು ಟೀಪು ಸುಲ್ತಾನರ ಕಡೆಯಿಂದ ಸ್ನೇಹದ ಮುಖ ತಿರುಗಿಸಿ ಇಂಗ್ರೇಜಿಯವರ ದೋಸ್ತಿ ಮಡಗಿದ್ದರಿಂದ ಟೀಪು ಸುಲ್ತಾನರ ಮಾತಿಗೆ ನಾವು ಒಡಂಬಡಲಿಲ್ಲ. ಆದ್ದರಿಂದ ಅವರಿಗೆ ನಾವು ಹೇರಳ ವೈರಿಗಳಾಗಿ ಇದ್ದೇವೆ. ಹೀಗಿರುವಲ್ಲಿ ತಾವು ಟೀಪು ಸುಲ್ತಾನರ ಸಂಗಡ ದೋಸ್ತಿ ನಡತೆ ಕಾಯಂ ಮಾಡಿಕೊಂಡು, ನಮಗೂ ಟೀಪು ಸುಲ್ತಾನರಿಗೂ ಇರುವಂತಾ ವಿರೋಧವನ್ನು ಬೆಳೆಯಿಸಿ, ತಮ್ಮ ವಿಲಾಯತಿಗಳಿಗೆ ಹೋಗುತ್ತೀರಿ. ಇಂಗ್ರೇಜಿಯವರ ಸರ್ಕಾರದ ಸತ್ಯ ಧರ್ಮ ಇದೇ ಮೇರೆ ಇದೆಯೋ?"— ಎಂತ ಈ ವಿವರ ಕೊಡಗಿನ.

ಟೀಪು:— ನಮ್ಮ ಹತ್ತರವಿದ್ದ ಕೈಬರಹದ ಪ್ರತಿಯು ಇಲ್ಲಿಯೇ ಮುಗಿದಿದೆ.